ಕರ್ನಾಟಕ ಸರ್ಕಾರ

# ಸಿರಿ ಕನ್ನಡ

## ಪ್ರಥಮ ಭಾಷೆ ಕನ್ನಡ ಪಠ್ಯಪುಸ್ತಕ

## ಭಾಗ–1

ಅ

@KTBS NOT TO BE REPUBLISHED

## ಎಂಟನೆಯ ತರಗತಿ

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
೬ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–೫೬೦ ೦೦೩.

# ಪಠ್ಯಪುಸ್ತಕ ರಚನಾ ಸಮಿತಿ

## ಅಧ್ಯಕ್ಷರು

**ಡಾ. ಸಿ. ಎಸ್. ರಾಮಚಂದ್ರ,** ಪ್ರಾಧ್ಯಾಪಕ ಮತ್ತು ಮುಖ್ಯಸ್ಥ ಭಾಷಾವಿಜ್ಞಾನ ಅಧ್ಯಯನ ವಿಭಾಗ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ ಮಾನಸಗಂಗೋತ್ರಿ, ಮೈಸೂರು – ೫೭೦ ೦೦೬.

## ಸದಸ್ಯರು

೧. **ಡಾ. ಮುಳುಕುಂಟೆ ರಮೇಶ್,** ಕನ್ನಡಭಾಷಾ ಅಧ್ಯಾಪಕ, ರಾಗೀಗುಡ್ಡ ಪ್ರೌಢಶಾಲೆ ಜಯನಗರ, ಬೆಂಗಳೂರು – ೫೬೦೦೬೯

೨. **ಶ್ರೀ ವಿ. ರಂಗಪ್ಪಯ್ಯ ಹೊಳ್ಳ ,** ಕನ್ನಡಭಾಷಾ ಅಧ್ಯಾಪಕ (ನಿವೃತ್ತ), ಉಡುಪಿ ಜಿಲ್ಲೆ – ೫೭೬೨೨೫

೩. **ಶ್ರೀ ಬಿ. ಬಾಲಕೃಷ್ಣಯ್ಯ,** ಕನ್ನಡಭಾಷಾ ಅಧ್ಯಾಪಕ, ಸರ್ಕಾರಿ ಪ್ರೌಢಶಾಲೆ ಬೋಗಾದಿ, ಮೈಸೂರು –೫೭೦ ೦೨೬

೪. **ಶ್ರೀ ಸಿ. ಬಿ. ವೀರಭದ್ರಾಚಾರಿ ,** ಕನ್ನಡಭಾಷಾ ಅಧ್ಯಾಪಕ ಸರ್ಕಾರಿ ಪದವಿಪೂರ್ವ ಕಾಲೇಜು ಮಾಲೂರು, ತಾ

೫. **ಡಾ. ಸುಂದರ ಕೇನಾಜೆ ,** ಬಿ.ಆರ್.ಪಿ. ಬಿಆರ್‌ಸಿ ಕಚೇರಿ, ಸುಳ್ಯ ದಕ್ಷಿಣಕನ್ನಡ ಜಿಲ್ಲೆ

೬. **ಶ್ರೀ ವಿ. ಕೆ. ವಿಟ್ಲ,** ಚಿತ್ರಕಲಾ ಶಿಕ್ಷಕರು ಸರ್ಕಾರಿ ಪ್ರೌಢಶಾಲೆ, ಗುರುವಾಯನಕೆರೆ ಬೆಳ್ತಂಗಡಿ, ದ.ಕ. ಜಿಲ್ಲೆ.

## ಪರಿಶೀಲಕರು

**ಪ್ರೊ. ಸಾ.ಶಿ. ಮರುಳಯ್ಯ,** ಸಾಹಿತಿಗಳು, 'ರಾಗಿಣಿ', ಹಂಪಿನಗರ, ಬೆಂಗಳೂರು.

## ಸಂಪಾದಕೀಯ ಮಂಡಳಿ ಸದಸ್ಯರು

೧. **ಪ್ರೊ. ಸಾ.ಶಿ. ಮರುಳಯ್ಯ,** ಸಾಹಿತಿಗಳು, 'ರಾಗಿಣಿ', ಹಂಪಿನಗರ, ಬೆಂಗಳೂರು.

೨. **ಪ್ರೊ. ಅ.ರಾ.ಮಿತ್ರ,** ಸಾಹಿತಿಗಳು, ಕೆ.ಎಚ್. ಬಿ. ಕಾಲೋನಿ, ಯಲಹಂಕ, ಬೆಂಗಳೂರು.

೩. **ಡಾ. ವಿಷ್ಣು ಎಂ. ಶಿಂದೆ,** ಸಹಾಯಕ ಪ್ರಾಧ್ಯಾಪಕರು, ಶಿಕ್ಷಣವಿಭಾಗ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ.

## ಮುಖ್ಯ ಸಂಯೋಜಕರು

**ಪ್ರೊ. ಜಿ. ಎಸ್. ಮುಡಂಬಡಿತ್ತಾಯ,** ಪಠ್ಯಕ್ರಮ ಪರಿಷ್ಕರಣೆ ಮತ್ತು ಪಠ್ಯಪುಸ್ತಕ ರಚನೆ. ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು–೫೬೦೦೮೫.

## ಸಲಹೆ ಮತ್ತು ಮಾರ್ಗದರ್ಶನ

೧. **ಶ್ರೀ ನಾಗೇಂದ್ರ ಕುಮಾರ್,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು–೫೬೦೦೮೫

೨. **ಶ್ರೀಮತಿ ಸಿ. ನಾಗಮಣಿ,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು–೫೬೦೦೮೫.

## ಕಾರ್ಯಕ್ರಮ ಸಂಯೋಜಕರು

**ಶ್ರೀ ಪಾಂಡುರಂಗ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು–೫೬೦೦೮೫.

@KTBS NOT TO BE REPUBLISHED

# ಮುನ್ನುಡಿ

೨೦೦೫ ರ ರಾಷ್ಟ್ರೀಯ ಪಠ್ಯಕ್ರಮದ ಆಧಾರದ ಮೇಲೆ ರಚಿತವಾದ ಕರ್ನಾಟಕ ರಾಜ್ಯ ಪಠ್ಯವಸ್ತುವಿಗೆ ಅನುಗುಣವಾಗಿ ಕರ್ನಾಟಕ ಪಠ್ಯಪುಸ್ತಕ ಸಂಘವು ೨೦೧೦ನೆಯ ಸಾಲಿನಿಂದ ಒಂದರಿಂದ ಹತ್ತನೆಯ ತರಗತಿವರೆಗಿನ ಪಠ್ಯಪುಸ್ತಕಗಳ ರಚನಾ ಕಾರ್ಯದಲ್ಲಿ ತೊಡಗಿದೆ. ಒಟ್ಟು ಹನ್ನೆರಡು ಭಾಷೆಗಳಲ್ಲಿ ಭಾಷಾ ಪಠ್ಯಪುಸ್ತಕಗಳನ್ನು ಹಾಗೂ ಏಳು ಮಾಧ್ಯಮಗಳಲ್ಲಿ ಕೋರ್ ವಿಷಯಗಳನ್ನು ರಚನೆ ಮಾಡಲಾಗುತ್ತಿದೆ. ೧ ರಿಂದ ೫ನೇ ತರಗತಿಯವರೆಗೆ ಪರಿಸರ ಅಧ್ಯಯನ ಮತ್ತು ೬ ರಿಂದ ೧೦ನೇ ತರಗತಿಯ ವರೆಗೆ ಐಚ್ಛಿಕ ವಿಷಯಗಳಾದ ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನ ಗಳಿರುತ್ತವೆ.

೨೦೦೫ ರ ರಾಷ್ಟ್ರೀಯ ಪಠ್ಯಕ್ರಮವು ಈ ಕೆಳಗಿನ ವೈಶಿಷ್ಟ್ಯಗಳನ್ನು ಹೊಂದಿದೆ.

- ಕಲಿಕೆಯನ್ನು ಜೀವನದ ಅವಶ್ಯಕತೆಗಳೊಂದಿಗೆ ಜೋಡಿಸುವುದು.
- ಕಂಠಪಾಠ ವಿಧಾನದಿಂದ ಕಲಿಕೆಯನ್ನು ಮುಕ್ತಗೊಳಿಸುವುದು.
- ಪಠ್ಯಪುಸ್ತಕಗಳ ಹೊರತಾಗಿ ಪಠ್ಯಕ್ರಮವನ್ನು ಶ್ರೀಮಂತಗೊಳಿಸುವುದು.
- ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವಗಳನ್ನು ಬಳಸುವುದು.
- ಭಾರತದ ಪ್ರಜಾಸತ್ತಾತ್ಮಕ ನೀತಿಯನ್ವಯ ಮಕ್ಕಳ ಅವಶ್ಯಕತೆಗಳಿಗೆ ತಕ್ಕಂತೆ ಸ್ಪಂದಿಸುವುದು.
- ಶಿಕ್ಷಣವನ್ನು ಇಂದಿನ ಹಾಗೂ ಭವಿಷ್ಯದ ಜೀವನಾವಶ್ಯಕತೆಗಳಿಗೆ ಹೊಂದುವಂತೆ ಮಾಡುವುದು.
- ವಿಷಯಗಳ ಮೇರೆಗಳನ್ನು ಮುರಿದು ಅವುಗಳ ಸಮಗ್ರದೃಷ್ಟಿಯ ಬೋಧನೆಯನ್ನು ಅಳವಡಿಸುವುದು.
- ಶಾಲೆಯ ಹೊರಗಿನ ಬದುಕಿಗೆ ಜ್ಞಾನ ಸಂಯೋಜನೆ.
- ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿ ಪಡಿಸುವುದು.

ನೂತನ ಪಠ್ಯಪುಸ್ತಕಗಳನ್ನು ಕೆಳಗಿನ ಮೂಲಭೂತ ವಿಧಾನಗಳ ಆಧಾರದ ಮೇಲೆ ರಚಿಸಲಾಗಿದೆ.

ಅಂತರ್ಗತ ವಿಧಾನ (Integrated Approach), ರಚನಾತ್ಮಕ ವಿಧಾನ (Constructive Approach) ಹಾಗೂ ಸುರುಳಿಯಾಕಾರದ ವಿಧಾನ (Spiral Approach).

ಪಠ್ಯಪುಸ್ತಕಗಳಲ್ಲಿರುವ ವಿಷಯ ಹಾಗೂ ಅಭ್ಯಾಸಗಳು ವಿದ್ಯಾರ್ಥಿಗಳನ್ನು ಯೋಚನೆ ಮಾಡುವಂತೆ ಮಾಡಿ, ಚಟುವಟಿಕೆಗಳ ಮೂಲಕ ಜ್ಞಾನ ಹಾಗೂ ಸಾಮರ್ಥ್ಯಗಳನ್ನು ಪಡೆಯುವಂತೆ ಮಾಡುವ ಪ್ರಯತ್ನ ಮಾಡಲಾಗಿದೆ. ಪಠ್ಯವಸ್ತುಗಳೊಂದಿಗೆ ಅತ್ಯಂತ ಅವಶ್ಯಕ ಭಾರತೀಯ ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಬಳಸಲಾಗಿದೆ. ಈ ನೂತನ ಪಠ್ಯಪುಸ್ತಕಗಳು ಪರೀಕ್ಷಾಪೂರಕ ದೃಷ್ಟಿಯಿಂದ ರಚಿತವಾಗಿಲ್ಲ. ಬದಲಾಗಿ ಅವುಗಳು ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿವೆ. ತನ್ಮೂಲಕ ಅವರನ್ನು ಸ್ವತಂತ್ರ ಭಾರತದ ಸ್ವಸ್ಥಸಮಾಜದ ಉತ್ತಮ ಪ್ರಜೆಗಳನ್ನಾಗಿ ಮಾಡುವ ಪ್ರಯತ್ನ ನಡೆದಿದೆ.

ಭಾಷಾಕಲಿಕೆಯಲ್ಲಿ ಅತ್ಯಂತ ಮುಖ್ಯ ಗುರಿಗಳಾದ ಆಲಿಸುವುದು, ಮಾತನಾಡುವುದು, ಓದುವುದು, ಬರೆಯುವುದು ಹಾಗೂ ಆಕರಗ್ರಂಥಗಳಿಂದ ವಿಷಯ ಸಂಗ್ರಹಣೆಯಂತಹ ಕ್ಷೇತ್ರವಾರು ಸಾಮರ್ಥ್ಯಗಳಿಗೆ ಒತ್ತು ನೀಡಲಾಗಿದೆ. ಈ ಕೌಶಲಗಳೊಂದಿಗೆ ಕ್ರಿಯಾತ್ಮಕ ವ್ಯಾಕರಣ, ಸೌಂದರ್ಯಪ್ರಜ್ಞೆ, ಪ್ರಶಂಸಾ ಮನೋಭಾವ, ಮೌಲ್ಯಗಳ ಸಂವರ್ಧನೆ ಹಾಗೂ

NOT TO BE REPUBLISHED ©KTBS

ಮಕ್ಕಳ ಅಭ್ಯಾಸ ಪುಸ್ತಕಗಳಲ್ಲಿ ಅನೇಕ ಚಟುವಟಿಕೆಗಳನ್ನು ಮಕ್ಕಳಿಂದ ಮಾಡಿಸಿ ಅವರಲ್ಲಿ ಸಂಬಂಧಪಟ್ಟ ಸಾಮರ್ಥ್ಯ ಸಂವರ್ಧನೆಗೆ ಅನುವು ಮಾಡಿಕೊಡಬೇಕು. ಈ ಸಾಮರ್ಥ್ಯ ಮಕ್ಕಳಲ್ಲಿ ಬಂದಾಗ ಅವರು ಪರೀಕ್ಷೆಗಳಿಗಾಗಿ ಕಂಠಪಾಠಕ್ಕೆ ಶರಣು ಹೋಗಬೇಕಾಗಿಲ್ಲ. ಪಠ್ಯಪುಸ್ತಕವು ಭಾಷಾ ಕೌಶಲಗಳ ಸಂವರ್ಧನೆಗೆ ಒಂದು ಪೂರಕವಸ್ತುವೆಂದು ಪರಿಗಣಿಸಲು, ಮಕ್ಕಳ ಮನೋವೈಶಾಲ್ಯವನ್ನು ಬೆಳೆಸಲು ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ಚಟುವಟಿಕೆಗಳನ್ನು ಪಠ್ಯಪುಸ್ತಕದಲ್ಲಿ ಒದಗಿಸಲಾಗಿದೆ. ಮಿತ್ರರೊಂದಿಗೆ ಗುಂಪುಗಳಲ್ಲಿ ಚರ್ಚೆಯ ಮೂಲಕ ಅವರ ಅಭಿವ್ಯಕ್ತಿ ಹಾಗು ಸಂವಹನ ಕೌಶಲಗಳ ಸಂವರ್ಧನೆಯೇ ಕಲಿಕೆಯ ಗುರಿಯೆಂದು ಅಂತಹ ಚಟುವಟಿಕೆಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಈ ರೀತಿಯ ಚಟುವಟಿಕೆಗಳು ಮಕ್ಕಳಲ್ಲಿ ಕಲಿಯುವ ಕಲೆ (learning to learn) ಹಾಗೂ ಕಲಿತುದುದನ್ನು ಜೀವನದಲ್ಲಿ ಅಳವಡಿಸುವ ಶಕ್ತಿ (learning to do) ಯನ್ನು ವೃದ್ಧಿಮಾಡುತ್ತದೆ. ಪ್ರತಿ ಘಟಕದಲ್ಲಿಯೂ ಕೆಲವು ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಜೋಡಿಸಲಾಗಿದೆ. ಅವುಗಳನ್ನು ಮಕ್ಕಳೇ ಕಂಡುಹಿಡಿದು, ಚರ್ಚಿಸಿ ಜೀವನದಲ್ಲಿ ಅವುಗಳ ಅರಿವನ್ನುಂಟುಮಾಡಿಕೊಳ್ಳುವಂತೆ ಮಾಡಬೇಕು.

ಕರ್ನಾಟಕ ಪಠ್ಯಪುಸ್ತಕ ಸಂಘವು ಈ ಪುಸ್ತಕದ ತಯಾರಿಯಲ್ಲಿ ಸಹಕರಿಸಿದ ಸಮಿತಿಯ ಅಧ್ಯಕ್ಷರಿಗೆ, ಸದಸ್ಯರಿಗೆ, ಕಲಾಕಾರರಿಗೆ, ಪರಿಶೀಲಕರಿಗೆ, ಸಂಯೋಜಕ ಅಧಿಕಾರಿಗಳಿಗೆ ಮತ್ತು ಸಿ.ಟಿ.ಇ ಹಾಗೂ ರಾಜ್ಯದ ಎಲ್ಲಾ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳಿಗೆ, ಸಂಪಾದಕ ಮಂಡಳಿಯ ಸದಸ್ಯರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಕವಿಗಳ ಹಾಗೂ ಸಾಹಿತಿಗಳ ಕೃತಿಗಳನ್ನು ಈ ಪಠ್ಯಪುಸ್ತಕಗಳಲ್ಲಿ ಅಳವಡಿಸಲಾಗಿದೆ. ಇದಕ್ಕೆ ತಮ್ಮ ಒಪ್ಪಿಗೆಯನ್ನು ನೀಡಿರುವ ಕವಿಗಳಿಗೆ ಹಾಗೂ ಸಾಹಿತಿಗಳಿಗೆ ಪಠ್ಯಪುಸ್ತಕ ಸಂಘ ಆಭಾರಿಯಾಗಿದೆ.

@KTBS NOT TO BE REPUBLISHED

**ಪ್ರೊ. ಜಿ.ಎಸ್. ಮುಡಂಬಡಿತ್ತಾಯ**
ಮುಖ್ಯ ಸಂಯೋಜಕರು
ಪಠ್ಯಕ್ರಮ ಪರಿಷ್ಕರಣೆ ಹಾಗೂ
ಪಠ್ಯಪುಸ್ತಕ ರಚನೆ ಕ.ಪ.ಪು. ಸಂಘ ಬೆಂಗಳೂರು.

**ನಾಗೇಂದ್ರ ಕುಮಾರ್**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ ಬೆಂಗಳೂರು

**ಪಠ್ಯ ಓದು ಹಾಗೂ ಬೋಧನೆಗೆ ಮುನ್ನ ಬೋಧಕರೊಂದಿಗೆ ಸಮಾಲೋಚನೆ--------**

ನಾವಿಂದು ನಾಗರಿಕ, ಶೈಕ್ಷಣಿಕ ಹಾಗೂ ಜಾಗತಿಕ ಮೇಲಾಟದಲ್ಲಿದ್ದೇವೆ. ಪ್ರತಿಯೊಂದು ಭೌತಿಕ ಹಾಗೂ ಬೌದ್ಧಿಕ ಆಯಾಮದಲ್ಲೂ ಹೊಸ ಹೊಸ ಶೈಕ್ಷಣಿಕ ಶೋಧನೆ, ಚಿಂತನಾ ಆವಿಷ್ಕಾರ, ಕಲಿಕಾ ತಂತ್ರಗಾರಿಕೆ ಮತ್ತು ವೈಜ್ಞಾನಿಕ ಮನೋಭಾವವನ್ನು ಸ್ಥಿರೀಕರಿಸುವ ವಾಸ್ತವಿಕ ಪ್ರಯತ್ನಗಳು ನಾಡಿನ ಉದ್ದಗಲಕ್ಕೂ ನಡೆಯುತ್ತಿವೆ. ಪ್ರಸ್ತುತ ಸಂದರ್ಭ, ಸ್ಥಿತಿಗತಿಯನ್ನು ಮನಗಂಡ ಶಿಕ್ಷಣತಜ್ಞರು, ಮನೋವಿಜ್ಞಾನಿಗಳು, ಸಾಹಿತ್ಯ ವಿದ್ವಾಂಸರು ಹಾಗೂ ಅಂತಾಶಿಸ್ತೀಯ ಮೇಧಾವಿಗಳು ಕಲೆತು ಆಯೋಜಿಸಿದ ನಿರ್ದಿಷ್ಟ ನಿಯೋಜನಾ ಫಲವೇ ಹೊಸ ಪಠ್ಯ ತಯಾರಿ ಹಾಗೂ ಅನುಷ್ಠಾನತೆ.

ಕಲಿಕಾರ್ಥಿಗಳ ಶೈಕ್ಷಣಿಕ ಜೀವನದಲ್ಲಿ ತಾಯ್ನುಡಿಯ ಕಲಿಕೆ ಅದರ ಬಳಕೆ ಮಹತ್ವದ್ದು. ಅದಕ್ಕೆ ಪೂರಕವಾಗಿ ಶಿಕ್ಷಣ ಇಲಾಖೆ ನಿಗದಿಪಡಿಸುವ ಬೋಧನಾ ಪಠ್ಯ ಅಗತ್ಯ ಹಾಗೂ ಅನಿವಾರ್ಯ. ಸಾಮಾನ್ಯವಾಗಿ ಮಕ್ಕಳ ಪರಿಸರದ ಮಾತು ನಿತ್ಯದ ಪರಸ್ಪರ ಸಂವಹನ ಸಂಪರ್ಕವಷ್ಟೇ ಅಲ್ಲದೆ ಜ್ಞಾನಾರ್ಜನೆಯ ಉದ್ದೇಶವೂ ಅದರದು. ಮಕ್ಕಳು ತಮ್ಮ ನುಡಿಯಲ್ಲೇ ಶಾಲಾಮಟ್ಟದ ಭಾಷಿಕ ಸಾಮರ್ಥ್ಯವನ್ನು ಆರ್ಜಿಸಿಕೊಳ್ಳುತ್ತಾ ಶೈಕ್ಷಣಿಕ ಸಾರ್ಥಕತೆಗೆ ತಮ್ಮನ್ನು ತೆರೆದುಕೊಳ್ಳುವ ಆಶಯದಿಂದ ಔಪಚಾರಿಕ ನೆಲೆಯಲ್ಲಿ ಸಿದ್ಧಪಡಿಸಿದ ಕಲಿಕಾ ಹಾಗೂ ಬೋಧನಾ ಪಠ್ಯವಿದು. ಕಲಿಕೆಯ ಮೂಲಭೂತ ಕೌಶಲಗಳ ವೈಜ್ಞಾನಿಕ ದೃಢತ್ವವೇ ಇವುಗಳ ಆಂತರ್ಯ ದನಿ.

ಕಲಿಕೆ ಹಾಗೂ ಕಲಿಸುವಿಕೆಯ ನಿರ್ಧಾರಿತ ವಿಧಾನ ಮತ್ತು ಮೌಲ್ಯವನ್ನು ಸಾರ್ವತ್ರಿಕ ಶೈಕ್ಷಣಿಕ ನೆಲೆಯಲ್ಲಿ ಮೌಲೀಕರಿಸುವ ಉದ್ದೇಶದಿಂದ ೧೯೮೬ರ ರಾಷ್ಟ್ರೀಯ ಶಿಕ್ಷಣ ನೀತಿಗೆ ಬದ್ಧವಾಗಿ, ಅಂತೆಯೇ ೨೦೦೧ - ೨೦೦೨ ಶೈಕ್ಷಣಿಕ ಆಧುನಿಕತೆಗೆ ಪೂರಕವಾಗಿ ಪಠ್ಯಪುಸ್ತಕಗಳು ಶೋಧವಾದವು. ಮಕ್ಕಳ ಮಾನಸಿಕ ವಲಯಕ್ಕೆ ಸರಿಹೊಂದುವಂತೆ ಸಾಮರ್ಥ್ಯಾಧಾರದಿಂದ ಪರಿಷ್ಕಾರವಾಗಿ ಕಾಲಧರ್ಮದ ಶೈಕ್ಷಣಿಕತೆಗೆ ಸಮರ್ಪಕವಾದವು. ಹಾಗಾಗಿಯೂ ಇಂದಿನ ಶೈಕ್ಷಣಿಕ ಆಶೋತ್ತರ, ೨೦೦೫ - ಎನ್.ಸಿ.ಎಫ್. ನೆಲೆಯಾಧಾರಿತ ಆನ್ವಯಿಕ ಶೋಧನಾ ಚಿಂತನೆಗಳನ್ನು ಗಂಭೀರವಾಗಿ ಗಮನಿಸುವುದು ಹಿತಕರ. ಇದು ಸುಶಿಕ್ಷಿತ ವ್ಯಕ್ತಿತ್ವ ವಿಕಸನಕ್ಕೆ ನಾಂದಿ.

ಪಠ್ಯಪುಸ್ತಕದಲ್ಲಿ ಕಲಿಕೆ ಮತ್ತು ಬೋಧನಾಂಶಗಳನ್ನು ಸಮಾನ ರೀತ್ಯಾ ಪರಿಗಣಿಸಿ ಯುಕ್ತ ಕಲಿಕಾ ಪ್ರಾಯೋಗಿಕತೆಯ ಮೂಲಕ ಸಮನ್ವಯಗೊಳಿಸಿ, ಭಾಷಾ ಕಲಿಕೆ ಮತ್ತು ಜ್ಞಾನ ಸಂವರ್ಧನೆಗೆ ಅವಕಾಶ ಮಾಡಿಕೊಡಬೇಕು. ಆ ನೆಲೆಯಲ್ಲಿ ಸಿರಿ ಕನ್ನಡ - ೮ ಸಮರ್ಥನೀಯ. ಇತ್ತೀಚಿನ ಕಲಿಕೆಯ ಎಲ್ಲಾ ಸಾಧಕ-ಬಾಧಕಗಳನ್ನು ತಾರ್ಕಿಕ ರೀತ್ಯಾ ಅಳವಡಿಸಿದೆ. ಮುಖ್ಯವಾಗಿ ತರಗತಿವಾರು ಕಲಿಕೆಯ ಮೂಲವಿಷಯ ಮತ್ತು ನಿರ್ಧರಿಸಿದ ಮಾನವೀಯ ಮೌಲ್ಯಗಳನ್ನು ಪರಿಗಣಿಸಿದೆ. ಭಾಷಾ ಸಾಮರ್ಥ್ಯಗಳನ್ನು ಕ್ಷೇತ್ರಗಳಿಗನುಗುಣವಾಗಿ ಅನ್ವಯಿಸಿ ಸಮರ್ಥ ಕಲಿಕೆಗೆ ಅನುವಾಗುವಂತೆ ಪಠ್ಯದ ಗದ್ಯ-ಪದ್ಯ ಪಾಠಗಳಲ್ಲಿ ಅಳವಡಿಸಿದೆ. ಸಾಮಾಜಿಕ, ಸಾಂಸ್ಕೃತಿಕ, ಪ್ರಾದೇಶಿಕ ಮತ್ತು ಲಿಂಗ ಸಮಾನತೆಯನ್ನು ಕಾಯ್ದುಕೊಂಡಿದೆ. ಇಲ್ಲಿನ ಪಾಠಗಳೆಲ್ಲವೂ ಸ್ವಕಲಿಕೆ ಹಾಗೂ ಬೋಧನಾ ಕೌಶಲಕ್ಕೆ ಸೂಕ್ತವಾಗಿವೆ. ಕಲಿಕಾರ್ಥಿಗಳ ಆಸಕ್ತಿ ಮತ್ತು ಉಲ್ಲಾಸವನ್ನು ಹೆಚ್ಚಿಸುವ ಉದ್ದೇಶದಿಂದ ರಚಿಸಿರುವ ಪಾಠಗಳಲ್ಲಿ ವೈವಿಧ್ಯ ಉಂಟು.

ಯೋಜಿತ ಕ್ರಿಯಾತ್ಮಕತೆಯು ಪಠ್ಯದ ಸಾರ್ಥಕತೆಗೆ ಸೂಕ್ತ ಆದ್ಯತೆಯನ್ನು ನೀಡುವುದರ ಹಿನ್ನೆಲೆಯಲ್ಲಿ ಪ್ರಸ್ತುತ ಬೋಧನೆ ಹಾಗೂ ಕಲಿಕೆಗೆ ಹೆಚ್ಚಿನ ಪ್ರೋತ್ಸಾಹ ಹಾಗೂ ಇಂಬುಕೊಡುವ ಪ್ರಾಯೋಗಿಕ ಹಾಗೂ ತಾತ್ವಿಕ ಪ್ರಯತ್ನ ಇಲ್ಲಿನದು. ಬೋಧನಾ ವಿಶೇಷತೆಯೊಂದಿಗೆ ಆಯ್ದು ನಿಗದಿಪಡಿಸಿದ ಸಾಹಿತ್ಯಪ್ರಕಾರದ ಭಾಗಗಳನ್ನು ಅರ್ಥೈಸಿಕೊಳ್ಳಲು ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಕ್ರಿಯಾತ್ಮಕ ಭಾಷಿಕ ಕ್ರಮಗಳನ್ನು ವ್ಯವಸ್ಥಿತವಾಗಿ ಅನ್ವಯಿಸಿದೆ. ಭಾಷಾಶುದ್ಧತೆ, ವಾಸ್ತವಿಕತೆ ಮತ್ತು ತರ್ಕಬದ್ಧತೆಯನ್ನೂ ಜತನದಿಂದ ಸ್ಥಿರೀಕರಿಸಿದೆ. ಕಲಿಕಾ ಮೂಲತತ್ವವನ್ನು ಸಮರ್ಪಕವಾಗಿ ಅನುಸರಿಸಿದೆ.

ಇಲ್ಲಿ ಮುಖ್ಯವಾಗಿ ಮಕ್ಕಳು ಕಲಿಕಾ ಪ್ರಾಯೋಗಿಕತೆಯನ್ನು ಸಮರ್ಥರೀತಿಯಲ್ಲಿ ಮೌಲೀಕರಿಸುವ ಉದ್ದೇಶದಿಂದ ಪಠ್ಯದಲ್ಲಿನ ನಿಗದಿತ ಕಲಿಕಾ ಗದ್ಯಪಾಠ ಮತ್ತು ಪದ್ಯಪಾಠಗಳ ಸ್ಪಷ್ಟ ಅರ್ಥೈಸುವಿಕೆಗೆ ಸಂಬಂಧಿಸಿದಂತೆ ಪ್ರಾಯೋಗಿಕ ವಸ್ತುನಿಷ್ಠ/ನಿಖರನಿರ್ಣಯ ಬಹುವಿಧದ ನಮೂನಾ ಪ್ರಶ್ನೆಗಳನ್ನು ನಿದರ್ಶನಾತ್ಮಕವಾಗಿ ಪಠ್ಯಪುಸ್ತಕದಲ್ಲಿ ನೀಡಿದೆ. ಅಲ್ಲದೆ ಕಲಿತ ಪಾಠದ ಸಾರನಿರ್ಣಯಕತೆಯನ್ನು ಬಹುವಿಧದಿಂದ ಪರೀಕ್ಷಿಸಿ ಕಲಿಕಾರ್ಥಿಯ ಜ್ಞಾನ ಸಂವರ್ಧನೆಗೆ ಅವಕಾಶ ಮಾಡಿಕೊಡುವ ಉದ್ದೇಶದಿಂದ ಒಂದೆರಡು ಮಾದರಿಗಳನ್ನಷ್ಟೇ ಕೊಟ್ಟಿದೆ. ಇದರಿಂದ ಸ್ವಸಾಮರ್ಥ್ಯ, ಸ್ವಪ್ರಯೋಗಶೀಲ, ಸ್ವಸೃಜನಶೀಲ, ಸ್ವಸಂವಹನಶೀಲ ಗುಣಗಳು ಸಹಜವಾಗಿ ಹೆಚ್ಚುತ್ತವೆ. ಭಾಷಾ ಹಾಗೂ ಜ್ಞಾನ ಗ್ರಹಿಕೆಗೆ ಸಂಬಂಧಿಸಿದ ಇನ್ನೂ ಹೆಚ್ಚಿನ ಸೂಕ್ತ ಅಭ್ಯಾಸ, ಭಾಷಾಭ್ಯಾಸ ಮತ್ತು ಚಟುವಟಿಕಾ ಮಾದರಿಗಳನ್ನು ಅಳವಡಿಸಿಕೊಳ್ಳುವ ಜವಾಬ್ದಾರಿ

© KTBS
NOT TO BE REPUBLISHED

ಸ್ವಾತಂತ್ರ್ಯ ಬೋಧಕರದು ಆಗಿರುತ್ತದೆ. ಅದಕ್ಕೇ ಅಭ್ಯಾಸ/ ಚಟುವಟಿಕೇತರ ನಮೂನೆಗಳನ್ನು ನೀಡಿರುವುದಿಲ್ಲ.

ಶಿಕ್ಷಕರ ಬೋಧನಾ ಸಂಪನ್ಮೂಲ ವಿವರವನ್ನು ಬೋಧಕರಿಗೆ ಪ್ರತ್ಯೇಕಿಸದೆ ಪಠ್ಯದಲ್ಲೇ ಸಹಸಂಬಂಧಿ ರೀತಿಯಲ್ಲಿ ಸಂಕ್ಷಿಪ್ತವಾಗಿ ನೀಡಿದೆ. ಸಾಹಿತ್ಯ ಪ್ರಕಾರ ಭಾಷಾ ಕ್ರಿಯಾತ್ಮಕ ವಿಚಾರ, ಕನ್ನಡ ಭಾಷಾ ಅವಸ್ಥಾ ಘಟಕಾಂಶ ಬೋಧನಾ ಆಶಯ ಸಂಬಂಧಿತ ಮಾಹಿತಿ ಇತ್ಯಾದಿಗಳನ್ನು ಸಂಕ್ಷಿಪ್ತ ರೀತಿಯಲ್ಲಿ ಒದಗಿಸುವ ಪ್ರಯತ್ನ ಮಾಡಿದೆ.

ನಿಗದಿತ ಮೂಲಪಾಠವನ್ನು ಅರ್ಥೈಸುವ ಅನುಕ್ರಮಣಿಕೆ ಇಂತಿದೆ. ಅರ್ಥೈಸಿ – ಓದಿ, ಕರ್ತೃ–ಭಾವ – ಆಕರ, ಪದ–ಗದ್ಯ/ಪದ್ಯ – ಅರ್ಥ, ಪಠ್ಯಾಧಾರಟಿಪ್ಪಣಿ, ಕಲಿತಪಠ್ಯದ ಅಭ್ಯಾಸ, ಭಾಷಾಭ್ಯಾಸ, ಪ್ರಾಯೋಗಿಕ ಅಭ್ಯಾಸ ಇತ್ಯಾದಿ ಪಠ್ಯದ ಒಳತೋಟಿಗಳು. ಪಠ್ಯಸಾರವನ್ನು ಕಲಿಕಾರ್ಥಿಗಳು ಸುಲಭವಾಗಿ ಅರ್ಥೈಸಿಕೊಳ್ಳುವ ದೃಷ್ಟಿಯಿಂದ ನಿಗದಿತ ಪಾಠದ ಬೋಧನಾ ವಿನ್ಯಾಸವನ್ನು ಹೊಸ ಬೋಧನಾ ವಿಧಾನ ಮತ್ತು ಬೋಧನಾ ವಿಶ್ಲೇಷಣಾ ವಿಧಾನದ ಅಡಿಯಲ್ಲಿ ಪ್ರಸ್ತಾಪಿಸಿದೆ. ಕಲಿಕೆಯ ಮುನ್ನ ಅರ್ಥೈಸಿ – ಓದಿ ಶೀರ್ಷಿಕೆಯಲ್ಲಿ ಗದ್ಯ/ಪದ್ಯದ ಕೆಲವು ವಿಶೇಷ ಪರಿಕಲ್ಪನಾ ಪದಗಳನ್ನು ಓದುವ ಸಲುವಾಗಿ ನೀಡಿದೆ. ಮುಖ್ಯವಾಗಿ ಓದುವಿಕೆಯನ್ನು ಖಚಿತಪಡಿಸುವ ಉದ್ದೇಶವೇ ಇದರದು. ಕಲಿತ ಪಾಠದ ಅಭ್ಯಾಸ ಭಾಗದಲ್ಲಿರುವ ಪ್ರಶ್ನೆಗಳು ಕಲಿಕಾರ್ಥಿಗಳು ಕಲಿಕೆಯಲ್ಲಿ ಸಾಮರ್ಥ್ಯ ಗಳಿಸುವುದಕ್ಕಾಗಿಯೇ ಹೊರತು ಪರೀಕ್ಷೆಯ ಪ್ರಶ್ನಪತ್ರಿಕೆಯ ತಯಾರಿಕೆಗಾಗಿ ಅಲ್ಲ. ಇದೇ ಪ್ರಶ್ನೆಗಳನ್ನು ಪರೀಕ್ಷೆಯಲ್ಲಿ ಮೌಲ್ಯಮಾಪನಕ್ಕಾಗಿ ಕೇಳಲೇಬೇಕೆಂಬ ನಿರ್ಬಂಧವಿಲ್ಲ. ಇಲ್ಲಿ ಒಂದು/ಎರಡು/ಮೂರು/ನಾಲ್ಕು/ಐದು..........ಹತ್ತು ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆಗಳನ್ನು ಕೇಳಲಾಗಿದೆ. ಇದು ವಿಷಯ ಗ್ರಹಣದ ಸಲುವಾಗಿಯೇ ಹೊರತು ಪರೀಕ್ಷಾ ಮೌಲ್ಯಮಾಪನದ ಮಾದರಿಗಾಗಿ ಅಲ್ಲ. ಅಂತೆಯೇ ವಸ್ತುನಿಷ್ಠ ನಿರ್ಣಾಯಕ ಪ್ರಶ್ನೆಗಳು ಕಲಿಕಾರ್ಥಿಯ ನಿರ್ದಿಷ್ಟ ಸಾಮರ್ಥ್ಯಕ್ಕೆ ಸಂಬಂಧಿಸಿದ್ದಾಗಿದೆ. ಒಟ್ಟಿನಲ್ಲಿ ಶೈಕ್ಷಣಿಕ ಸಾರೋದ್ದೇಶದ ಪ್ರಣಾಳಿಕೆ ಇದು.

ಪ್ರಸ್ತುತ ಕೈಂಕರ್ಯಕ್ಕೆ ಸಹಕರಿಸಿದ ಪಠ್ಯಪುಸ್ತಕ ರಚನಾಸಮಿತಿಯ ಗೌರವಾನ್ವಿತ ಸದಸ್ಯರೆಲ್ಲರ ಸಮರ್ಪಕ ಸಲಹೆ, ಬೆಂಬಲ, ನೆರವು, ವಿಶ್ವಾಸ ಮತ್ತು ಆದರತೆ ಮನನೀಯ. ಇಲಾಖೆಯ ವ್ಯವಸ್ಥಾಪಕ ನಿರ್ದೇಶಕರು, ಉಪನಿರ್ದೇಶಕರು ಹಾಗೂ ಮುಖ್ಯ ಸಂಯೋಜಕರಾದ ಪ್ರೊ. ಮುಡಂಬಡಿತ್ತಾಯ ಅವರ ಸಮಯೋಚಿತ ಸಲಹೆ, ಮಾರ್ಗದರ್ಶನ ಮಹತ್ವದ್ದು. ನಾಡಿನ ಖ್ಯಾತಸಾಹಿತಿಗಳಾದ ಪ್ರೊ. ಸಾ.ಶಿ. ಮರುಳಯ್ಯ ಅವರ ಸೂಕ್ತ ಪರಿಶೀಲನೆ ಸಮ್ಮತ. ಸಂಯೋಜಕ ಶ್ರೀ. ಪಾಂಡುರಂಗ ಅವರ ಒತ್ತಾಸೆ, ಜವಾಬ್ದಾರಿಯುತ ಕಾಳಜಿ ಮತ್ತು ವಿಶ್ವಾಸ ಪೂರ್ವಕ ಅಭಿಮಾನ ವಿಶೇಷ. ಇವರೆಲ್ಲರಿಗೂ ಸಮಿತಿಯ ಪರವಾಗಿ ಆತ್ಮೀಯ ಗೌರವ ಪೂರ್ವಕ ಧನ್ಯವಾದಗಳು.

ಸಿರಿ ಕನ್ನಡ – ೮ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕದ ಸಂಪಾದಕ ಮಂಡಳಿಯ ಸದಸ್ಯರಾದ ಗೌರವಾನ್ವಿತ ಪ್ರೊ. ಸಾ.ಶಿ. ಮರುಳಯ್ಯ, ಸಾಹಿತಿಗಳು, ಪ್ರೊ. ಅ.ರಾ. ಮಿತ್ರ, ಸಾಹಿತಿಗಳು ಮತ್ತು ಡಾ. ವಿಷ್ಣು ಎಂ. ಶಿಂದೆ, ಸಹಾಯಕ ಪ್ರಾಧ್ಯಾಪಕರು ಮಹಿಳಾ ವಿಶ್ವವಿದ್ಯಾನಿಲಯ ಬಿಜಾಪುರ ಅವರ ಸೂಕ್ತ ಮಾರ್ಗದರ್ಶನ ಸಲಹೆ, ಸೂಚನೆಗಳು ಪಠ್ಯಪುಸ್ತಕದ ಮೌಲಿಕತೆಗೆ ಪೋಷಕವಾಗಿವೆ. ಗಂಭೀರ ಚಿಂತನಾಯುಕ್ತ ಮಾತುಗಳು ಸೂಕ್ತ ಹಾಗೂ ಮೌಲಿಕ. ಅಂತೆಯೇ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯ ಗಳಿಂದ ಬಂದಿರುವ ಹಿಮ್ಮಾಹಿತಿ ಸೂಕ್ತ ಹಾಗೂ ಸಮಂಜಸ. ಯುಕ್ತಾಯುಕ್ತತೆಯ ಹಿನ್ನೆಲೆಯಲ್ಲಿ ಅವನ್ನು ಗಮನಿಸಿದೆ. ಅದಕ್ಕಾಗಿ ಪಠ್ಯಪುಸ್ತಕ ರಚನಾಸಮಿತಿಯ ಪರವಾಗಿ ಅವರಿಗೆ ಗೌರವ ಪೂರ್ವಕ ಧನ್ಯವಾದಗಳು.

ಪ್ರತ್ಯಕ್ಷ ಪರೋಕ್ಷವಾಗಿ ಸಹಕರಿಸಿದ ಕರ್ನಾಟಕ ಪಠ್ಯಪುಸ್ತಕ ಸಂಘದ ಆತ್ಮೀಯ ಸ್ನೇಹಿತರಿಗೂ ಸಂಯೋಜಕರಿಗೂ ಕಲಾವಿದರಿಗೂ ಆದರಪೂರ್ವಕ ವಂದನೆಗಳು. ಪಠ್ಯಕ್ಕೆ ಆಯ್ಕೆ ಮಾಡಿಕೊಂಡ ಆಕರ ಸಂಪನ್ಮೂಲ ಭಾಗಗಳನ್ನು ಅಳವಡಿಸಿಕೊಳ್ಳಲು ಒಪ್ಪಿಗೆ ನೀಡಿರುವ ಲೇಖಕ ವಿದ್ವಾಂಸರಿಗೆ ಹಾಗೂ ಕೃತಿ ಸ್ವಾಮ್ಯ ಹೊಂದಿದವರಿಗೂ ಅಭಿಮಾನ ಪೂರ್ವಕ ಧನ್ಯವಾದಗಳು.

**ಸಿ. ಎಸ್. ರಾಮಚಂದ್ರ**
ಅಧ್ಯಕ್ಷ, ಸಿರಿ ಕನ್ನಡ – ೮
ಪಠ್ಯಪುಸ್ತಕ ರಚನಾ ಸಮಿತಿ

©KTBS NOT TO BE REPUBLISHED

## ಪಠ್ಯಪುಸ್ತಕ ಪರಿಷ್ಕರಣ ಸಮಿತಿಗಳ ವಿವರ

**ಸರ್ವಾಧ್ಯಕ್ಷರು :**

**ಪ್ರೊ. ಬರಗೂರು ರಾಮಚಂದ್ರಪ್ಪ,** ರಾಜ್ಯಪಠ್ಯಪುಸ್ತಕ ಪರಿಷ್ಕರಣಸಮಿತಿ, ಕರ್ನಾಟಕ ಪಠ್ಯಪುಸ್ತಕಸಂಘ(ರಿ) ಬೆಂಗಳೂರು-೮೫

## ಪರಿಷ್ಕರಣ ಸಮಿತಿ

**ಅಧ್ಯಕ್ಷರು :**

**ಡಾ. ರಾಜಪ್ಪ ದಳವಾಯಿ,** ಪ್ರಾಧ್ಯಾಪಕರು, ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ಕೋಲಾರ, ಬೆಂಗಳೂರು ವಿಶ್ವವಿದ್ಯಾಲಯ.

**ಸದಸ್ಯರು :**

**ಡಾ. ಜಗನ್ನಾಥ್ ಹೆಬ್ಬಾಳೆ,** ಸಹ ಪ್ರಾಧ್ಯಾಪಕರು, ಕರ್ನಾಟಕ ಕಲಾ, ವಾಣಿಜ್ಯ ಪ್ರಥಮದರ್ಜೆ ಕಾಲೇಜು, ಬೀದರ್

ಶ್ರೀ **ಅಲ್ಲಮಪ್ರಭು ಬೆಟ್ಟದೂರು,** ನಿವೃತ್ತ ಪ್ರಾಂಶುಪಾಲರು, ಅಮರ ಚೇತನ, ತವಳಗೇರಿ ಕಾಲೋನಿ, ಕಲ್ಯಾಣನಗರ, ಕೊಪ್ಪಳ

ಶ್ರೀ **ವಿ.ರಂಗಪ್ಪಯ್ಯಹೊಳ್ಳ,** ನಿವೃತ್ತ ಕನ್ನಡ ಭಾಷಾ ಶಿಕ್ಷಕರು, ಶ್ರೀನಿವಾಸ ಚಿತ್ರಪಾಡಿ, ಸಾಲಿಗ್ರಾಮ, ಉಡುಪಿ ತಾ.

ಶ್ರೀ **ಬಿ. ರವೀಶ್‌ಕುಮಾರ್.** ಕನ್ನಡ ಅಧ್ಯಾಪಕರು, ಸರ್ಕಾರಿ ಪ್ರೌಢಶಾಲೆ, ಕೇರ್ಗಳ್ಳಿ, ಮೈಸೂರು ತಾಲ್ಲೂಕು.

ಶ್ರೀ **ಚಿಕ್ಕದೇವೇಗೌಡ,** ಕನ್ನಡ ಅಧ್ಯಾಪಕರು, ಸರ್ಕಾರಿ ಪ್ರೌಢಶಾಲೆ, ಉತ್ತರಹಳ್ಳಿ, ಬೆಂಗಳೂರು-೬೧

ಶ್ರೀ **ತಮ್ಮಣ್ಣಗೌಡ ಹೆಚ್**.ಸಿ. ಕನ್ನಡ ಅಧ್ಯಾಪಕರು, ಸರ್ಕಾರಿ ಪ್ರೌಢಶಾಲೆ, ಹನುಮಂತಪುರ, ಹಾಸನ ತಾಲ್ಲೂಕು

ಶ್ರೀ**ಮತಿ. ಸುಶೀಲ,** ಕನ್ನಡ ಅಧ್ಯಾಪಕಿ, (ಪ್ರೌಢಶಾಲಾ ವಿಭಾಗ), ಸರ್ಕಾರಿ ಪದವಿಪೂರ್ವ ಕಾಲೇಜು, ಮದ್ದೂರು ತಾಲ್ಲೂಕು

ಶ್ರೀ **ಬಸವರಾಜಪ್ಪ, ಎಂ,** ಕನ್ನಡ ಅಧ್ಯಾಪಕರು (ಪ್ರೌಢಶಾಲಾ ವಿಭಾಗ), ಸರ್ಕಾರಿಪದವಿಪೂರ್ವಕಾಲೇಜು, ಹೊಸನಗರ ತಾ.

ಶ್ರೀ **ಎನ್.ಬಿ.ವೀರನಗೌಡ,** ಬಿ.ಅರ್.ಪಿ, ಕ್ಷೇತ್ರಸಮನ್ವಯಾಧಿಕಾರಿಗಳ ಕಛೇರಿ, ಶಿಕಾರಿಪುರ ತಾ, ಶಿವಮೊಗ್ಗ ಜಿಲ್ಲೆ.

**ಕಲಾವಿದರು:**

ಶ್ರೀ **ವೆಂಕಟೇಶ್**. ಚಿತ್ರಕಲಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಉರಮಾರ ಕಸಲಗೆರೆ, ಮಂಡ್ಯ ದಕ್ಷಿಣ ತಾಲ್ಲೂಕು,

## ಉನ್ನತ ಪರಿಶೀಲನ ಸಮಿತಿ

**ಡಾ. ಎಚ್.ಎಸ್. ರಾಘವೇಂದ್ರರಾವ್,** ನಿವೃತ್ತ ಪ್ರಾಧ್ಯಾಪಕರು, ನಂ.೭, ೧೫ನೇ ಕ್ರಾಸ್, ಜೆ.ಪಿ.ನಗರ, ಬೆಂಗಳೂರು-೭೮

**ಡಾ. ಜಿ.ಆರ್.ತಿಪ್ಪೇಸ್ವಾಮಿ,** ನಿವೃತ್ತ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು-೬

**ಡಾ. ಸೈಯದ್ ಜಮೀರ್‌ಉಲ್ಲಾಷರೀಫ್,** ನಿವೃತ್ತ ಪ್ರಾಂಶುಪಾಲರು, ಭಟ್ಕಳ, ಉತ್ತರ ಕನ್ನಡ ಜಿಲ್ಲೆ

**ಡಾ. ಯಲ್ಲಪ್ಪ ಹಿಮ್ಮಡಿ,** ಎಸ್.ಪಿ.ಎಂ. ಕಲಾ ಮತ್ತು ವಾಣಿಜ್ಯ ಕಾಲೇಜು, ರಾಯಬಾಗ, ಬೆಳಗಾವಿ ಜಿಲ್ಲೆ

**ಡಾ. ಕಲಾವತಿ,** ಕನ್ನಡ ಅಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಳ್ಳಾರಿ

**ಡಾ. ಪ್ರಶಾಂತ್ ನಾಯಕ್,** ಪ್ರಾಧ್ಯಾಪಕರು, ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾನಿಲಯ ಶಂಕರಘಟ್ಟ, ಶಿವಮೊಗ್ಗ.

**ಡಾ. ಗೀತಾವಸಂತ,** ಸಹಪ್ರಾಧ್ಯಾಪಕರು ಕನ್ನಡ ವಿಭಾಗ ತುಮಕೂರು ವಿಶ್ವವಿದ್ಯಾಲಯ ತುಮಕೂರು.

**ಡಾ. ಸತ್ಯನಾರಾಯಣ, ಎಚ್.ಎಸ್**. ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವಕಾಲೇಜು, ಬಸವನಗುಡಿ, ಬೆಂಗಳೂರು.

**ಸಲಹೆ ಮತ್ತು ಮಾರ್ಗದರ್ಶನ :**

**ಶ್ರೀಮತಿ ಪ್ರೇಮಾ ಹೆಚ್.ಎಂ.,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ.) ಬೆಂಗಳೂರು-೦೩

**ಶ್ರೀ ಗಂಗಣ್ಣಸ್ವಾಮಿ ಹೆಚ್. ಜಿ.,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ.) ಬೆಂಗಳೂರು-೦೩

**ಕಾರ್ಯಕ್ರಮ ಸಂಯೋಜಕರು :**

ಶ್ರೀ **ಬಿ. ಮೋಹನ್‌ಕುಮಾರ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ.), ಬೆಂಗಳೂರು-೦೩

@KTBS NOT TO BE REPUBLISHED

# ಪರಿಷ್ಕರಣೆ ಕುರಿತು

ಒಂದರಿಂದ ಹತ್ತನೇ ತರಗತಿಯ ಪಠ್ಯಪುಸ್ತಕಗಳ ಬಗ್ಗೆ ಪ್ರಕಟಗೊಂಡ ಸಾರ್ವಜನಿಕ ಅಭಿಪ್ರಾಯಗಳನ್ನು ಗಮನಿಸಿ ಮಾನ್ಯ ಮುಖ್ಯಮಂತ್ರಿಯವರೂ ಅರ್ಥಸಚಿವರೂ ಆಗಿರುವ ಶ್ರೀ ಸಿದ್ದರಾಮಯ್ಯನವರು ತಮ್ಮ ೨೦೧೪-೧೫ ರ ಬಜೆಟ್‌ನಲ್ಲಿ ತಜ್ಞರ ಸಮಿತಿಯನ್ನು ರಚಿಸುವ ಘೋಷಣೆ ಮಾಡಿದರು. ತಜ್ಞರು ಅನುಸರಿಸಬೇಕಾದ ಮೂಲ ಆಶಯವನ್ನು ಹೀಗೆ ಹೇಳಿದರು: "ಪಠ್ಯಪುಸ್ತಕಗಳನ್ನು ಸಾಮಾಜಿಕ ಸಾಮರಸ್ಯ, ನೈತಿಕಮೌಲ್ಯಗಳು, ವ್ಯಕ್ತಿತ್ವವಿಕಸನ, ವೈಜ್ಞಾನಿಕ ಮತ್ತು ವೈಚಾರಿಕ ಮನೋಭಾವ, ಜಾತ್ಯತೀತತೆ ಮತ್ತು ರಾಷ್ಟ್ರೀಯ ಬದ್ಧತೆಗಳಿಗೆ ಅನುವಾಗುವಂತೆ ತಜ್ಞರ ಸಮಿತಿಯನ್ನು ಪುನರ್ ರಚಿಸಲಾಗುವುದು" ಇದು ಬಜೆಟ್ ಭಾಷಣದಲ್ಲಿ ಸಾದರಪಡಿಸಿದ ಆಶಯ.

ಆನಂತರ ಶಿಕ್ಷಣ ಇಲಾಖೆಯು ಒಂದರಿಂದ ಹತ್ತನೇ ತರಗತಿಯವರೆಗಿನ ಪಠ್ಯಪುಸ್ತಕಗಳ ಪರಿಷ್ಕರಣೆಗಾಗಿ ೨೭ ಸಮಿತಿಗಳನ್ನು ರಚಿಸಿ ದಿನಾಂಕ: ೨೪.೧೧.೨೦೧೪ ರಂದು ಆದೇಶಹೊರಡಿಸಿತು. ಈ ಸಮಿತಿಗಳು ವಿಷಯವಾರು ಮತ್ತು ತರಗತಿವಾರು ಮಾನದಂಡಕ್ಕನುಗುಣವಾಗಿ ರಚಿತವಾದವು. ವಿವಿಧ ಪಠ್ಯವಿಷಯಗಳಿಗೆ ಸಂಬಂಧಿಸಿದ ತಜ್ಞರು, ಅಧ್ಯಾಪಕರು ಈ ಸಮಿತಿಗಳಲ್ಲಿದ್ದಾರೆ. ಈಗಾಗಲೇ ಲಿಖಿತವಾಗಿ ಬಂದಿರುವ ಅನೇಕ ಆಕ್ಷೇಪಗಳು ಮತ್ತು ವಿಶ್ಲೇಷಣೆಗಳನ್ನು ಪರಿಶೀಲಿಸಿ, ತಪ್ಪು ಒಪ್ಪುಗಳ ಬಗ್ಗೆ ನಿರ್ಣಯಿಸಿ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ ಹೊಣೆಹೊತ್ತ ಈ ಸಮಿತಿಗಳಿಗೆ 'ಅಗತ್ಯವಿದ್ದಲ್ಲಿ ಪಠ್ಯವಸ್ತುವನ್ನು ಪರಿಷ್ಕರಿಸಿ ನಂತರ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ' ಸ್ವಾತಂತ್ರ್ಯವನ್ನು ೨೪.೧೧.೨೦೧೪ರ ಆದೇಶದಲ್ಲೇ ನೀಡಲಾಗಿತ್ತು. ಆನಂತರ ೧೯.೦೯.೨೦೧೫ ರಂದು ಹೊಸ ಆದೇಶ ಹೊರಡಿಸಿ 'ಅಗತ್ಯವಿದ್ದಲ್ಲಿ ಪುನರ್ ರಚಿಸುವ' ಸ್ವಾತಂತ್ರ್ಯವನ್ನು ನೀಡಲಾಯಿತು. ಹೀಗೆ ಸಮಗ್ರ ಪರಿಷ್ಕರಣೆಗೊಂಡ ಪಠ್ಯಪುಸ್ತಕಗಳನ್ನು ೨೦೧೬-೧೭ ರ ಬದಲು ೨೦೧೭-೧೮ನೇ ಶೈಕ್ಷಣಿಕ ವರ್ಷದಲ್ಲಿ ಜಾರಿಗೊಳಿಸಲಾಗುವುದೆಂದು ಇದೇ ಆದೇಶದಲ್ಲಿ ತಿಳಿಸಲಾಯಿತು.

ಅನೇಕ ವ್ಯಕ್ತಿಗಳೂ ಸಂಘಟನೆಗಳೂ ಸ್ವಯಂಪ್ರೇರಿತರಾಗಿ ಪಠ್ಯಪುಸ್ತಕಗಳ ಮಾಹಿತಿದೋಷ, ಆಶಯದೋಷಗಳನ್ನು ಪಟ್ಟಿಮಾಡಿ ಶಿಕ್ಷಣ ಸಚಿವರಿಗೆ, ಪಠ್ಯಪುಸ್ತಕ ಸಂಘಕ್ಕೆ ಕಳುಹಿಸಿದ್ದರು. ಅವುಗಳ ಪರಿಶೀಲನೆಮಾಡಿದ್ದಲ್ಲದೆ, ಸಮಿತಿಗಳಾಚೆಗೆ ಅನೇಕ ಸಂವಾದಗಳನ್ನು ಏರ್ಪಡಿಸಿ ವಿಚಾರ ವಿನಿಮಯ ಮಾಡಿಕೊಂಡಿದ್ದೇವೆ. ಪ್ರಾಥಮಿಕ ಮತ್ತು ಪ್ರೌಢಶಾಲಾ ಅಧ್ಯಾಪಕರ ಸಂಘಗಳ ಜೊತೆ ಚರ್ಚಿಸಿದ್ದಲ್ಲದೆ ಪ್ರಶ್ನಾವಳಿ ಸಿದ್ಧಪಡಿಸಿ ಅಧ್ಯಾಪಕರಿಗೆ ನೀಡಿ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಅಧ್ಯಾಪಕರು, ವಿಷಯಪರಿವೀಕ್ಷಕರು ಮತ್ತು ಡಯಟ್ ಪ್ರಾಂಶುಪಾಲರ ಪ್ರತ್ಯೇಕ ಸಭೆಗಳನ್ನು ನಡೆಸಿ ವಿಶ್ಲೇಷಣಾತ್ಮಕ ಅಭಿಮತಗಳನ್ನು ಪಡೆಯಲಾಗಿದೆ. ವಿಜ್ಞಾನ, ಸಮಾಜವಿಜ್ಞಾನ, ಗಣಿತ, ಭಾಷೆ ಸಾಹಿತ್ಯಗಳಿಗೆ ಸಂಬಂಧಿಸಿದ ತಜ್ಞರಿಗೆ ಮೊದಲೇ ಪಠ್ಯಪುಸ್ತಕಗಳನ್ನು ಕಳುಹಿಸಿ ಆನಂತರ ಸಭೆ ನಡೆಸಿ ಚರ್ಚಿಸಲಾಗಿದೆ. ಮಹಿಳಾ ಸಂಘಟನೆ ಹಾಗೂ ವಿಜ್ಞಾನ ಸಂಬಂಧಿ ಸಂಸ್ಥೆಗಳನ್ನು ಆಹ್ವಾನಿಸಿ ಚಿಂತನೆ ನಡೆಸಲಾಗಿದೆ. ಹೀಗೆ ಎಲ್ಲಾ ಮೂಲಗಳಿಂದ ಪಡೆದ ಅರಿವಿನ ಆಧಾರದ ಮೇಲೆ ಪಠ್ಯಪುಸ್ತಕಗಳನ್ನು ಅಗತ್ಯವಿದ್ದಕಡೆ ಪರಿಷ್ಕರಿಸಲಾಗಿದೆ.

ಬಹುಮುಖ್ಯವಾದ ಇನ್ನೊಂದು ಸಂಗತಿಯನ್ನು ಇಲ್ಲಿ ಹೇಳಬೇಕು. ಕೇಂದ್ರೀಯ ಶಾಲಾ (ಎನ್.ಸಿ.ಇ.ಆರ್.ಟಿ) ಪಠ್ಯಪುಸ್ತಕಗಳ ಜೊತೆ ರಾಜ್ಯದ ಪಠ್ಯಪುಸ್ತಕಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿ ಸಲಹೆಗಳನ್ನು ನೀಡಲು ವಿಜ್ಞಾನ, ಗಣಿತ ಮತ್ತು ಸಮಾಜವಿಜ್ಞಾನಕ್ಕೆ ಸಂಬಂಧಿಸಿದಂತೆ ತಜ್ಞರ ಮೂರು

NOT TO BE REPUBLISHED © KTBS

ಸಮಿತಿಗಳನ್ನು ರಚಿಸಲಾಯಿತು. ಈ ಸಮಿತಿಗಳು ನೀಡಿದ ತೌಲನಿಕ ವಿಶ್ಲೇಷಣೆ ಮತ್ತು ಸಲಹೆಗಳನ್ನು ಆಧರಿಸಿ ರಾಜ್ಯ ಪಠ್ಯಪುಸ್ತಕಗಳ ಗುಣಮಟ್ಟವನ್ನು ಹೆಚ್ಚಿಸಲಾಗಿದೆ. ಕೇಂದ್ರೀಯ ಶಾಲಾ ಪಠ್ಯಪುಸ್ತಕಗಳಿಗಿಂತ ನಮ್ಮ ರಾಜ್ಯದ ಪಠ್ಯಪುಸ್ತಕಗಳ ಗುಣಮಟ್ಟ ಕಡಿಮೆಯಾಗದಂತೆ ಕಾಯ್ದುಕೊಳ್ಳಲಾಗಿದೆ. ಜೊತೆಗೆ ಆಂಧ್ರ, ತಮಿಳುನಾಡು, ಮಹಾರಾಷ್ಟ್ರ ರಾಜ್ಯಗಳ ಪಠ್ಯಪುಸ್ತಕಗಳ ಜೊತೆ ನಮ್ಮ ಪಠ್ಯಪುಸ್ತಕಗಳನ್ನು ಪರಿಶೀಲಿಸಲಾಗಿದೆ.

ಇನ್ನೊಂದು ಸ್ಪಷ್ಟನೆಯನ್ನು ನೀಡಲು ಬಯಸುತ್ತೇನೆ. ನಮ್ಮ ಸಮಿತಿಗಳು ಮಾಡಿರುವುದು ಪರಿಷ್ಕರಣೆಯೇ ಹೊರತು ಪಠ್ಯಪುಸ್ತಕಗಳ ಸಮಗ್ರ ರಚನೆಯಲ್ಲ. ಆದ್ದರಿಂದ ಈಗಾಗಲೇ ರಚಿತವಾಗಿರುವ ಪಠ್ಯಪುಸ್ತಕಗಳ ಸ್ವರೂಪಕ್ಕೆ ಎಲ್ಲಿಯೂ ಧಕ್ಕೆಯುಂಟುಮಾಡಿಲ್ಲ. ಲಿಂಗತ್ವ ಸಮಾನತೆ, ಪ್ರಾದೇಶಿಕ ಪ್ರಾತಿನಿಧ್ಯ, ರಾಷ್ಟ್ರೀಯ ಸಮಗ್ರತೆ, ಸಮಾನತೆ, ಸಾಮಾಜಿಕ ಸಾಮರಸ್ಯಗಳ ಹಿನ್ನೆಲೆಯಲ್ಲಿ ಕೆಲವು ಪರಿಷ್ಕರಣೆಗಳು ನಡೆದಿವೆ. ಹೀಗೆ ಪರಿಷ್ಕರಿಸುವಾಗ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ರಾಜ್ಯ ಪಠ್ಯಕ್ರಮ ಚೌಕಟ್ಟುಗಳನ್ನು ಮೀರಿಲ್ಲವೆಂದು ತಿಳಿಸಬಯಸುತ್ತೇವೆ, ಜೊತೆಗೆ ನಮ್ಮ ಸಂವಿಧಾನದ ಆಶಯಗಳನ್ನು ಅನುಸರಿಸಲಾಗಿದೆ. ಸಮಿತಿಗಳು ಮಾಡಿದ ಪರಿಷ್ಕರಣೆಯನ್ನು ಮತ್ತೊಮ್ಮೆ ಪರಿಶೀಲಿಸಲು ವಿಷಯವಾರು ಉನ್ನತ ಪರಿಶೀಲನ ಸಮಿತಿಗಳನ್ನು ರಚಿಸಿ ಅಭಿಪ್ರಾಯಪಡೆದು ಅಳವಡಿಸಲಾಗಿದೆ.

ಹೀಗೆ ಕ್ರಮಬದ್ಧವಾಗಿ ನಡೆದ ಕೆಲಸಕ್ಕೆ ತಮ್ಮನ್ನು ತಾವು ಸಂಪೂರ್ಣ ತೊಡಗಿಸಿಕೊಂಡ ೨೭ ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯರನ್ನು ಹಾಗೂ ಉನ್ನತ ಪರಿಶೀಲನಾ ಸಮಿತಿಯ ಸಮಸ್ತರನ್ನು ಕೃತಜ್ಞತೆಯಿಂದ ನೆನೆಯುತ್ತೇವೆ. ಅಂತೆಯೇ ಸಮಿತಿಗಳ ಕೆಲಸ ಸುಗಮವಾಗಿ ನಡೆಯುವಂತೆ ವ್ಯವಸ್ಥೆ ಮಾಡಲು ಕಾರ್ಯಕ್ರಮ ಅಧಿಕಾರಿಗಳಾಗಿ ನಿಷ್ಠೆಯಿಂದ ದುಡಿದ ಪಠ್ಯಪುಸ್ತಕ ಸಂಘದ ಎಲ್ಲಾ ಅಧಿಕಾರಿಗಳನ್ನೂ ನೆನೆಯುತ್ತೇವೆ. ಸಹಕರಿಸಿದ ಸಿಬ್ಬಂದಿಗೂ ನಮ್ಮ ವಂದನೆಗಳು. ಅಭಿಪ್ರಾಯ ನೀಡಿ ಸಹಕರಿಸಿದ ಸರ್ವ ಸಂಘಟನೆಗಳು ಮತ್ತು ತಜ್ಞರಿಗೆ ಧನ್ಯವಾದಗಳು.

@KTBS NOT TO BE REPUBLISHED

**(ಶ್ರೀಮತಿ ಪ್ರೇಮಾ ಹೆಚ್.ಎಂ.)**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು–೦೯

**(ಪ್ರೊ. ಬರಗೂರು ರಾಮಚಂದ್ರಪ್ಪ)**
ಸರ್ವಾಧ್ಯಕ್ಷರು
ರಾಜ್ಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು–೦೯

# ಪುನರ್ ಪರಿಶೀಲನೆಯ ಕುರಿತು

೨೦೧೪ರ ಶೈಕ್ಷಣಿಕ ವರ್ಷದಲ್ಲಿ ಪ್ರಕಟವಾದ ಪಠ್ಯಪುಸ್ತಕಗಳು ರಾಜಕೀಯ ಕಾರಣಗಳಿಗಾಗಿ ಅದೇ ವರ್ಷ ಪರಿಷ್ಕರಣೆಗೆ ಒಳಗಾದವು. ಪರಿಷ್ಕೃತ ಪಠ್ಯಪುಸ್ತಕಗಳು ೨೦೧೭–೧೮ರ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳ ಕೈ ತಲಪಿದವು. ಪರಿಷ್ಕೃತ ಪಠ್ಯಗಳಲ್ಲಾದ ಬದಲಾವಣೆಗಳ ಬಗ್ಗೆ ವ್ಯಾಪಕ ಟೀಕೆ, ವಿಮರ್ಶೆಗಳು ಬಂದವು. ಶಿಕ್ಷಣದ ಮೂಲ ಆಶಯಗಳನ್ನು ಬದಿಗಿಟ್ಟು ಸ್ವಹಿತಾಸಕ್ತಿಯ ಸಿದ್ಧಾಂತಗಳ ಪ್ರಚಾರಕ್ಕೆ ಪಠ್ಯಪುಸ್ತಕಗಳನ್ನು ಬಳಸಿಕೊಳ್ಳಲಾಯಿತೆಂಬ ಆಕ್ಷೇಪ ಎಲ್ಲೆಡೆಯಿಂದ ಕೇಳಿಬಂದ ಹಿನ್ನೆಲೆಯಲ್ಲಿ ಕರ್ನಾಟಕ ಸರಕಾರವು ೨೦೨೧ರಲ್ಲಿ ಈ ಪಠ್ಯಗಳ ಮರುಪರಿಶೀಲನೆ ನಡೆಸುವಂತೆ ಆದೇಶಿಸಿ ಒಂದು ಸಮಿತಿಯನ್ನು ರಚಿಸಿತು. ಈ ಸಮಿತಿಯು ಆಪಾದನೆ ಕೇಳಿಬಂದ ನಿರ್ದಿಷ್ಟ ಪಠ್ಯಪುಸ್ತಕಗಳನ್ನು ಆಮೂಲಾಗ್ರ ಪರಿಶೀಲಿಸಿ ಬದಲಾವಣೆಗಳನ್ನು ಸೂಚಿಸಿದೆ.

ಇಂದಿನ ಮಕ್ಕಳೇ ಮುಂದಿನ ಜನಾಂಗವೆಂಬ ಮಾತಿದೆ. ಶಾಲೆಗಳಲ್ಲಿ ಓದುವ ಇಂದಿನ ಮಕ್ಕಳಿಗೆ ನಾವು ಎಂಥ ಪಠ್ಯಗಳನ್ನು ಬೋಧಿಸುತ್ತೇವೆಂಬುದರ ಮೇಲೆ ಸಮಾಜದ ಭವಿಷ್ಯ ನಿಂತಿದೆ. ವಿದ್ಯಾರ್ಥಿಗಳು ಓದುವ ಪಠ್ಯಗಳು ಆರೋಗ್ಯಕರ ಚಿಂತನೆಗಳನ್ನು ಒಳಗೊಂಡಿರಬೇಕು. ಸಮಾಜದ ವಿವಿಧ ವರ್ಗ–ಸಮುದಾಯಗಳಲ್ಲಿ ಪರಸ್ಪರ ಅಪನಂಬಿಕೆ, ದ್ವೇಷ, ತಾತ್ಸಾರಗಳನ್ನು ಹರಡುವಂತಿರಬಾರದು. ಅವರಲ್ಲಿ ರಾಷ್ಟ್ರೀಯತೆಯನ್ನೂ ದೇಶಪ್ರೇಮವನ್ನೂ ಉದ್ದೀಪಿಸುವಂತಿರಬೇಕು. ರಾಜ್ಯ, ದೇಶಗಳಲ್ಲಿ ಆಗಿಹೋದ ಸಂಗತಿಗಳ ಬಗ್ಗೆ ನಿಖರವಾದ, ವಸ್ತುನಿಷ್ಠವಾದ ಮಾಹಿತಿ ದೊರೆಯುವಂತಿರಬೇಕು. ಅವರಿಗೆ ಸ್ಥಳೀಯ ಸಂಸ್ಕೃತಿ, ಭಾಷೆ, ಜನಪದಗಳ ಪರಿಚಯವಾಗುವಂತಿರಬೇಕು. ಒಟ್ಟಾರೆಯಾಗಿ ಪಠ್ಯಗಳು ವಿದ್ಯಾರ್ಥಿಗಳನ್ನು ಉತ್ತಮ, ಜವಾಬ್ದಾರಿಯುತ, ಪ್ರಜ್ಞಾವಂತ, ಮುಕ್ತ ಮನಸ್ಸಿನ, ಸಭ್ಯ ನಾಗರಿಕರನ್ನಾಗಿ ಮಾಡಬೇಕು. ಆ ಜವಾಬ್ದಾರಿಯನ್ನು ಗಮನದಲ್ಲಿರಿಸಿಕೊಂಡು ಪಾಠಗಳನ್ನು ಪರಿಷ್ಕರಣೆ ಮಾಡಬೇಕಾಯಿತು.

೨೦೧೪ರಲ್ಲಿ ಪರಿಷ್ಕರಣೆಗೆ ಒಳಗಾಗಿದ್ದ ಭಾಷಾ ಪಠ್ಯಗಳಲ್ಲಿ ನಮಗೆ ಅನೇಕ ಸಮಸ್ಯೆಗಳು ಕಂಡುಬಂದವು. ಅವುಗಳನ್ನು ಸರಿಪಡಿಸಲು ಪಠ್ಯಪುಸ್ತಕಗಳ ಪರಿಶೀಲನೆ, ಪರಿಷ್ಕರಣೆಗಳಲ್ಲಿ ನಾವು ನಮ್ಮದೇ ಆದ ಚೌಕಟ್ಟನ್ನು ನಿರ್ಮಿಸಿಕೊಂಡೆವು. ಭಾಷಾಪಠ್ಯವು ಇರುವುದು ವಿದ್ಯಾರ್ಥಿಯಲ್ಲಿ ಅಭಿವ್ಯಕ್ತಿಯ ಸಾಮರ್ಥ್ಯವನ್ನು ಉತ್ತಮಪಡಿಸುವುದಕ್ಕೆ. ಭಾಷಾಪಠ್ಯಗಳನ್ನು ಅಧ್ಯಯನ ಮಾಡಿದ ವಿದ್ಯಾರ್ಥಿಯಲ್ಲಿ ಭಾಷೆಯ ಬಗ್ಗೆ ಅಭಿಮಾನ ಮೂಡಬೇಕು; ಆತನ ಭಾಷಾಪ್ರೌಢಿಮೆ ಗಣನಾತ್ಮಕವಾಗಿ ಹೆಚ್ಚಬೇಕು. ಓದುವ, ಆಲಿಸುವ, ಮಾತಾಡುವ ಮತ್ತು ಬರೆಯುವ ಸಾಮರ್ಥ್ಯಗಳು ಸುಧಾರಿಸಬೇಕು. ಸ್ವತಂತ್ರವಾಗಿ ವಿದ್ಯಾರ್ಥಿಯು ತನ್ನ ಅಭಿಪ್ರಾಯ, ಅನಿಸಿಕೆಗಳನ್ನು ಅತ್ಯಂತ ಶಕ್ತಿಶಾಲಿಯಾಗಿ ಹೇಳುವುದಕ್ಕೆ ಸಾಧ್ಯವಾಗಬೇಕು. ೨೦೧೪ರಲ್ಲಿ ಪರಿಷ್ಕರಣೆಗೆ ಒಳಗಾದ ಪಠ್ಯಪುಸ್ತಕಗಳಲ್ಲಿ ಭಾಷೆಯ ಈ ಬಗೆಯ ಕಲಿಕೆಗೆ ಹಿನ್ನಡೆಯಾಗಿ ಕೇವಲ ಸಿದ್ಧಾಂತಪ್ರಚಾರವೇ ಮುನ್ನೆಲೆಗೆ ಬಂದಿದ್ದುದನ್ನು ಗಮನಿಸಿದೆವು. ಆ ಪಠ್ಯಗಳ ಮರುಪರಿಷ್ಕರಣೆಯ ಹೊತ್ತಿನಲ್ಲಿ ಈ ನಿಯಮಗಳನ್ನು ಹೇರಿಕೊಂಡೆವು: (೧) ಭಾಷಾಪಠ್ಯವಿರುವುದು ಅತ್ಯುತ್ತಮವಾದ ಪ್ರಾತಿನಿಧಿಕ ಪಠ್ಯವನ್ನು ಕೊಡುವುದಕ್ಕಾಗಿಯೇ ಹೊರತು ಸಾಮಾಜಿಕನ್ಯಾಯ, ಲಿಂಗಸಮಾನತೆ ಇತ್ಯಾದಿ ಅಂಶಗಳನ್ನು ತುರುಕುವುದಕ್ಕಲ್ಲ. ಹಾಗಾಗಿ ಭಾಷೆಯ ವೈವಿಧ್ಯ ಹಾಗೂ ವಿಶೇಷಗಳನ್ನು ಹೆಚ್ಚು ಕಾಣಿಸುವ ಗದ್ಯ/ಪದ್ಯ ಭಾಗಗಳನ್ನು ಆರಿಸಿಕೊಳ್ಳಬೇಕು. (೨) ಭಾಷೆಯ ಪಠ್ಯದ ಹೆಸರಿನಲ್ಲಿ ಸಿದ್ಧಾಂತಪ್ರಚಾರಕ್ಕೆ ಅವಕಾಶವಾಗಬಾರದು. (೩) ಗ್ರಾಂಥಿಕ ಭಾಷೆಯಲ್ಲದೆ ಮೌಖಿಕ ಪರಂಪರೆಯ ಹಾಗೂ ಹಲವು ಪ್ರಕಾರದ ಸಾಹಿತ್ಯಗಳಿಗೆ ಅವಕಾಶ ಕೊಡಬೇಕು. (೪) ಬಳಸಿದ ಭಾಷೆ, ಭಾಷಾಸೊಗಡು, ಪ್ರತಿಪಾದಿಸಿರುವ ವಿಚಾರ, ಹೊಸ ಚಿಂತನೆಗಳನ್ನು ಹುಟ್ಟಿಸುವ ಸಾಧ್ಯತೆ, ಸಾಹಿತ್ಯ ಪ್ರಕಾರದ ವೈಶಿಷ್ಟ್ಯ ಇತ್ಯಾದಿ ಎಲ್ಲ ಬಗೆಯಲ್ಲೂ ಪಾಠಗಳ ಗುಣಮಟ್ಟ ಅತ್ಯುತ್ತಮವಾಗಿರಬೇಕು. (೫) ಕವಿ/ಲೇಖಕರ ಪುನರಾವರ್ತನೆಯನ್ನು ಕಡಿಮೆ ಮಾಡಿ ಹೊಸ ಕವಿ/ಲೇಖಕರ ಬರಹಗಳಿಗೆ ಅವಕಾಶ ಮಾಡಿಕೊಡಬೇಕು. (೬) ಭಾಷೆಯ ಸೊಬಗನ್ನು ಪರಿಚಯಿಸುವ ಭಾಗಗಳನ್ನು ಪ್ರತಿ ಅಧ್ಯಾಯದ ಜೊತೆ ಸೇರಿಸಬೇಕು.

© KTBS
NOT TO BE REPUBLISHED

ಅತ್ಯುತ್ತಮ ಪಠ್ಯಪುಸ್ತಕ ಎಂಬುದು ಒಂದು ಆದರ್ಶಸ್ಥಿತಿ. ಅದರತ್ತ ನಡೆಯುವುದು ನಮ್ಮ ಆಶಯವೇ ಹೊರತು ನೂರಕ್ಕೆ ನೂರು ಅತ್ಯುತ್ತಮವಾದ ಪಠ್ಯಪುಸ್ತಕವನ್ನು ರಚಿಸುವುದು ಸಾಧ್ಯವಿಲ್ಲ. ಆ ವಿನಯದಿಂದಲೇ ನಾವು ಈ ಪುನರ್ ಪರಿಶೀಲನೆಯ ಕಾರ್ಯವನ್ನು ಮುಗಿಸಿ ಪಠ್ಯಗಳನ್ನು ನಿಮ್ಮ ಕೈಗಿಡುತ್ತಿದ್ದೇವೆ. ಇದು ಕೇವಲ ಮರುಪರಿಷ್ಕರಣೆಯೇ ಹೊರತು ಸಮಗ್ರ ಪುನಾರಚನೆಯಲ್ಲ. ಈಗಾಗಲೇ (೨೦೧೪ರಲ್ಲಿ) ರಚಿತವಾಗಿದ್ದ ಪಠ್ಯಪುಸ್ತಕದ ಆಶಯ ಮತ್ತು ಸ್ವರೂಪಕ್ಕೆ ಎಲ್ಲಿಯೂ ಧಕ್ಕೆಯುಂಟುಮಾಡಿಲ್ಲ. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ಅದನ್ನನುಸರಿಸಿ ಬಂದ ರಾಜ್ಯ ಪಠ್ಯಕ್ರಮ ಚೌಕಟ್ಟುಗಳನ್ನು ಮುಂದಿಟ್ಟುಕೊಂಡೇ ಇಡಿಯ ಮರುಪರಿಷ್ಕರಣೆಯ ಕಾರ್ಯ ನಡೆದಿದೆ. ಜೊತೆಗೆ ಸಂವಿಧಾನದ ಆಶಯಗಳನ್ನು ಎತ್ತಿಹಿಡಿಯಲಾಗಿದೆ. ಪರಿಷ್ಕರಣೆಯ ಕೆಲಸವನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಿಸಿರುವ ಪರಿಶೀಲನಾ ಸಮಿತಿಯ ನನ್ನ ಎಲ್ಲ ಸಹೋದ್ಯೋಗಿಗಳಿಗೆ ನಾನು ಕೃತಜ್ಞ, ಅಂತೆಯೇ ಸಮಿತಿಯ ಕೆಲಸ ಸುಗಮವಾಗಿ ನಡೆಯಲು ಸಹಕರಿಸಿದ ಪಠ್ಯಪುಸ್ತಕ ಸಂಘದ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿಗೂ ಆಭಾರಿ. ಈ ಪರಿಷ್ಕರಣೆಯು ಈಗಷ್ಟೇ ಬಂದಿರುವ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಆಶಯಗಳನ್ನು ಹೆಚ್ಚು ಪ್ರತಿಫಲಿಸುತ್ತ, ಮುಂದೆ ಬರಲಿರುವ ಸಮಗ್ರ ಪುನಾರಚಿತ ಪಠ್ಯಗಳಿಗೆ ಪ್ರವೇಶಿಕೆಯಾಗಲಿದೆ ಎಂಬ ಭರವಸೆ ನಮ್ಮದು.

**ಶ್ರೀಮತಿ ಪ್ರೇಮಾ ಹೆಚ್.ಎಂ.**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು-೦೫

**ರೋಹಿತ್ ಚಕ್ರತೀರ್ಥ**
ಅಧ್ಯಕ್ಷರು
ಕರ್ನಾಟಕ ಪಠ್ಯಪುಸ್ತಕಗಳ ಪರಿಶೀಲನಾ ಸಮಿತಿ

@KTBS NOT TO BE REPUBLISHED

## ಪುನರ್ ಪರಿಷ್ಕರಣಾ ಸಮಿತಿ

**ಶ್ರೀ ರೋಹಿತ್ ಚಕ್ರತೀರ್ಥ,** ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನಸೌಧ, ಬೆಂಗಳೂರು.

**ಸದಸ್ಯರು :**

**ಡಾ. ರೋಹಿಣಾಕ್ಷ,** ಸಹಾಯಕ ಪ್ರಾಧ್ಯಾಪಕರು, ಜಾನಪದಶಾಸ್ತ್ರ ಮತ್ತು ಬುಡಕಟ್ಟು ಅಧ್ಯಯನ ವಿಭಾಗ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಡಗಂಚಿ, ಅಳಂದ ರಸ್ತೆ, ಕಲಬುರಗಿ.

**ಶ್ರೀ ಚಿಕ್ಕದೇವೇಗೌಡ,** ಕನ್ನಡ ಭಾಷಾ ಶಿಕ್ಷಕರು, ಕರ್ನಾಟಕ ಪಬ್ಲಿಕ್ ಶಾಲೆ, ಉತ್ತರಹಳ್ಳಿ, ಬೆಂಗಳೂರು, ದಕ್ಷಿಣ ವಲಯ-೧.

**ಸಲಹೆಗಾರರು :**

**ಶ್ರೀಮತಿ ಪ್ರೇಮಾ ಹೆಚ್.ಎಂ.,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು-೦೫.

**ಶ್ರೀ ಗಂಗಣ್ಣಸ್ವಾಮಿ ಹೆಚ್. ಜಿ.,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು-೦೫.

**ಕಾರ್ಯಕ್ರಮ ಸಂಯೋಜಕರು :**

**ಶ್ರೀ ಬಿ. ಮೋಹನ್‌ಕುಮಾರ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು-೦೫.

# ಮುನ್ನುಡಿ

೨೦೨೩-೨೪ನೇ ಸಾಲಿನಲ್ಲಿ ಜಾರಿಯಲ್ಲಿರುವ ಒಂದರಿಂದ ಹತ್ತನೇ ತರಗತಿಯವರೆಗಿನ ಕನ್ನಡ ಭಾಷಾ ಪಠ್ಯಪುಸ್ತಕಗಳು ಮತ್ತು ಆರರಿಂದ ಹತ್ತನೇ ತರಗತಿಯವರೆಗಿನ ಸಮಾಜ ವಿಜ್ಞಾನ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವುದಕ್ಕಾಗಿ ವಿಷಯ ತಜ್ಞರು, ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರು ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಬೋಧಿಸುವವರು ಸದಸ್ಯರಾಗಿದ್ದ ಐದು ಸಮಿತಿಗಳನ್ನು ರಚಿಸಿ, ಸರ್ಕಾರವು ಆದೇಶವನ್ನು ಹೊರಡಿಸಿತು. ಈ ಸಮಿತಿಗಳು ಮೂರು ತಿಂಗಳಿಗೂ ಹೆಚ್ಚು ಕಾಲ ಪರಿಷ್ಕರಣೆಯ ಕಾರ್ಯವನ್ನು ನೆರವೇರಿಸಿದೆ. ಪ್ರಸ್ತುತ ಪರಿಷ್ಕರಣೆಗೆ ಸಂಬಂಧಿಸಿದಂತೆ ಈ ಕೆಳಗಿನ ಅಂಶಗಳನ್ನು ಸ್ಪಷ್ಟಪಡಿಸಲು ಬಯಸುತ್ತೇವೆ.

೧. ರಾಷ್ಟ್ರೀಯ ಹಾಗೂ ರಾಜ್ಯ ಪಠ್ಯಕ್ರಮ ಚೌಕಟ್ಟುಗಳು ಮತ್ತು ಸಂವಿಧಾನದ ಆಶಯಗಳಿಗೆ ವ್ಯತಿರಿಕ್ತವಾಗದಂತೆ, ಪರಿಷ್ಕರಣೆಗೆ ಒಳಪಟ್ಟ ಪಠ್ಯಪುಸ್ತಕಗಳ ಮೂಲ ಸ್ವರೂಪ ಬದಲಾಗದಂತೆ, ವಿದ್ಯಾರ್ಥಿಗಳ ಶೈಕ್ಷಣಿಕ ಹಿತಾಸಕ್ತಿಯನ್ನಷ್ಟೇ ಗಮನದಲ್ಲಿರಿಸಿಕೊಂಡು ಈ ಪರಿಷ್ಕರಣೆಯನ್ನು ನಡೆಸಲಾಗಿದೆ.

೨. ಪ್ರಸ್ತುತ ಪರಿಷ್ಕರಣ ಸಮಿತಿಗೆ ಪೂರ್ವದಲ್ಲಿಯೇ ಶಾಲಾ ಶಿಕ್ಷಣ ಇಲಾಖೆಯು ಹೊರಡಿಸಿದ್ದ "೨೦೨೩-೨೪ನೇ ಸಾಲಿನ ಪಠ್ಯಪುಸ್ತಕಗಳ 'ತಿದ್ದೋಲೆ'ಯನ್ನು ಸಮಿತಿಯು ಅಳವಡಿಸಿಕೊಂಡಿದೆ.

೩. ವಿವಿಧ ಸಂಘಟನೆಗಳು, ವ್ಯಕ್ತಿಗಳು ಹಾಗೂ ಸರ್ಕಾರದ ಇಲಾಖೆಗಳು ಪಠ್ಯಪುಸ್ತಕದಲ್ಲಿ ನಿರ್ದಿಷ್ಟ ವಿಷಯಾಂಶವನ್ನು ಅಳವಡಿಸುವ/ಕೈಬಿಡುವ/ಪರಿಷ್ಕರಿಸುವ ಕುರಿತು ಮಾಡಿದ ಎಲ್ಲಾ ಮನವಿಗಳನ್ನು ಪರಿಶೀಲಿಸಿ ಸೂಕ್ತವೆನಿಸಿದ ಸಲಹೆಗಳನ್ನು ಅಳವಡಿಸಿಕೊಳ್ಳಲಾಗಿದೆ.

೪. ವಿವಿಧ ವ್ಯಕ್ತಿಗಳು, ಸಂಘಟನೆಗಳು ಸ್ವಯಂ ಪ್ರೇರಣೆಯಿಂದ ಅಪಾರ ಶ್ರಮ ಹಾಗೂ ವ್ಯವಧಾನದಿಂದ ಪಠ್ಯಪುಸ್ತಕಗಳಲ್ಲಿರುವ ವಿಸಂಗತಿ, ಆಶಯ ದೋಷ ಹಾಗೂ ಅಪಕಲ್ಪನೆಗಳನ್ನು ಜಾಲತಾಣಗಳಲ್ಲಿ ಹಾಗೂ ಪತ್ರಿಕೆಗಳಲ್ಲಿ ವ್ಯಾಪಕವಾಗಿ ಚರ್ಚಿಸಿದ್ದವು. ಈ ಬಹುತೇಕ ಎಲ್ಲಾ ಬರೆಹಗಳನ್ನು ಗಮನಿಸಿ, ಚರ್ಚಿಸಿ ಸೂಕ್ತ ಪರಿಷ್ಕರಣೆಯನ್ನು ಮಾಡಲಾಗಿದೆ.

೫. ನಿರ್ದಿಷ್ಟ ಪಠ್ಯಗಳನ್ನು ಬೋಧಿಸುವ ಶಿಕ್ಷಕರಿಂದ ಪಡೆದುಕೊಂಡ ಅಭಿಪ್ರಾಯಗಳು ಸಹ ಪ್ರಸ್ತುತ ಪರಿಷ್ಕರಣೆಯಲ್ಲಿ ಅಪಾರ ನೆರವು ನೀಡಿವೆ.

ವಿಷಯಾಂಶಗಳಿಗೆ ಸಂಬಂಧಿಸಿದ ಪರಿಷ್ಕರಣೆಯೊಂದಿಗೆ ಪಠ್ಯಪುಸ್ತಕಗಳಲ್ಲಿರುವ ಎಲ್ಲಾ ಬಗೆಯ ಅಂಕಿ ಅಂಶಗಳು, ಮಾಹಿತಿಗಳು ಮತ್ತು ನಕ್ಷೆಗಳನ್ನು ಈ ಪರಿಷ್ಕರಣೆಯ ಹೊತ್ತಿಗೆ ಲಭ್ಯವಿರುವ ಮಾಹಿತಿಗಳನ್ನು ಒಳಗೊಳ್ಳುವಂತೆ ನವೀಕರಿಸಲಾಗಿದೆ.

ಮಕ್ಕಳ ಪಠ್ಯಪುಸ್ತಕದ ಹೊರೆ ಕಡಿಮೆ ಮಾಡುವ ನಿಟ್ಟಿನಲ್ಲಿ ಎಲ್ಲಾ ಪಠ್ಯಪುಸ್ತಕಗಳನ್ನು ಪ್ರಸ್ತುತ ಶೈಕ್ಷಣಿಕ ವರ್ಷದಿಂದ ಎರಡು ಸಂಪುಟಗಳಾಗಿ ವಿಭಾಗಿಸುವ ಸರ್ಕಾರದ ನಿರ್ಣಯಕ್ಕೆ ಅನುಸಾರವಾಗಿ, ಎರಡೂ ಸಂಪುಟಗಳಲ್ಲಿನ ಕಲಿಕಾಂಶಗಳು/ಪಾಠಗಳು ಸರಳತೆಯಿಂದ ಸಂಕೀರ್ಣತೆಯೆಡೆಗೆ ಸಾಗುವಂತೆ ವ್ಯವಸ್ಥಿತವಾಗಿ ಅಳವಡಿಸಲಾಗಿದೆ.

ಈ ಪರಿಷ್ಕರಣಾ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡು ಕ್ಲುಪ್ತವಾಗಿ ಕಾರ್ಯನಿರ್ವಹಿಸಿದ ಐದೂ ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯರನ್ನು ಅದರಲ್ಲೂ ಪಠ್ಯ ಬೋಧನೆಯ ತಮ್ಮ ಅನುಭವವನ್ನು ಪರಿಷ್ಕರಣೆಯಲ್ಲಿ ಧಾರೆಯೆರೆದ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರನ್ನು ಕೃತಜ್ಞತೆಯಿಂದ ನೆನೆಯುತ್ತೇವೆ. ಪಠ್ಯಪುಸ್ತಕಗಳ ಕುರಿತು ತುಂಬ ಕಳಕಳಿಯಿಂದ ಗಂಭೀರ ಅಧ್ಯಯನ ನಡೆಸಿ ಬರೆಹಗಳನ್ನು ಪ್ರಕಟಿಸಿದ ವ್ಯಕ್ತಿಗಳು, ಸಂಘಟನೆಗಳು ಮಾಡಿದ ಶೋಧಗಳು ಪ್ರಸ್ತುತ ಪರಿಷ್ಕರಣೆಯ ಕಾರ್ಯಕ್ಕೆ ತುಂಬಾ ಸಹಾಯ ಮಾಡಿವೆ. ಅಂತಹ ಎಲ್ಲಾ ಸ್ಪಂದನೆಗಳಿಗೂ ನಾವು ಕೃತಜ್ಞರಾಗಿದ್ದೇವೆ.

ಸಮಿತಿಗಳ ಕೆಲಸ ಸುಗಮವಾಗಿ ನಡೆಯುವಂತೆ ವ್ಯವಸ್ಥೆ ಮಾಡಿದ ಇಲಾಖಾ ಅಧಿಕಾರಿಗಳು ಮತ್ತು ಪಠ್ಯಪುಸ್ತಕ ಸಂಘದ ಎಲ್ಲಾ ಅಧಿಕಾರಿಗಳಿಗೂ, ಸಿಬ್ಬಂದಿಗಳಿಗೂ ವಂದನೆಗಳು.

**ಶ್ರೀಮತಿ ಪ್ರೇಮಾ ಹೆಚ್.ಎಂ.**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ(ರಿ.)

**ಡಾ ಎಂ. ಜಿ. ಹೆಗಡೆ**
ಸಂಯೋಜಕರು
ಪಠ್ಯಪುಸ್ತಕ ಪರಿಷ್ಕರಣಾ ಸಮಿತಿ, ಬೆಂಗಳೂರು

©KTBS NOT TO BE REPUBLISHED

## ಪಠ್ಯಪುಸ್ತಕ ಪರಿಷ್ಕರಣಾ ಸಮಿತಿ–2024

**ಮುಖ್ಯ ಸಂಯೋಜಕರು :**

**ಡಾ. ಮಂಜುನಾಥ ಜಿ. ಹೆಗಡೆ,** 'ಅಹಲ್ಯ', ಚಿತ್ರಗಿ ಗ್ರಾಮ, ಕುಮಟಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ.

**ಅಧ್ಯಕ್ಷರು:**

**ಡಾ. ಅಂಜನಪ್ಪ,** ಪ್ರಾಧ್ಯಾಪಕರು, ಕನ್ನಡ ವಿಭಾಗ, ತುಂಗಾ ಮಹಾವಿದ್ಯಾಲಯ, ಆನಂದಗಿರಿ, ತೀರ್ಥಹಳ್ಳಿ, ಶಿವಮೊಗ್ಗ ಜಿಲ್ಲೆ.

**ಸದಸ್ಯರು:**

**ಡಾ. ಬಿ.ಸಿ. ನಾಗೇಂದ್ರ ಕುಮಾರ್,** ಪ್ರಾಧ್ಯಾಪಕರು, ಸರ್ಕಾರಿ ಕಲಾ ಕಾಲೇಜು, ಡಾ:ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು.

**ಶ್ರೀ ಚಿಕ್ಕದೇವೇಗೌಡ,** ಮುಖ್ಯೋಪಾಧ್ಯಾಯರು, ಸರ್ಕಾರಿ ಪ್ರೌಢಶಾಲೆ, ಅಗರ, ಕನಕಪುರ ರಸ್ತೆ, ಬೆಂಗಳೂರು.

**ಶ್ರೀ ಅಜಮೀರ ನಂದಾಪುರ,** ಮುಖ್ಯೋಪಾಧ್ಯಾಯರು, ಜನತಾ ಸೇವಾ ಅನುದಾನಿತ ಕನ್ನಡ ಮಾಧ್ಯಮ ಪ್ರೌಢ ಶಾಲೆ, ಗಂಗಾವತಿ, ಕೊಪ್ಪಳ ಜಿಲ್ಲೆ.

**ಶ್ರೀ ನರಸಿಂಹಮೂರ್ತಿ ಬಿ.ಕೆ.,** ಸ.ಶಿ., ಕರ್ನಾಟಕ ಪಬ್ಲಿಕ್ ಶಾಲೆ, ಸಾರಕ್ಕಿ, ಬೆಂಗಳೂರು.

**ಶ್ರೀಮತಿ ಸುಶೀಲಾ,** ಸ.ಶಿ., ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢ ಶಾಲಾ ವಿಭಾಗ), ಮದ್ದೂರು, ಮಂಡ್ಯ ಜಿಲ್ಲೆ.

**ಶ್ರೀ ವಿಶ್ವನಾಥ್ ಜಿ.ಎಸ್.,** ಸ.ಶಿ., ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸಿಂಧಿ, ನಗರ್ತಪೇಟೆ, ಬೆಂಗಳೂರು.

**ಶ್ರೀಮತಿ ನೇತ್ರಾವತಿ ಎಂ. ಎಸ್.,** ಸ.ಶಿ., ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಭುವನೇಶ್ವರಿನಗರ, ಬೆಂಗಳೂರು.

**ಸಲಹೆ ಮತ್ತು ಮಾರ್ಗದರ್ಶನ :**

**ಶ್ರೀಮತಿ ಪ್ರೇಮಾ ಹೆಚ್.ಎಂ.,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು–೦೩.

**ಶ್ರೀ ಗಂಗಣ್ಣಸ್ವಾಮಿ ಹೆಚ್. ಜಿ.,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು–೦೩.

**ಕಾರ್ಯಕ್ರಮ ಸಂಯೋಜಕರು :**

**ಶ್ರೀ ಬಿ. ಮೋಹನ್‌ಕುಮಾರ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು–೦೩.

NOT TO BE REPUBLISHED ©KTBS

# ಪರಿವಿಡಿ

B3U5I4


| ಕ್ರ.ಸಂ | ಗದ್ಯ ಭಾಗ | ಕೃತಿಕಾರರ ಹೆಸರು | ಪುಟ ಸಂಖ್ಯೆ |
|---|---|---|---|
| ೧ | ಮಗ್ಗದ ಸಾಹೇಬ | – ಬಾಗಲೋಡಿ ದೇವರಾಯ | ೧ |
| ೨ | ಸಾರ್ಥಕ ಬದುಕಿನ ಸಾಧಕ–ಡಿ.ವಿ.ಜಿ. | – ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ | ೧೩ |
| ೩ | ನೀರು ಕೊಡದ ನಾಡಿನಲ್ಲಿ | – ನೇಮಿಚಂದ್ರ | ೨೪ |
| ೪ | ಯಶೋಧರೆ | – ಮಾಸ್ತಿ ವೆಂಕಟೇಶ ಅಯ್ಯಂಗಾರ್ | ೩೩ |
| | **ಪದ್ಯ ಭಾಗ** | | |
| ೧ | ಕನ್ನಡಿಗರ ತಾಯಿ | – ರಾಷ್ಟ್ರಕವಿ ಎಂ. ಗೋವಿಂದ ಪೈ | ೪೬ |
| ೨ | ಭಾರತೀಯತೆ | – ಕೆ. ಎಸ್. ನರಸಿಂಹಸ್ವಾಮಿ | ೫೫ |
| ೩ | ಬೇವು ಬೆಲ್ಲದೊಳಿಡಲೇನು ಫಲ | – ಪುರಂದರದಾಸರು | ೬೧ |
| ೪ | ಸೋಮೇಶ್ವರ ಶತಕ | – ಪುಲಿಗೆರೆ ಸೋಮನಾಥ | ೬೫ |
| | **ಪಠ್ಯಪೂರಕ ಅಧ್ಯಯನ** | | |
| ೧ | ಸಾರ್ಥಕ (ಪದ್ಯ) | – ದಿನಕರ ದೇಸಾಯಿ | ೭೨ |
| ೨ | ಆಹುತಿ (ಗದ್ಯ) | – ಕೊಡಗಿನ ಗೌರಮ್ಮ | ೭೪ |
| ೩ | ಮಗಳಿಗೆ ಬರೆದ ಪತ್ರ | – ಜವಾಹರಲಾಲ್ ನೆಹರು ಅನುವಾದ : ತಿ.ತಾ.ಶರ್ಮ ಮತ್ತು ಸಿದ್ದುನಹಳ್ಳಿ ಕೃಷ್ಣಶರ್ಮ | ೭೯ |


@KTBS NOT TO BE REPUBLISHED

# ಗದ್ಯ ಭಾಗ

E1F2E7

# ೧. ಮಗ್ಗದ ಸಾಹೇಬ

**– ಬಾಗಲೋಡಿ ದೇವರಾಯ**

**ಪ್ರವೇಶ :** ಬಹಳ ಜನಪ್ರಿಯ ಸಾಹಿತ್ಯ ಪ್ರಕಾರಗಳಲ್ಲಿ ಸಣ್ಣ ಕಥೆಯೂ ಒಂದು. ಕಥೆಯನ್ನು ಹೇಳುವುದು ಹಾಗೂ ಕೇಳುವುದು ಮಾನವನ ಹುಟ್ಟುಗುಣ. ನಮ್ಮ ಹಿರಿಯರು ತಮ್ಮ ಮಕ್ಕಳಲ್ಲಿ ಆಸಕ್ತಿ ಕೆರಳಿಸಿ ಕುತೂಹಲ ಉಂಟುಮಾಡಲು, ಮನಸ್ಸಿಗೆ ಮುದ ನೀಡಲು ಮನಸ್ಸನ್ನರಳಿಸುವ ಕಥೆಗಳನ್ನು ಹೇಳುತ್ತಿದ್ದರು. ಈ ಕಥನ ಕಲೆಯು ವಿಸ್ತಾರಗೊಂಡು ಕೆಲವು ಸಾಹಿತಿಗಳು ವಸ್ತು, ಶೈಲಿ, ನಿರೂಪಣೆಗಳೆಲ್ಲದರಲ್ಲಿಯೂ ಪರಿಣಾಮಕಾರಿಯಾದ ಮಾರ್ಪಾಡುಗಳನ್ನು ಮಾಡಿ ಸಣ್ಣಕಥೆ ಎಂಬ ಸಾಹಿತ್ಯ ಪ್ರಕಾರವನ್ನು ಪ್ರಚುರಗೊಳಿಸಿದರು ಮತ್ತು ಸಂಕ್ಷಿಪ್ತತೆ, ವಾಸ್ತವತೆಗಳು ಇದರ ಗುಣಗಳಾಗಿವೆ. ಶಿಕ್ಷಣ, ಬದುಕಿನ ಏಳುಬೀಳುಗಳು, ಸ್ವಉದ್ಯೋಗ, ವಿಜ್ಞಾನ ಮೊದಲಾದವುಗಳು ಸಣ್ಣಕಥೆಗೆ ವಸ್ತುಗಳಾಗಿವೆ.

ಪ್ರಸ್ತುತ ಕಥೆಯಲ್ಲಿ ಬಹು ಮುಖ್ಯವಾಗಿ ಇಂದು ವಿನಾಶದ ಅಂಚಿನಲ್ಲಿರುವ ಗುಡಿಕೈಗಾರಿಕೆಗೆ ನಮ್ಮ ಶಿಕ್ಷಣದಲ್ಲಿ ನೀಡಬೇಕಾದ ಮಹತ್ವವನ್ನು ಸಾದರಪಡಿಸುವ ಉದ್ದೇಶವಿದೆ. ತಂದೆಯ ಆಸೆಯಂತೆ ಸರ್ಕಾರಿ ಉದ್ಯೋಗವನ್ನೇ ಅವಲಂಬಿಸದೆ, ಸ್ವಯಂ ಉದ್ಯೋಗ ಕಂಡುಕೊಳ್ಳುವ ಯುವಕನೊಬ್ಬ ರಾಷ್ಟ್ರಮಟ್ಟದ ಗೌರವಾದರಗಳಿಗೆ ಪಾತ್ರನಾಗುವುದೇ ಇಲ್ಲಿಯ ಕಥಾವಸ್ತು.

NOT TO BE REPUBLISHED © KTBS


ಮಗ್ಗದ ಸಾಹೇಬ ಅಂದರೆ ಅಬ್ದುಲ್ ರಹೀಮ್ ಸಾಹೇಬ್. ಅವನು ಮಗ್ಗವನ್ನು ಮುಟ್ಟದೆ ಇಪ್ಪತ್ತು ವರ್ಷಕ್ಕೂ ಹೆಚ್ಚಾಗಿದೆ. ಆದರೂ ಅವನನ್ನು ಮಗ್ಗದ ಸಾಹೇಬನೆಂದೇ ಕರೆಯುವುದು ವಾಡಿಕೆ. ಅವರ ಪೂರ್ವಜರು ಸಾಹೇಬ್ ಬಹಾದ್ದೂರ್ ಮಗ್ಗದ ಹುಸೇನ್ ಸಾಹೇಬರು ಜನಪ್ರಿಯ ಮತ್ತು ಧನವಂತ ವ್ಯಕ್ತಿಯಾಗಿದ್ದರು. ಅವರು ಮಸೀದಿ ಮಾತ್ರವಲ್ಲ; ದೇವಸ್ಥಾನವನ್ನೂ ಕಟ್ಟಿಸಿದ್ದರು. ಇಂದಿಗೂ ಈ ದೇವಸ್ಥಾನದಲ್ಲಿ ರಥೋತ್ಸವದ ಸಮಯದಲ್ಲಿ ಅವರ ಮನೆತನದ ಹಿರಿಯ ಪ್ರತಿನಿಧಿಗೆ ಎಲ್ಲರಿಗಿಂತಲೂ ಮುಂದಾಗಿ ಪ್ರಸಾದವನ್ನು ಪಡೆಯುವ ಹಕ್ಕಿದೆ.

ಇಂತಹ ಸಂಪ್ರದಾಯ ಪದ್ಧತಿಗಳು ಇಂದಿಗೂ ಕರ್ನಾಟಕದಲ್ಲಿ ನಡೆಯುತ್ತಿವೆ. ಇದರಿಂದ ಪೂರ್ವಜರಲ್ಲಿ ಎಂತಹ ಘನತೆ, ಸದಾಚಾರ, ಸದ್ಭಾವನೆಗಳು ಇದ್ದವು ಎಂದು ತಿಳಿಯುವುದು. ಉದಾಹರಣೆಗೆ ನನ್ನದೇ ಹುಟ್ಟೂರಿನ ಪಕ್ಕದಲ್ಲಿ ಮುಸಲ್ಮಾನರ ವಸತಿ ಇದೆ. ಅದರೊಳಗೆ ಒಂದು ಪವಿತ್ರ ಸ್ಥಾನವಿದೆ. ಅಲ್ಲಿ 'ಉರ್ಸ್' ಎಂಬ ಮುಸಲ್ಮಾನರ ಧಾರ್ಮಿಕ ಉತ್ಸವದ ಕಾಲದಲ್ಲಿ ನಮ್ಮ ಮನೆತನದ ಒಬ್ಬ ಪ್ರತಿನಿಧಿ ಇದ್ದೇ ಇರಬೇಕೆಂಬ ಸಂಪ್ರದಾಯ ಇತ್ತು.

ಹಾಗೆಯೇ ಗಣೇಶಚತುರ್ಥಿ, ಕೃಷ್ಣಾಷ್ಟಮಿಗಳ ಮರುದಿನ ಮುಸಲ್ಮಾನ ಸಮಾಜದ ಪ್ರತಿಷ್ಠಿತ ಮುಖ್ಯಸ್ಥರು ನಮ್ಮ ಮನೆಗೆ ಬರುವುದು, ಕುಶಲೋಪಚಾರ ಮಾತನಾಡುವುದು, ನಾವು ಅವರಿಗೆ ಮೋದಕ, ಉಂಡೆ, ಚಕ್ಕುಲಿ ಇತ್ಯಾದಿ ಹಬ್ಬದ ಭಕ್ಷ್ಯ-ಭೋಜ್ಯಗಳನ್ನು ವಿತರಣೆ ಮಾಡುವ ಸಂಪ್ರದಾಯವಿತ್ತು. ಒಂದು ಬಾರಿ ನಮ್ಮ ತಾಯಿ ಕಾಯಿಲೆ ಬಿದ್ದ ಕಾರಣ ತಂದೆಯವರು ಅಂಗಡಿಯಿಂದ ಲಡ್ಡುಗಳನ್ನು ಕೊಂಡು ಕೊಟ್ಟುದಕ್ಕೆ ಅವರಿಗೆ ಬಹಳ ಸಿಟ್ಟು ಬಂತು. 'ರಾಯರೆ, ಅಂಗಡಿಯಿಂದ ತೆಗೆದುಕೊಳ್ಳಲು ನಮ್ಮಲ್ಲಿ ಹಣವಿಲ್ಲವೆ? ಮನೆಯಲ್ಲಿ ಕಾಯಿಲೆಯಿದ್ದರೆ ಒಂದು ತುಂಡು ಬೆಲ್ಲವನ್ನೋ ಕಲ್ಲುಸಕ್ಕರೆ ಹರಳನ್ನೋ ಕೊಡಿ. ನಿಮ್ಮ ಹಬ್ಬದ ಪೂಜೆಯ ಪ್ರಸಾದವನ್ನು ನಾವು ತೆಗೆದುಕೊಳ್ಳುವುದು ತಲತಲಾಂತರದಿಂದ ಬಂದ ಹಳೆಯ ಸಂಪ್ರದಾಯ. ಅಂಗಡಿಯ ಮಿಠಾಯಿಯನ್ನು ಪ್ರಸಾದವೆಂದು ಕೊಡುವುದು ಸರಿಯೇ?' ಎಂದು ಕೇಳಿಯೇ ಬಿಟ್ಟಿದ್ದರು.

ಅದು ಹೇಗೇ ಇರಲಿ. ಈಗ ಅಬ್ದುಲ್ ರಹೀಮನಿಗೆ 'ಮಗ್ಗದ ಸಾಹೇಬ' ಎಂದು ಹೇಳಿದರೆ ಬಹು ಸಿಟ್ಟು ಬರುತ್ತಿತ್ತು. "ಅನಿಷ್ಟ ಮಗ್ಗದ ಹೆಸರೆತ್ತಬೇಡಿ"-"ಮಗ್ಗವಲ್ಲ ಕೊರಳಿಗೆ ಹಗ್ಗ!" ಎಂಬುದು ಆತನ ನಿರಾಶೆ, ರೋಷಗಳ ಉದ್ಗಾರವಾಗಿತ್ತು.

ಏಕೆಂದರೆ ಅವನ ಅಜ್ಜನ ಕಾಲದಲ್ಲಿ ಬ್ರಿಟಿಷರು ಅಗ್ಗದ ವಿಲಾಯತಿ ಮಿಲ್ಲಿನ ಬಟ್ಟೆಗಳನ್ನು ನಮ್ಮ ದೇಶದಲ್ಲಿ ಹೇರಿಬಿಟ್ಟರು. ಅವೇನೋ ನಿಜಕ್ಕೂ ನಿಕೃಷ್ಟ ವಸ್ತುಗಳು, ಒಂದು ವರ್ಷದೊಳಗೇ ಕಳೇಬರಗಳಾಗಿ ಹರಕು ಚಿಂದಿಯಾಗುವುವು. ಬಣ್ಣವೋ ಒಂದೇ ತಿಂಗಳಲ್ಲಿ ವಿವರ್ಣವಾಗಿ ಎರಡೇ ತಿಂಗಳಲ್ಲಿ ಮಾಯವಾಗುವುದು. ಆದರೇನು? ಬಹು ಅಗ್ಗ. ಜನರಿಗೆ ಬೇಕಾದುದು ಅಗ್ಗದ ವಸ್ತು. ಗುಣವನ್ನು ಯಾರು ಕೇಳುತ್ತಾರೆ? ಅಗ್ಗದ ಮಾಲಿನದೇ ಆಧಿಪತ್ಯವಾಯಿತು. ಮಗ್ಗದವರು ಭಿಕಾರಿಗಳಾದರು. ಅವರ ಅನ್ನಕ್ಕೆ ಸಂಚಕಾರವಾಯಿತು.



©KTBS NOT TO BE REPUBLISHED

ಪಾಪ! ಅಬ್ದುಲ್ ರಹೀಮನ ಗತಿ? ಹಿರಿಯರು ಕಟ್ಟಿದ ಭವ್ಯವಾದ ಹಳೆಯ ಕಾಲದ ಮನೆ. ವಿಶಾಲವಾದ ತೋಟ. ಆದರೆ ಮಗ್ಗಗಳೆಲ್ಲಾ ಧೂಳು ತುಂಬಿ ಜೇಡನ ಬಲೆಗಳಿಂದ ಆಚ್ಛಾದಿತವಾಗಿವೆ. ಮನೆಯಲ್ಲಿ ಊಟಕ್ಕೆ ಇದೆಯೋ ಇಲ್ಲವೋ ಎಂಬಂತಾಗಿದೆ.

ಈಗ ಅವನಿಗೆ ಒಂದೇ ಹಠ, ಒಂದೇ ವ್ರತ. ಅವನ ಮೂವರು ಗಂಡುಮಕ್ಕಳಿಗೆ ಒಂದಿಷ್ಟಾದರೂ ವಿದ್ಯಾಭ್ಯಾಸ ಕೊಡಿಸಿ ಸರಕಾರಿ ನೌಕರರನ್ನಾಗಿ ಮಾಡಬೇಕು ಎಂದು. ಅಂತೆಯೇ ಇಬ್ಬರು ಮಕ್ಕಳು ವಿಧೇಯರಾಗಿ ಅವನ ಅಭೀಷ್ಟವನ್ನು ನೆರವೇರಿಸಿದರು. ಒಬ್ಬ ಸರಕಾರಿ ಕಚೇರಿಯಲ್ಲಿ ಗುಮಾಸ್ತನಾದ. ಇನ್ನೊಬ್ಬ ಪೋಸ್ಟ್ ಮಾಸ್ತರನಾದ. ಆದರೆ ಕೊನೆಯ ಮಗ ಕರೀಮ್‌ನಿಂದ ಬಹಳ ನಿರಾಸೆ ಉಂಟಾಯಿತು. ಕರೀಮ್ ಆಟದಲ್ಲೂ ಪಾಠದಲ್ಲೂ ಬಹು ಚುರುಕು; ಬುದ್ಧಿವಂತ; ಹಸನ್ಮುಖಿ ಎಲ್ಲರಿಗೂ ಬೇಕಾದವನು. ಆದರೆ ಏನೋ ಕಾರಣದಿಂದ ಅವನಿಗೆ ಅನಿಷ್ಟ ಮಗ್ಗದಲ್ಲಿ ಬಹಳ ಅಭಿರುಚಿ, ಮನೆಯಲ್ಲಾದರೋ ಮಗ್ಗವನ್ನು ಮುಟ್ಟಲೂ ತಂದೆ ಬಿಡುತ್ತಿರಲ್ಲಿಲ್ಲ. ಆದರೆ ಮಗನ ಗ್ರಹಚಾರ ಎನ್ನಿ. ಶಾಲೆಯಲ್ಲಿಯೇ ಮಗ್ಗ ಉದ್ಭವಿಸಬೇಕೇ?

ಮಹಾತ್ಮಾ ಗಾಂಧಿ ಪ್ರೇರಣೆಯಿಂದ ಕೆಲವು ಶಾಲೆಗಳಲ್ಲಿ 'ನವೀನ ಶಿಕ್ಷಣ' ಆರಂಭವಾಯಿತು. ಈ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳಿಗೆ ಹಲವು ತರಹದ ಔದ್ಯೋಗಿಕ ಶಿಕ್ಷಣವನ್ನು ಕೊಡುವುದು, ಅವರಲ್ಲಿ ಹಸ್ತಕೌಶಲವನ್ನು, ದೇಹಶ್ರಮದಲ್ಲಿ ಗೌರವ-ಭಾವವನ್ನು ಉಂಟು ಮಾಡುವುದು ಒಂದು ಭಾಗವಾಗಿತ್ತು. ಕೆಲವರಿಗೆ ಬಡಗಿಯ ಕೆಲಸ, ಕೆಲವರಿಗೆ ಬೆತ್ತದ ಕುರ್ಚಿ ಕೆಲಸ ಇತ್ಯಾದಿ ಸಾಮಗ್ರಿಗಳನ್ನು ಮಾಡುವ, ಕೆಲವರಿಗೆ ಕೃಷಿ, ಕೆಲವರಿಗೆ ಮಗ್ಗದ ಕೆಲಸವನ್ನು ಕಲಿಸತೊಡಗಿದ್ದರು.

ಹುಡುಗ ಕರೀಮ್ ಮಗ್ಗದ ಕೆಲಸವನ್ನು ಮೀನು ನೀರಿನಲ್ಲಿ ಈಜುವಷ್ಟೇ ಸುಲಭವಾಗಿ ಕಲಿತು ಬಹು ನಿಪುಣನಾಗಿಬಿಟ್ಟ. ಅವನ ತಂದೆಗೆ ರೋಷ ಉಕ್ಕಿಬಂತು. ಮುಖ್ಯೋಪಾಧ್ಯಾಯ ಶಂಕರಪ್ಪ ಅವರೊಡನೆ ನಿಷ್ಠುರವಾಗಿ ಜಗಳವಾಡಿದ್ದನು. ಆದರೆ ಹುಡುಗ ಕರೀಮ್ ಶಾಲೆಯ ಮಗ್ಗದಲ್ಲಿ ಒಂದು ಪರಿವರ್ತನೆಯನ್ನು ತನ್ನದೇ ಬುದ್ಧಿವಂತಿಕೆ ಹಾಗೂ ಕೌಶಲದಿಂದ ಮಾಡಿಬಿಟ್ಟಿದ್ದ. ಅದನ್ನು ಶಂಕರಪ್ಪ ಅವರು ಸ್ವಾಭಾವಿಕವಾಗಿಯೇ ಪ್ರಶಂಸೆ ಮಾಡಿ ಮೇಲಧಿಕಾರಿಗಳಿಗೆ ವರದಿ ಮಾಡಿದ್ದರು. ಅದರ ಫಲಸ್ವರೂಪವಾಗಿ ಸರಕಾರದಿಂದ ಹುಡುಗ ಕರೀಮ್‌ನಿಗೆ ಒಂದು ಬೆಳ್ಳಿಯ ಪದಕವೂ ಒಂದು ನೂರು ರೂಪಾಯಿಯ ಬಹುಮಾನವೂ ಬಂದುಬಿಟ್ಟವು.

ಹುಡುಗನ ಉತ್ಸಾಹ ಆಕಾಶಕ್ಕೇರಿತು. ತಂದೆ ಈ ಹಠಮಾರಿಗೆ ಮಗ್ಗದ ಹುಚ್ಚನ್ನು ಬಿಡಿಸಬೇಕೆಂದು ಶಾಲೆಯಿಂದಲೇ ಬಿಡಿಸಿಬಿಟ್ಟನು. ಹೆಡ್‌ಮಾಸ್ಟರ್ ಶಂಕರಪ್ಪ ಅವರ ಎಷ್ಟೋ ಅನುನಯ ವಿನಯಗಳನ್ನು ಗಣಿಸದೆ ನಿರಾಕರಿಸಿದನು.

ಒಂದು ದಿನ ಶಾಲೆಯ ವಾರ್ಷಿಕೋತ್ಸವ ಸಮಾರೋಪದಲ್ಲಿ ಹಳೆಯ ವಿದ್ಯಾರ್ಥಿಗಳ ಒಂದು ನಾಟಕವಿತ್ತು. ಅದರಲ್ಲಿ ಕರೀಮನದು ಸ್ತ್ರೀಪಾತ್ರ. ಅದಕ್ಕೆಂದು ತಾಯಿಯಿಂದ ಗೌಪ್ಯವಾಗಿ ಹಳೆಕಾಲದ

©KTBS NOT TO BE REPUBLISHED

ಚಿನ್ನದ ಸರವನ್ನು ಅಲಂಕಾರಕ್ಕೆಂದು ಎರವಲು ತೆಗೆದುಕೊಂಡ. ನಾಟಕ ಮುಗಿದ ನಂತರ ಮನೆಗೆ ಬರಲಿಲ್ಲ. ಎಲ್ಲೋ ಮಾಯವಾಗಿ ಹೋದ.

ತಂದೆಗೆ ಮೈಯಲ್ಲಿ ಅಗ್ನಿಸಂಚಾರವಾಯಿತು. ಮಗನನ್ನು ಕ್ರೂರವಾಗಿ ಶಪಿಸಿದನು. "ಹಾಳಾಗಿ ಹೋಗಲಿ! ಹತಮಾರಿ. ತಂದೆಯ ಮಾತನ್ನು ಉಲ್ಲಂಘಿಸಿದವನು ಎಂದು  ಮಾತ್ರ ತಿಳಿದಿದ್ದೆ. ಈಗ ಕಳ್ಳನೆಂದೂ ತಿಳಿಯಿತು. ನನಗೆ ಇಬ್ಬರೇ ಗಂಡು ಮಕ್ಕಳು ; ಕಳ್ಳನಾದವನು, ಮನೆಬಿಟ್ಟು ಓಡಿಹೋದವನು ಮಗನೇ ಅಲ್ಲ" ಎಂದು ಆಣೆ ಹಾಕಿದನು.

ಕೆಲವು ವರ್ಷಗಳ ಅನಂತರ ಕರೀಮ್ – ಈಗ ಬೆಳೆದು ಯುವಕನಾಗಿದ್ದಾನೆ – ಮನೆಗೆ ಬಂದು ಬಾಗಿಲು ತಟ್ಟಿದ. ತಂದೆ ಬಾಗಿಲು ತೆರೆದು ಮುಖ ನೋಡಿ ಫಟಾರನೆ ಬಾಗಿಲು ಮುಚ್ಚಿದ.  ಒಂದು ಘಂಟೆ ಬಾಗಿಲು ತಟ್ಟಿದರೂ ತಾಯಿ ಅತ್ತು ಹಂಬಲಿಸಿದರೂ  ಬಾಗಿಲು ತೆರೆಯಲೇ ಇಲ್ಲ.

ಕೊನೆಗೆ ನಿವೃತ್ತರಾಗಿರುವ ಶಂಕರಪ್ಪ ಅವರ ಮನೆಗೆ ಹೋಗಿ, ಸಂಧಾನ ಮಾಡಿಸಿರಿ ಎಂದು ನಿವೇದಿಸಿದ. 'ನನ್ನ ಮುಖವನ್ನೇ ನೋಡಬಾರದು ಎಂದು ಹಠವಿದ್ದರೆ ಕೊನೆಗೆ ತಾಯಿಯಾದರೂ ನನ್ನನ್ನು ಕಾಣಬಾರದೆ? ಅಮ್ಮನ ಚಿನ್ನದ ಸರವನ್ನು ತಂದಿದ್ದೇನೆ. ಅದರೊಡನೆ ಹತ್ತುಸಾವಿರ ರೂಪಾಯಿಗಳನ್ನು ತಂದಿದ್ದೇನೆ. ಅವನ್ನಾದರೂ ತಾಯಿಯ ಕಾಲ ಮೇಲೆ ಹಾಕಿ ಹೋಗುತ್ತೇನೆ. ತಂದೆಯವರಿಗೆ ಸಮಾಧಾನ ಹೇಳಿ. ನಿಮ್ಮ ಹಳೆಯ ಶಿಷ್ಯನಿಗೆ ಇದೊಂದು ಉಪಕಾರ ಮಾಡಿ' ಎಂದ.

© KTBS NOT TO BE REPUBLISHED



ಶಂಕರಪ್ಪ ಅವರು ಮುದುಕನೊಡನೆ ಒಂದು ಗಂಟೆ ಗೋಗರೆದರು, ನಿವೇದಿಸಿದರು, ತರ್ಕಿಸಿದರು, ಚರ್ಚಿಸಿದರು. ಆದರೆ ನಿಷ್ಫಲವಾಯಿತು. ಒಂದು ಪದವನ್ನೂ ಕೇಳುವ ತಾಳ್ಮೆ ಮುದುಕನಿಗೆ ಇರಲಿಲ್ಲ. 'ಸಾಹೇಬ್ ಬಹಾದ್ದೂರ್ ಹುಸೇನ್ ಸಾಹೇಬರ ಕೀರ್ತಿಗೆ ಮಸಿಹಚ್ಚಿದ್ದಾನೆ. ಈ ಮಾತಿನಲ್ಲಿ ನೀವು ಅಡ್ಡಬಾಯಿ ಹಾಕಬೇಡಿ. ನೀವು ಕಲಿಸಿದ ಪಾಠದಿಂದಲೇ ಈ ಹತಮಾರಿ ನಮ್ಮ ವಂಶದ ಕೀರ್ತಿಯನ್ನು

ಮಣ್ಣುಪಾಲು ಮಾಡಿದ. ಹಣ ತಂದಿದ್ದಾನಂತೆ. ಕಳವಿನ ಹಣವೋ? ದರೋಡೆಯ ಹಣವೋ?' ಎಂದು ಸಿಡುಕಿದ. ಶಂಕರಪ್ಪ ಅವರು ಮುಖಬಾಡಿಸಿಕೊಂಡು ಹಿಂತೆರಳಿದರು.

ಕರೀಮ್‌ನ ಹಣ ಕಳವಿನದೂ ಅಲ್ಲ. ದರೋಡೆಯದೂ ಅಲ್ಲ. ಸಣ್ಣಪ್ರಾಯದಲ್ಲೇ ಮಗ್ಗದ ಸಹಕಾರಿ ಸಂಘವೊಂದನ್ನು ಸ್ಥಾಪಿಸಿ ಅವನೀಗ ಅದರ ಅಧ್ಯಕ್ಷನಾಗಿದ್ದಾನೆ. ಸಾಕಷ್ಟು ಯಶಸ್ವಿಯೂ ಧನವಂತನೂ ಆಗಿದ್ದಾನೆ. ಅದೂ ಅಲ್ಲದೆ ಮಗ್ಗದ ಯಂತ್ರದ ಪ್ರಯೋಗದಲ್ಲಿ ಹೊಸ ಹೊಸ ಸುಧಾರಣೆಗಳನ್ನೂ ಪರಿವರ್ತನೆಗಳನ್ನೂ ತಂದು ಹೆಸರು ಮಾಡಿದ್ದಾನೆ. ಆದರೆ ಈ ವಿಷಯದ ಲವಲೇಶವೂ ತಂದೆಗೆ ತಿಳಿಯದು. ಏಕೆಂದರೆ ಆತ ಕರೀಮ್‌ನ ಕಡೆಗೆ ತನ್ನ ಹೃದಯವನ್ನು, ಮನೆಯ ಬಾಗಿಲು ಮುಚ್ಚಿದಂತೆ–ಸಂಪೂರ್ಣವಾಗಿ ಮುಚ್ಚಿಬಿಟ್ಟಿದ್ದಾನೆ. ಯಾರಾದರೂ ಕರೀಮ್‌ನ ಹೆಸರೆತ್ತಿದರೆ 'ನನಗೆ ಎರಡೇ ಮಕ್ಕಳು, ಕಳ್ಳರ ಪರಿಚಯ ನನಗಿಲ್ಲ' ಎಂದೇ ಅವನ ನಿಷ್ಠುರದ ಉತ್ತರ.

ಕೆಲವು ವರ್ಷಗಳ ಅನಂತರ ಅಬ್ದುಲ್ ರಹೀಮ್ ಹಾಸಿಗೆಯಲ್ಲಿ ಒರಗಿದ್ದಾನೆ. ಅನಾರೋಗ್ಯದಿಂದ ನರಳುತ್ತಾ ಇದ್ದಾನೆ. ಎಲುಬಿನ ಹಂದರವಾಗಿದ್ದಾನೆ. ಕಣ್ಣೂ ಸರಿಯಾಗಿ ಕಾಣಿಸುತ್ತಿಲ್ಲ; ಕಿವಿಯೂ ಸರಿಯಾಗಿ ಕೇಳುತ್ತಿಲ್ಲ. ಶಂಕರಪ್ಪ ಅವರು ಬಾಗಿಲು ತಟ್ಟಿದರು. ಒಳಗೆ ಬಂದರು. ಕೈಯಲ್ಲಿ ಒಂದು ವಾರ್ತಾಪತ್ರಿಕೆ. 'ರಹೀಮ್ ಸಾಹೇಬರೇ, ಈ ಪತ್ರಿಕೆ ನೋಡಿದಿರಾ? ಈ ಭಾವಚಿತ್ರ ನೋಡಿ?' ಮುದುಕ ಕಣ್ಣಿನ ಹತ್ತಿರ ತಂದ. ಆದರೆ ಪಾಪ! ಕಣ್ಣು ಮಂಜಾಗಿವೆ. ಏನೂ ತೋರದು. ಅವನ ಹೆಂಡತಿ ಬಂದು ವಾರ್ತಾಪತ್ರಿಕೆ ತೆಗೆದುಕೊಂಡು ಹೋದಳು.

"ಕರೀಮ್! ನಮ್ಮ ಕರೀಮ್! ನಮ್ಮ ಕರೀಮ್" ಎಂದು ಗಟ್ಟಿಯಾಗಿ ಉದ್ಗರಿಸಿದಳು.

"ಏನು? ಜೇಲಿಗೆ ಹೋದನೇ? ಫಾಶೀ ಆಯಿತೇ? ಇನ್ನೂ ಮನೆತನದ ಮೇಲೆ ಏನು ಅಪಕೀರ್ತಿ ಹೇರಿದ್ದಾನೆ?" ಎಂದು ಮುದುಕ ಕೆಮ್ಮುತ್ತ ಕೆಮ್ಮುತ್ತ ಗರ್ಜಿಸಿದ.

"ರಹೀಮ್ ಸಾಹೇಬರೇ, ನಿಮ್ಮ ಮಗ ಕರೀಮ್‌ನಿಗೆ ರಾಷ್ಟ್ರಪತಿ ಅವರು ಪದ್ಮಭೂಷಣ ಬಿರುದನ್ನು ಕೊಟ್ಟಿದ್ದಾರೆ. ಅದರ ಭಾವಚಿತ್ರ ಈ ವಾರ್ತಾಪತ್ರಿಕೆಯಲ್ಲಿದೆ."


"ಆಂ! ಪದ್ಮಭೂಷಣ! ಅಂದರೇನು?"

"ಪದ್ಮಭೂಷಣ ಅಂದರೆ ಸಾಹೇಬ್ ಬಹಾದ್ದೂರ್‌ಗಿಂತಲೂ ಮೇಲಿನ ಬಿರುದು. ಖಾನ್ ಸಾಹೇಬ್, ಖಾನ್ ಬಹಾದ್ದೂರ್, ದಿವಾನ್ ಬಹಾದ್ದೂರ್ ಇವೆಲ್ಲದರಿಂದಲೂ ಮೇಲೆ, ದೊಡ್ಡ ಬಿರುದು!"

"ಕರೀಮ್! ನನ್ನ ಕರೀಮ್! ಸಾಹೇಬ್ ಬಹಾದ್ದೂರ್‌ಗಿಂತಲೂ ಮೇಲಾದನೇ? ದೇವರು ದೊಡ್ಡವನು. ದೇವರು ದಯಾಳು. ನನ್ನ ಬಾಯಿಯಿಂದ ಬಿದ್ದ ಕೆಟ್ಟ ಮಾತನ್ನು ದೇವರು ಕಿವಿಗೆ ಹಾಕಿಕೊಳ್ಳಲಿಲ್ಲ. ನನ್ನ ಕರೀಮ್ ಮಗ್ಗದ ಹುಸೇನ್ ಸಾಹೇಬರ ಹೆಸರಿಗೆ ಕೀರ್ತಿ ತಂದ" ಎಂದು ಕೆಮ್ಮುತ್ತ ಕೆಮ್ಮುತ್ತ ಬಿಕ್ಕಿಬಿಕ್ಕಿ ಅಳತೊಡಗಿದ ಭಾವುಕನಾಗಿ.

@KTBS NOT TO BE REPUBLISHED

## ಕೃತಿಕಾರರ ಪರಿಚಯ



**ಬಾಗಲೋಡಿ ದೇವರಾಯ** ಅವರು (೧೯೨೭) ದಕ್ಷಿಣ ಕನ್ನಡ ಜಿಲ್ಲೆಯ **ಬಾಗಲೋಡಿ**ಯವರು. ಮಂಗಳೂರಿನ ಸರ್ಕಾರಿ ಕಾಲೇಜಿನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದರು. ಆ ಕಾಲಕ್ಕೆ ಐ.ಎ.ಎಸ್. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ವಿದೇಶಿ ಸೇವೆಗೆ ಆಯ್ಕೆಯಾದರು. ಮಾಸ್ತಿ ಹಾಗೂ ಇವರೂ ಸಮಕಾಲೀನರು. ಅದಲ್ಲದೆ ಸಣ್ಣಕತೆಗಳನ್ನು ಬರೆದವರು. ಅವರು ರಾಯಭಾರಿಯಾಗಿ **ಇಟಲಿ, ನೇಪಾಳ, ನೈಜೀರಿಯಾ, ಫಿಲಿಫೈನ್ಸ್, ನ್ಯೂಜಿಲ್ಯಾಂಡ್, ಬಲ್ಗೇರಿಯಾ** ಮೊದಲಾದ ದೇಶಗಳಲ್ಲಿ ಕಾರ್ಯನಿರ್ವಹಿಸಿದರು. ಅವರ ಕಥಾಸಂಗ್ರಹಗಳೆಂದರೆ **ಹುಚ್ಚು ಮುನಸೀಫ ಮತ್ತು ಇತರ ಕತೆಗಳು, ಆರಾಧನಾ, ರುದ್ರಪ್ಪನ ರೌದ್ರ ಮತ್ತು ಇತರ ಕತೆಗಳು**. ಬಾಗಲೋಡಿ ದೇವರಾಯ ಅವರು ಒಟ್ಟು ೨೬ ಕತೆಗಳನ್ನು ಬರೆದಿದ್ದಾರೆ. ಇವರು ೧೯೮೫ ರಲ್ಲಿ ನಿಧನರಾದರು.

NOT TO BE REPUBLISHED @KTBS

## ಆಶಯ

ಪ್ರಕೃತ ಗದ್ಯಭಾಗ ಧಾರ್ಮಿಕ ಸಹಿಷ್ಣುತೆ, ಗುಡಿಕೈಗಾರಿಕೆಗಳ ವಿನಾಶಕ್ಕೆ ಕಾರಣವಾದ ಅಂಶ, ಶಾಲೆಗಳಲ್ಲಿ ಔದ್ಯೋಗಿಕ ಶಿಕ್ಷಣ, ಮಕ್ಕಳ ಆಸಕ್ತಿಗೆ ಪೂರಕವಾದ ಶಿಕ್ಷಣ ನೀಡುವುದು, ಸ್ವಯಂ–ಉದ್ಯೋಗಕ್ಕೆ ಪ್ರೇರಣೆ ಮೊದಲಾದ ಮಹತ್ವದ ಅಂಶಗಳನ್ನು ಒಳಗೊಂಡಿದೆ. ತಂದೆ ಮಗನಿಗಿದ್ದ ಮಗ್ಗದ ಬಗೆಗಿನ ಒಲವಿಗೆ ವಿರೋಧ ವ್ಯಕ್ತಪಡಿಸಿದರು. ಇದರಿಂದ ಮನನೊಂದ ಮಗ ತನ್ನ ಮಾರ್ಗವನ್ನು ಸ್ವತಂತ್ರವಾಗಿ ಕಂಡುಕೊಂಡ ಆಶಯವನ್ನು ಹೊಂದಿದೆ ಈ ಪಠ್ಯಭಾಗ.

**ಪ್ರಕೃತ ಮಗ್ಗದ ಸಾಹೇಬ** ಕಥೆಯನ್ನು **ಬಾಗಲೋಡಿ ದೇವರಾಯ** ಅವರ **ಸಮಗ್ರ ಕತೆಗಳು** ಎಂಬ ಕಥಾಸಂಕಲನದಿಂದ (ಪುಟ ೧೮೫–೧೮೯) ಆಯ್ದ ಕಥೆಯನ್ನು ಸಂಪಾದಿಸಿ ನಿಗದಿಪಡಿಸಿದೆ.

## ಪದಗಳ ಅರ್ಥ

| | | | | | |
|---|---|---|---|---|---|
| ಅಭೀಷ್ಟ | – | ಬಯಸಿದ್ದು | ಆಚ್ಛಾದಿತ | – | ಮುಚ್ಚಲ್ಪಟ್ಟ |
| ಆಧಿಪತ್ಯ | – | ಯಜಮಾನಿಕೆ | ಕಳೇಬರ | – | ಮೃತ ದೇಹ/ಶರೀರ |
| ಗಣಿಸದೆ | – | ಲೆಕ್ಕಿಸದೆ | ಗೌಪ್ಯ | – | ಗುಟ್ಟು, ರಹಸ್ಯ; |
| ಚಿಂದಿ | – | ಚೂರು | ಪರಿವರ್ತನೆ | – | ಬದಲಾವಣೆ; |
| ಪ್ರಶಂಸೆ | – | ಹೊಗಳಿಕೆ | ಭಿಕಾರಿ | – | ನಿರ್ಗತಿಕ |
| ವಿಲಾಯತಿ | – | ವಿದೇಶ, ಅನ್ಯದೇಶ | ಹಸನ್ಮುಖಿ | – | ನಗುಮುಖ ಉಳ್ಳವನು. |

## ಟಿಪ್ಪಣಿ

**ಸಾಹೇಬ್ ಬಹಾದ್ದೂರ್** : ಮೊಗಲ್ ರಾಜರ ಆಳ್ವಿಕೆಯ ಸಂದರ್ಭದಲ್ಲಿ ಸಮಾಜದ ಗಣ್ಯ ವ್ಯಕ್ತಿಗಳಿಗೆ ಕೊಡುತ್ತಿದ್ದ ಗೌರವ ಪೂರ್ವಕ ಬಿರುದು.

**ಉರುಸ್** : ಮಹಮದೀಯ ಸಾಧುಗಳ ಪುಣ್ಯತಿಥಿ ಮತ್ತು ಅಂದು ನಡೆಸುವ ಜಾತ್ರೆ.

**ಪದ್ಮಭೂಷಣ** : ಕಲೆ, ವಿಜ್ಞಾನ, ಸಮಾಜಸೇವೆ, ಕ್ರೀಡೆ ಮುಂತಾದ ಯಾವುದಾದರೂ ಕ್ಷೇತ್ರದಲ್ಲಿ ವಿಶೇಷ ಸಾಧನೆಯನ್ನು ಮಾಡಿದ ಸಾಧಕರಿಗೆ ಭಾರತ ಸರ್ಕಾರ ನೀಡುವ ಮೌಲಿಕ ಪ್ರಶಸ್ತಿ.

## ಅಭ್ಯಾಸ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ**

೧. ರಹೀಮ ಮಗ್ಗವನ್ನು ಮುಟ್ಟದೆ ಎಷ್ಟು ವರ್ಷಗಳಾಗಿತ್ತು?
೨. ಹುಸೇನ್ ಸಾಹೇಬರ ಮನೆತನದವರಿಗೆ ದೇವಾಲಯದಲ್ಲಿದ್ದ ಹಕ್ಕು ಯಾವುದು?
೩. ಅಬ್ದುಲ್ ರಹೀಮನ ಹಠವೇನು?
೪. ತಂದೆಯ ಆಸೆಯನ್ನು ಮೊದಲೆರಡು ಮಕ್ಕಳು ನೆರವೇರಿಸಿದ ಬಗೆ ಹೇಗೆ?
೫. ರಹೀಮ ಮಗನನ್ನು ಶಾಲೆಯಿಂದ ಬಿಡಿಸಿದ್ದೇಕೆ?

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.**

೧. ಹುಸೇನ್ ಸಾಹೇಬರ ವ್ಯಕ್ತಿತ್ವವನ್ನು ವಿವರಿಸಿ.
೨. ಲೇಖಕರ ಹುಟ್ಟೂರಿನಲ್ಲಿದ್ದ ಮುಸ್ಲಿಂ ಧಾರ್ಮಿಕ ಉತ್ಸವದ ಸಂಪ್ರದಾಯವೇನು?
೩. ಮಿಠಾಯಿ ಕೊಟ್ಟಿದ್ದಕ್ಕೆ ಅತಿಥಿಗಳ ಆಕ್ಷೇಪವೇನು?
೪. ಕರೀಮನಿಗೆ ಶಾಲೆಯಲ್ಲಿ ಮಗ್ಗ ಕಲಿತುದರಿಂದ ಆದ ಪ್ರಯೋಜನವೇನು?
೫. ಶಾಲಾ ವಾರ್ಷಿಕೋತ್ಸವದಂದು ಕರೀಮ ಮಾಡಿದ ಕೆಲಸವೇನು?

**ಇ. ಕೊಟ್ಟಿರುವ ಪ್ರಶ್ನೆಗಳಿಗೆ ನಾಲ್ಕು–ಐದು ವಾಕ್ಯಗಳಲ್ಲಿ ಉತ್ತರಿಸಿ.**

೧. ನವೀನ ಶಿಕ್ಷಣದ ವೈಶಿಷ್ಟ್ಯಗಳೇನು?
೨. ಶಂಕರಪ್ಪ ಅವರು ರಹೀಮನ ಬಳಿಗೆ ಸಂಧಾನಕ್ಕಾಗಿ ಬಂದ ಪ್ರಸಂಗವನ್ನು ತಿಳಿಸಿ.

**ಈ. ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

೧. ಕರೀಮ ಧನವಂತನಾದ ಬಗೆ ಹೇಗೆ? ವಿವರಿಸಿ.
೨. ರಹೀಮನಿಗೆ ಮಗ್ಗದ ಬಗ್ಗೆ ದ್ವೇಷ ಉಂಟಾಗಲು ಕಾರಣವೇನು?

**ಉ. ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.**

೧. "ಮಗ್ಗವಲ್ಲ ಕೊರಳಿಗೆ ಹಗ್ಗ!"
೨. "ಕಳ್ಳನಾದವನು, ಮನೆ ಬಿಟ್ಟು ಓಡಿ ಹೋದವನು ಮಗನೇ ಅಲ್ಲ"
೩. "ನಿಮ್ಮ ಹಳೆಯ ಶಿಷ್ಯನಿಗೆ ಇದೊಂದು ಉಪಕಾರ ಮಾಡಿ"
೪. "ದೇವರು ದೊಡ್ಡವನು ದೇವರು ದಯಾಳು"

NOT TO BE REPUBLISHED @KTBS

**ಊ. ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

೧. ಅಬ್ದುಲ್ ರಹೀಮನಿಗೆ ________ ಎಂದು ಹೇಳಿದರೆ ಬಹು ಸಿಟ್ಟು ಬರುತ್ತಿತ್ತು.

೨. ಮನೆಯಲ್ಲಿ ________ ಇದೆಯೋ ಇಲ್ಲವೋ ಎಂಬಂತಾಗಿದೆ.

೩. ಹುಡುಗನ ________ ಆಕಾಶಕ್ಕೇರಿತು.

೪. ಶಂಕರಪ್ಪ ಅವರು ________ ಹಿಂತೆರಳಿದರು.

೫. ನನಗೆ ಎರಡೇ ಮಕ್ಕಳು, ________ ಪರಿಚಯ ನನಗಿಲ್ಲ.

## ಸೈದ್ಧಾಂತಿಕ ಭಾಷಾಭ್ಯಾಸ

### ವರ್ಣಮಾಲೆಯ ಪರಿಚಯಾತ್ಮಕ ವಿವರ

ಮಾನವ ಮನಸ್ಸಿನ ಭಾವನೆಗಳನ್ನು ಮಾತಿನ ಮೂಲಕ ವ್ಯಕ್ತಪಡಿಸುತ್ತಾನೆ. ಆಡಿದ, ಆಡಬೇಕಾದ ಮಾತುಗಳನ್ನು ನಿರ್ದಿಷ್ಟ ಲಿಪಿಯ (ಲಿಖಿತ) ರೂಪಕ್ಕಿಳಿಸುವುದೇ ಬರೆವಣಿಗೆ. ಪದ ಮತ್ತು ಪದಗಳ ಸಂಬಂಧವನ್ನು ಖಚಿತವಾಗಿ ತಿಳಿಸುವುದೇ ವ್ಯಾಕರಣಶಾಸ್ತ್ರ. ಆದ್ದರಿಂದ ಭಾಷೆಯನ್ನು ಕಲಿಯುವವರು ಆ ಭಾಷೆಯ ವ್ಯಾಕರಣವನ್ನು ಅರಿಯುವುದು ಉತ್ತಮ. ಕ್ರಿಯಾತ್ಮಕ ವ್ಯಾಕರಣದ ಕಲಿಕೆಯಿಂದ ಭಾಷೆಯನ್ನು ಸ್ಪಷ್ಟ ಹಾಗೂ ನಿಖರವಾಗಿ ಬಳಸಲು ಸಾಧ್ಯ.

@KTBS NOT TO BE REPUBLISHED

### ವರ್ಣಮಾಲೆ

**ನಾನು ಶಾಲೆಗೆ ಹೋಗಿ ಬಂದೆನು** ಈ ವಾಕ್ಯದಲ್ಲಿ **ನಾನು, ಶಾಲೆಗೆ, ಹೋಗಿ, ಬಂದೆನು** ನಾಲ್ಕು ಅರ್ಥಪೂರ್ಣ ಪದಗಳಿವೆ. ಒಂದೊಂದು ಪದದಲ್ಲಿಯೂ ಬೇರೆ ಬೇರೆ ಅಕ್ಷರಗಳಿವೆ. ಉದಾ: **ನಾನು** ಪದದಲ್ಲಿ **ನ್ ಆ ನ್ ಉ** ಎಂಬ ನಾಲ್ಕು ಅಕ್ಷರಗಳಿವೆ.

**ಬಂದೆನು** ಪದದಲ್ಲಿ **ಬ್ ಅ ನ್ ದ್ ಎ ನ್ ಉ** ಎಂಬ ಏಳು ಅಕ್ಷರಗಳಿವೆ. ಈ ಎರಡು ಪದಗಳಲ್ಲಿರುವ **ನ್ ಬ್ ದ್** ಎಂಬ ಅಕ್ಷರಗಳನ್ನು ಉಚ್ಚರಿಸುವಾಗ ಧ್ವನ್ಯಂಗದ ಅಡೆತಡೆಯೊಂದಿಗೆ ಉಚ್ಚರಿಸಬೇಕಾಗುತ್ತದೆ. ಇವೇ **ವ್ಯಂಜನಾಕ್ಷರಗಳು.**

ಆ ಅಕ್ಷರಗಳ ಹಿಂದೆ ಅಥವಾ ಮುಂದೆ **ಆ ಉ ಎ** ಮುಂತಾದವು ಧ್ವನ್ಯಂಗದ ಅಡೆತಡೆ ಇಲ್ಲದೆ ಉಚ್ಚರಿಸಬಹುದಾದ ಅಕ್ಷರಗಳಿವೆ. ಇವೇ **ಸ್ವರಾಕ್ಷರಗಳು.** ಇವು ಸ್ವತಂತ್ರವಾಗಿ ಉಚ್ಚರಿಸಲ್ಪಡುವ ಅಕ್ಷರಗಳು. ಹಾಗೆಯೇ **ಬಂದೆನು** ಎಂಬ ಪದದಲ್ಲಿರುವ **ಂ** ಎಂಬ ಅಕ್ಷರವನ್ನು ಉಚ್ಚರಿಸಲು ಆಗುವುದಿಲ್ಲ. ಇದರ ಹಿಂದೆ ಸ್ವರಾಕ್ಷರಗಳು ಬಂದಾಗ ಮಾತ್ರ ಉಚ್ಚರಿಸಬಹುದು. ಇದೇ **ಯೋಗವಾಹ.**

ಕನ್ನಡ ವರ್ಣಮಾಲೆಯನ್ನು ಪ್ರಧಾನವಾಗಿ **ಸ್ವರ, ವ್ಯಂಜನ ಮತ್ತು ಯೋಗವಾಹ** ಎಂಬ ಮೂರು ವಿಭಾಗ ಮಾಡಲಾಗಿದೆ.

**ಸ್ವರಗಳು**

**ಅ ಆ ಇ ಈ ಉ ಊ ಋ ಎ ಏ ಐ ಒ ಓ ಔ** ಇವು ಹದಿಮೂರು **ಸ್ವರಾಕ್ಷರಗಳು.** ಇವುಗಳಲ್ಲಿ **ಅ ಇ ಉ ಋ ಎ ಒ** ಎಂಬ **ಆರು ಅಕ್ಷರಗಳು ಒಂದೊಂದು ಮಾತ್ರಾ ಕಾಲದಲ್ಲಿ** ಉಚ್ಚರಿಸಲ್ಪಡುವಂತಹ ಅಕ್ಷರಗಳು. ಹಾಗಾಗಿ ಇವು **ಹ್ರಸ್ವಸ್ವರಗಳು.**

**ಆ ಈ ಊ ಏ ಐ ಓ ಔ ಎಂಬ ಏಳು ಅಕ್ಷರಗಳು ಎರಡು ಮಾತ್ರಾ ಕಾಲದಲ್ಲಿ** ಉಚ್ಚರಿಸಲ್ಪಡುವಂತಹ ಅಕ್ಷರಗಳು. ಹಾಗಾಗಿ ಇವು **ದೀರ್ಘಸ್ವರಗಳು.**

ದೀರ್ಘಸ್ವರಗಳು ಕೆಲವೊಮ್ಮೆ ಮೂರು ಮಾತ್ರಾಕಾಲದಲ್ಲಿ ಉಚ್ಚರಿಸಲ್ಪಡುತ್ತವೆ. **ಉದಾ : ಅಣ್ಣಾs ಇಲ್ಲಿ ಬಾ, ಮಕ್ಕಳೇs ಇಲ್ಲಿ ಬನ್ನಿ** – ಇಲ್ಲಿ (s) ಎಂದು ಗುರುತಿಸಲ್ಪಟ್ಟ **ಆ, ಏ** ಅಕ್ಷರಗಳು **ಮೂರು, ಮೂರಕ್ಕಿಂತ ಹೆಚ್ಚು ಮಾತ್ರಾಕಾಲದಲ್ಲಿ** ಉಚ್ಚರಿಸಲ್ಪಟ್ಟಿವೆ. ಹೀಗೆ ಮೂರು ಮೂರಕ್ಕಿಂತ ಹೆಚ್ಚು ಮಾತ್ರಾಕಾಲದಲ್ಲಿ ಉಚ್ಚರಿಸಲ್ಪಡುವ ಅಕ್ಷರಗಳೇ **ಪ್ಲುತ ಸ್ವರಗಳು 's' ಪ್ಲುತಸ್ವರದ ಸಂಕೇತವಾಗಿದೆ.**

@KTBS NOT TO BE REPUBLISHED

**ವ್ಯಂಜನಗಳು**

**ವರ್ಗೀಯ ವ್ಯಂಜನಗಳು**

| ೧ | ೨ | ೩ | ೪ | ೫ | ವರ್ಗವಿವರ |
|---|---|---|---|---|---|
| ಕ್ | ಖ್ | ಗ್ | ಘ್ | ಙ್ | ೫ – ಕ ವರ್ಗ |
| ಚ್ | ಛ್ | ಜ್ | ಝ್ | ಞ್ | ೫ – ಚ ವರ್ಗ |
| ಟ್ | ಠ್ | ಡ್ | ಢ್ | ಣ್ | ೫ – ಟ ವರ್ಗ |
| ತ್ | ಥ್ | ದ್ | ಧ್ | ನ್ | ೫ – ತ ವರ್ಗ |
| ಪ್ | ಫ್ | ಬ್ | ಭ್ | ಮ್ | ೫ – ಪ ವರ್ಗ |

**ಅವರ್ಗೀಯ ವ್ಯಂಜನಗಳು**

**ಯ್, ರ್, ಲ್, ವ್, ಶ್, ಷ್, ಸ್, ಹ್, ಳ್ = ೯ ಅವರ್ಗೀಯ ವ್ಯಂಜನಗಳು**

ಕೊಟ್ಟಿರುವ **ಕ್** ದಿಂದ **ಮ್** ವರೆಗಿನ **೨೫** ಅಕ್ಷರಗಳನ್ನು ಉಚ್ಚರಿಸುವಾಗ ಅವು ಹುಟ್ಟುವ ಸ್ಥಳವನ್ನು ಆಧರಿಸಿ ಅವನ್ನು ೫ ವರ್ಗಗಳಾಗಿ ವಿಂಗಡಿಸಲಾಗಿದೆ. ಅವೇ **ವರ್ಗೀಯ ವ್ಯಂಜನಗಳು.** ಅವು ಇಂತಿವೆ:

– **ಕವರ್ಗದ** ಅಕ್ಷರಗಳು **ಕಂಠಭಾಗದಲ್ಲಿ** ಹುಟ್ಟುವುದರಿಂದ ಅವು **ಕಂಠ್ಯ ಅಕ್ಷರಗಳು.**

– **ಚವರ್ಗದ** ಅಕ್ಷರಗಳು **ತಾಲುವಿನ (ದವಡೆಯ) ಸಹಾಯದಿಂದ** ಹುಟ್ಟುವುದರಿಂದ ಅವು **ತಾಲವ್ಯ ಅಕ್ಷರಗಳು.**

– **ಟವರ್ಗದ** ಅಕ್ಷರಗಳು **ಮೂರ್ಧಭಾಗದಲ್ಲಿ** ಅಂದರೆ ನಾಲಿಗೆಯನ್ನು ಹಿಂದೆ ಚಾಚಿ ಬಾಯಿಯ ಮೇಲ್ಭಾಗವನ್ನು ಸ್ಪರ್ಶಿಸಿದಾಗ ಉಚ್ಚಾರಗೊಳ್ಳುವುದರಿಂದ ಅವು **ಮೂರ್ಧನ್ಯ ಅಕ್ಷರಗಳು.**

– **ತವರ್ಗದ** ಅಕ್ಷರಗಳು **ಹಲ್ಲುಗಳ** ಬಳಿ ಹುಟ್ಟುವುದರಿಂದ ಅವು **ದಂತ್ಯ ಅಕ್ಷರಗಳು.**

– **ಪವರ್ಗದ** ಅಕ್ಷರಗಳು **ತುಟಿಗಳ** ಸಹಾಯದಿಂದ ಉಚ್ಚರಿಸಲ್ಪಡುವುದರಿಂದ ಅವು **ಓಷ್ಠ್ಯ ಅಕ್ಷರಗಳು.**

ಈ ವರ್ಗೀಯ ವ್ಯಂಜನಗಳನ್ನು **ಅಲ್ಪಪ್ರಾಣ, ಮಹಾಪ್ರಾಣ ಮತ್ತು ಅನುನಾಸಿಕ** ಅಕ್ಷರಗಳೆಂದು ವಿಭಾಗಿಸಲಾಗಿದೆ.

**ಪ್ರಾಣ** ಎಂದರೆ **ಉಸಿರು** ಎಂದರ್ಥ. **ಕಡಿಮೆ ಪ್ರಾಣದಿಂದ** (ಉಸಿರಿನಿಂದ) ಉಚ್ಚರಿಸಲ್ಪಡುವ **ಕ್ ಚ್ ಟ್ ತ್ ಪ್ ಗ್ ಜ್ ಡ್ ದ್ ಬ್** ಅಕ್ಷರಗಳೇ ಅಲ್ಪ ಪ್ರಾಣಗಳು ಪ್ರತಿ ವರ್ಗದ **ಒಂದು ಮತ್ತು ಮೂರನೆಯ** ಅಕ್ಷರಗಳು **ಅಲ್ಪಪ್ರಾಣ** ಅಕ್ಷರಗಳಾಗಿವೆ.

ಹೆಚ್ಚು ಪ್ರಾಣದಿಂದ (ಉಸಿರು) ಉಚ್ಚರಿಸಲ್ಪಡುವ **ಖ್ ಛ್ ಠ್ ಥ್ ಫ್ ಘ್ ಝ್ ಢ್ ಧ್ ಭ್** ಅಕ್ಷರಗಳೇ ಮಹಾ ಪ್ರಾಣಗಳು. ಪ್ರತಿ ವರ್ಗದ **ಎರಡು ಮತ್ತು ನಾಲ್ಕನೆಯ** ಅಕ್ಷರಗಳು **ಮಹಾಪ್ರಾಣ** ಅಕ್ಷರಗಳಾಗಿವೆ.

**ಮೂಗಿನ** (ನಾಸಿಕದ) ಸಹಾಯದಿಂದ ಉಚ್ಚರಿಸಲ್ಪಡುವ **ಙ್ ಞ್ ಣ್ ನ್ ಮ್** ಅಕ್ಷರಗಳು ಅಂದರೆ ವರ್ಗದ **ಕೊನೆಯ** ಅಕ್ಷರಗಳು **ಅನುನಾಸಿಕ** ಅಕ್ಷರಗಳು.

ಉಳಿದ **ಒಂಬತ್ತು ಅಕ್ಷರಗಳು (ಯ್** ದಿಂದ **ಳ್** ವರೆಗಿನ) ಬೇರೆ ಬೇರೆ ಧ್ವನ್ಯಂಗಗಳ ಸ್ಥಾನದಲ್ಲಿ ಹುಟ್ಟುವುದರಿಂದ ವರ್ಗಗಳಾಗಿ ವಿಂಗಡಿಸಲು ಸಾಧ್ಯವಿಲ್ಲ. ಹಾಗಾಗಿ ಅವು **ಅವರ್ಗೀಯ ವ್ಯಂಜನಗಳು.**

**ಯೋಗವಾಹಗಳು**

**ಅನುಸ್ವಾರ (ಂ), ವಿಸರ್ಗ(ಃ)**

**ಯೋಗ** ಎಂದರೆ **ಕೂಡು / ಸಂಬಂಧ, ವಾಹ** ಎಂದರೆ **ಹೋಗುವ** ಎಂದರ್ಥ. **ಯೋಗವಾಹ** ಎಂದರೆ **ಕೂಡಿ ಹೋಗುವ** (ಕೂಡಿ ಕೊಂಡಿರುವ) ಅಂದರೆ ಬೇರೆ ಅಕ್ಷರಗಳ ಜೊತೆಯಲ್ಲಿ ಮಾತ್ರ ಉಚ್ಚರಿಸಬಹುದಾದ ಅಕ್ಷರ ಎಂದರ್ಥ.

**ಯೋಗವಾಹಗಳು ಎರಡು**

೧. **ಂ** – **ಅನುಸ್ವಾರ** (ಒಂದು ಅಕ್ಷರಗಾತ್ರದ ಒಂದು ಸೊನ್ನೆ)

೨. ಃ – **ವಿಸರ್ಗ** (ಎರಡು ಸಣ್ಣ ಸೊನ್ನೆಗಳು ಒಂದರ ಕೆಳಗೆ ಒಂದರಂತೆ ಒಂದು ಅಕ್ಷರಗಾತ್ರದಲ್ಲಿ)

©KTBS NOT TO BE REPUBLISHED

ಕನ್ನಡ ವರ್ಣಮಾಲೆಯಲ್ಲಿರುವ ಅಕ್ಷರಗಳನ್ನು ಹೀಗೆ ಗುರುತಿಸಬಹುದು.

ವರ್ಣಮಾಲೆ–೪೯

- ಸ್ವರ–೧೩
  - ಹ್ರಸ್ವ–೬
  - ದೀರ್ಘ–೭
- ವ್ಯಂಜನ–೩೪
  - ವರ್ಗೀಯ–೨೫
  - ಅವರ್ಗೀಯ–೯
- ಯೋಗವಾಹ–೨
  - ಅನುಸ್ವಾರ–೧
  - ವಿಸರ್ಗ–೧

| ಹ್ರಸ್ವ–೬ | ದೀರ್ಘ–೭ | ವರ್ಗೀಯ–೨೫: ಅಲ್ಪಪ್ರಾಣ | ವರ್ಗೀಯ–೨೫: ಮಹಾಪ್ರಾಣ | ವರ್ಗೀಯ–೨೫: ಅನುನಾಸಿಕ | ಅವರ್ಗೀಯ–೯ | ಅನುಸ್ವಾರ–೧ | ವಿಸರ್ಗ–೧ |
|---|---|---|---|---|---|---|---|
| ಅ | ಆ | ಕ್ | ಖ್ | ಙ್ | ಯ್ | ಂ | ಃ |
| ಇ | ಈ | ಚ್ | ಛ್ | ಞ್ | ರ್ | | |
| ಉ | ಊ | ಟ್ | ಠ್ | ಣ್ | ಲ್ | | |
| ಋ | ಏ | ತ್ | ಥ್ | ನ್ | ವ್ | | |
| ಎ | ಓ | ಪ್ | ಫ್ | ಮ್ | ಶ್ | | |
| ಒ | ಐ | ಗ್ | ಘ್ | | ಷ್ | | |
| | ಔ | ಜ್ | ಝ್ | | ಸ್ | | |
| | | ಡ್ | ಢ್ | | ಹ್ | | |
| | | ದ್ | ಧ್ | | ಳ್ | | |
| | | ಬ್ | ಭ್ | | | | |

ಒಟ್ಟು ಅಕ್ಷರಗಳು–೪೯

@KTBS NOT TO BE REPUBLISHED

## ಅಭ್ಯಾಸ ಚಟುವಟಿಕೆ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

೧. ಕನ್ನಡ ವರ್ಣಮಾಲೆಯಲ್ಲಿ ಒಟ್ಟು ಎಷ್ಟು ಅಕ್ಷರಗಳಿವೆ? ಅವುಗಳನ್ನು ಹೇಗೆ ವರ್ಗೀಕರಿಸುವಿರಿ? ವಿವರಿಸಿ.

೨. ಕನ್ನಡ ವರ್ಣಮಾಲೆಯಲ್ಲಿರುವ ಹ್ರಸ್ವ ಹಾಗೂ ದೀರ್ಘ ಸ್ವರಗಳನ್ನು ಬರೆಯಿರಿ.

೩. ಕನ್ನಡ ವರ್ಣಮಾಲೆಯಲ್ಲಿರುವ ಮಹಾಪ್ರಾಣ ಅಕ್ಷರಗಳನ್ನು ಬರೆಯಿರಿ.

೪. ಕನ್ನಡ ವರ್ಣಮಾಲೆಯಲ್ಲಿರುವ ವರ್ಗೀಯ ಅಕ್ಷರಗಳನ್ನು ತಿಳಿಸಿ.

೫. ಕನ್ನಡ ವರ್ಣಮಾಲೆಯಲ್ಲಿರುವ ಅನುನಾಸಿಕ ಅಕ್ಷರಗಳನ್ನು ಪಟ್ಟಿಮಾಡಿ.

ಆ. **ಕೊಟ್ಟಿರುವ ಪದಗಳಲ್ಲಿರುವ ಸ್ವರಾಕ್ಷರಗಳನ್ನು ಪ್ರತ್ಯೇಕಿಸಿ ಬರೆಯಿರಿ.**

ಅಬ್ದುಲ್ ಅವನು ಇಪ್ಪತ್ತು ಆದರೂ ಅವನನ್ನು ಇತ್ಯಾದಿ

ಇರಲಿ ಏಕೆಂದರೆ ಓಡಿಹೋದ ಈಗ ಏನೂ

ಇ. **ಕೊಟ್ಟಿರುವ ಪದಗಳಲ್ಲಿರುವ ಮಹಾಪ್ರಾಣಾಕ್ಷರಗಳನ್ನು ಬರೆಯಿರಿ.**

ಧನವಂತ ರಥ ಘನತೆ ಧರ್ಮ ಮುಖ್ಯ

ಭಕ್ಷ್ಯ ಹಠ ಪಾಠ ಹಸನ್ಮುಖ ಫಲ

ಈ. **ಕೊಟ್ಟಿರುವ ಪದಗಳಲ್ಲಿರುವ ಅವರ್ಗೀಯ ವ್ಯಂಜನಗಳನ್ನು ಬರೆಯಿರಿ.**

ಅವನ ಇಂತಹ ಅದರ ಒಳಗೆ ಕುಶಲ

ಹಬ್ಬ ಬಹಳ ತಲ ಸಮಯ ಕಾಲ

© KTBS NOT TO BE REPUBLISHED

**ಪೂರಕ ಓದು**

೧. **ಗೊರೂರು ರಾಮಸ್ವಾಮಿ ಅಯ್ಯಂಗಾರ್** ಅವರ **ನಮ್ಮ ಊರಿನ ರಸಿಕರು** ಕೃತಿಯಲ್ಲಿ ಬರುವ ಶಾಲುಸಾಬಿಯ ವಿಚಾರವನ್ನು ಓದಿ ತಿಳಿಯಿರಿ.

✦ ✦ ✦ ✦ ✦

# ೨. ಸಾರ್ಥಕ ಬದುಕಿನ ಸಾಧಕ – ಡಿ.ವಿ.ಜಿ.


G6K3P4

**– ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ**

**ಪ್ರವೇಶ :** ಮಾನವನ ಜನ್ಮದ ಸಾರ್ಥಕತೆ, ಮೌಲ್ಯಯುತ ಜೀವನವನ್ನು ನಡೆಸುವುದರಿಂದ ಮಾತ್ರ ರೂಪುಗೊಳ್ಳಬಲ್ಲುದು. ಪ್ರತಿಯೊಬ್ಬರಿಗೂ ಸಾಧನೆಯ ಮೆಟ್ಟಿಲೇರುವ ವಿಪುಲ ಅವಕಾಶಗಳಿದ್ದರೂ ಸಾಧನೆಯನ್ನು ಸಾಧ್ಯವಾಗಿಸಿ ಕೊಂಡವರು ಕೆಲವರು ಮಾತ್ರ. ಇಂಥ ಸಾರ್ಥಕ ಬದುಕನ್ನು ಕಟ್ಟಿಕೊಂಡು ಮೌಲ್ಯಯುತ ಜೀವನ ನಡೆಸಿದ ಮಹಾನ್ ವ್ಯಕ್ತಿಗಳ ಜೀವನದ ಪ್ರಮುಖ ಘಟನೆಗಳ ಸ್ಥೂಲ ವಿಚಾರಗಳನ್ನು ಕಲಾತ್ಮಕವಾಗಿ ದಾಖಲಿಸುವುದೇ 'ವ್ಯಕ್ತಿಚಿತ್ರ'. ಇಂದು ಆತ್ಮಕಥನ, ಜೀವನಚರಿತ್ರೆಗಳಂತೆ ವ್ಯಕ್ತಿಚಿತ್ರವು ಸಹ ಕನ್ನಡ ಸಾಹಿತ್ಯದಲ್ಲಿ ಪ್ರಮುಖ ಸ್ಥಾನ ಪಡೆದುಕೊಂಡಿದೆ.

'ಅಧಿಕಾರ' ಎಂಬುದು ಮನುಷ್ಯನ ವ್ಯಕ್ತಿತ್ವದ ಸತ್ವಪರೀಕ್ಷೆ ಎನ್ನುತ್ತಾರೆ. ಲೌಕಿಕ ಆಸೆ ಆಮಿಷಗಳಿಗೆ ಒಳಗಾಗದ ವ್ಯಕ್ತಿ ಆದರ್ಶ ವ್ಯಕ್ತಿತ್ವ ಹೊಂದಬಲ್ಲ ಎನ್ನುವ ಮಾತಿಗನುಗುಣವಾಗಿ, ಕನ್ನಡ ಸಾಹಿತ್ಯದಲ್ಲಿ ಅಪ್ರತಿಮ ಧೀಮಂತರಾಗಿ ಬೆಳೆದವರು ಡಿ.ವಿ.ಜಿಯವರು. ಸಾಹಿತಿಯಾಗಿ, ಪತ್ರಕರ್ತರಾಗಿ, ಸಂಪಾದಕರಾಗಿ ಮತ್ತು ರಾಜಕಾರಣಿಯಾಗಿದ್ದರೂ ಸಹ ಬದುಕಿನ ಮೌಲ್ಯಗಳಿಗೆ ಬೆಲೆ ಕೊಟ್ಟು ಜೀವನವನ್ನು ಸಾರ್ಥಕಗೊಳಿಸಿಕೊಂಡ ಈ ಮಹಾನ್ ಸಾಧಕನ ಆದರ್ಶ ಬದುಕಿನ ಚಿತ್ರಣವನ್ನು ಪ್ರಕೃತ ಗದ್ಯಭಾಗದಲ್ಲಿ ಸ್ಮರಿಸಲಾಗಿದೆ.

NOT TO BE REPUBLISHED ©KTBS



ಡಿವಿಜಿ ಅವರು ತಮ್ಮೊಡನೆ ಮಾತು ನಿಲ್ಲಿಸಿಬಿಟ್ಟರೆಂದು ದಿವಾನ್ ಮಿರ್ಜಾ ಸಾಹೇಬರಿಗೆ ಕಳವಳವಾಗಿ ಹೋಗಿತ್ತು. ಆಪ್ತರೆದುರು ಅದನ್ನು ತೋಡಿಕೊಂಡರು. ತಮ್ಮದು ಏನೂ ತಪ್ಪಿಲ್ಲ ಎಂದರು. ಅದಕ್ಕಾಗಿ ಅವರಿವರ ಮೂಲಕ ಪ್ರಯತ್ನ ಕೂಡ ಮಾಡಿದರು. ಆ ಕಾಲದ ದೊಡ್ಡ ದಿವಾನರನ್ನೂ ತಮ್ಮ ಸ್ನೇಹಕ್ಕಾಗಿ ಹೀಗೆ ಹಾತೊರೆಯುವಂತೆ ಮಾಡಿದ ವ್ಯಕ್ತಿಯೇನು ಸಾಮಾನ್ಯರೆ?

ಹಾಗೆಂದು ಅವರೇನು ದೊಡ್ಡದೊಡ್ಡ ಡಿಗ್ರಿ ಪಡೆದವರಲ್ಲ, ಎಸ್.ಎಸ್. ಎಲ್.ಸಿ. ಕೂಡ ದಾಟದ ಓದು. ಭಾರಿ ಶ್ರೀಮಂತರೋ ಎಂದರೆ ದಿನದಿನದ ಅಗತ್ಯ ಪೂರೈಸಿದ್ದೇ ಹೆಚ್ಚು ಎನ್ನುವಂಥ ಕೆಲಸ. ಸರ್ಕಾರಿ ಉದ್ಯೋಗವಲ್ಲವಾಗಿ ದೊಡ್ಡ ಅಧಿಕಾರದ ಮಾತಂತೂ ಇಲ್ಲವೇ ಇಲ್ಲ. ಆದರೆ ಮೈಸೂರು ರಾಜ್ಯದ ಪರಮೋಚ್ಚ ಅಧಿಕಾರ ಹಿಡಿದಿದ್ದ ಮಿರ್ಜಾ ಸಾಹೇಬರೂ ಅವರ ಸ್ನೇಹ ತಪ್ಪಿತೆನಿಸಿ ಕಳವಳಗೊಂಡಿದ್ದರು.

ಇಂಥಾ ಸತ್ವಶಾಲಿ ವ್ಯಕ್ತಿತ್ವ ಡಿವಿಜಿಗೆ ಬಂದದ್ದು ಹೇಗೆ? ಕೇವಲ ಶೀಲ, ವಿವೇಕ, ನಿಸ್ಪೃಹತೆ, ಸ್ವಯಂ ಆರ್ಜಿತ ಪಾಂಡಿತ್ಯ, ಸಾರ್ವಜನಿಕ ಹಿತಾಸಕ್ತಿಗಳ ಬಲದಿಂದ, ಮಿರ್ಜಾರ ಕಾಲಕ್ಕೆ ಡಿವಿಜಿ ದೊಡ್ಡ ಮೇಧಾವಿಯೆಂದು ವಿದ್ಯಾವಂತರ ವಲಯದಲ್ಲಿ ಹೆಸರಾಗಿದ್ದರು.

ಡಿವಿಜಿ ಅವರ ಹುಟ್ಟೂರು ಕೋಲಾರ ಜಿಲ್ಲೆಗೆ ಸೇರಿದ ಮುಳಬಾಗಿಲು. ಅವರದು ವೇದಶಾಸ್ತ್ರ ಸಂಪನ್ನರಾದ ಹಿರಿಯರಿದ್ದ ಕುಟುಂಬ. ಅವರ ತಂದೆ ವೆಂಕಟರಮಣಯ್ಯ, ತಾಯಿ ಅಲಮೇಲಮ್ಮ. ಡಿವಿಜಿ ಅವರ ಮನಸ್ಸಿನ ಮೇಲೆ ಬಹಳ ಪ್ರಭಾವ ಬೀರಿದ ವ್ಯಕ್ತಿಗಳು ಇಬ್ಬರು. ಒಬ್ಬರು ಅವರ ಅಜ್ಜಿ, ಎಂದರೆ ತಾಯಿಯ ತಾಯಿ ಸಾಕಮ್ಮ. ಮಹರ್ಷಿಪ್ರಾಯರಾದ ಚೇತನ ಎಂದು ಡಿವಿಜಿ ಅವರನ್ನು ವರ್ಣಿಸಿದ್ದಾರೆ. ಇನ್ನೊಬ್ಬರು ಅವರ ಸೋದರಮಾವ ತಿಮ್ಮಪ್ಪ. ಪ್ರಸಿದ್ಧ ಕೃತಿಯಾದ ಮಂಕುತಿಮ್ಮನ ಕಗ್ಗದಲ್ಲಿ ತಿಮ್ಮ ಅವರ ಹೃದಯಸ್ಪರ್ಶಿಯಾದ ಚಿತ್ರಣವಿದೆ. ಆ ಚಿತ್ರಣಕ್ಕೆ ಆಧಾರವಾದ ವ್ಯಕ್ತಿತ್ವ ಈ ತಿಮ್ಮಪ್ಪನವರದೇ.

ಡಿವಿಜಿ ಮುಳಬಾಗಿಲಿನ ಆಂಗ್ಲೋ ವರ್ನಾಕ್ಯುಲರ್ ಶಾಲೆಯಲ್ಲಿ ಲೋವರ್ ಸೆಕೆಂಡರಿ ಶಿಕ್ಷಣವನ್ನು ಪೂರ್ಣಗೊಳಿಸಿದರು. ಮುಂದಿನ ಓದಿಗೆ ಬೇರೆ ಊರಿಗೇ ಹೋಗಬೇಕು; ಆದರೆ ಹಣದ ಅನುಕೂಲವಿಲ್ಲ. ಓದು ಇಲ್ಲಿಗೆ ಸಾಕು ಎಂದು ತಂದೆ, ಅಜ್ಜಿ ತೀರ್ಮಾನಿಸಿದರು. ಆದರೆ ಡಿವಿಜಿ ಅವರ ಭಾಗ್ಯ ಎಂಬಂತೆ ಅವರ ಸಹಾಯಕ್ಕೆ ಬಂದವನು ರಸೂಲ್‌ಖಾನ್. ಆತನೊಬ್ಬ ಬಂಡಿ ಹೊಡೆಯುವ ವ್ಯಕ್ತಿ. ಬಡವ, ಪ್ರಾಮಾಣಿಕ. ಡಿವಿಜಿ ಅವರ ತಂದೆಗೆ ಬೇಕಾಗಿದ್ದವನು. “ಗುಂಡಣ್ಣ ತುಂಬ ಚುರುಕಾದ ಹುಡುಗ. ಅವನು ಮುಂದೆ ಓದಲೇಬೇಕು”, ಅಂತ ರಸೂಲ್‌ಖಾನ್ ಹಟ ಹಿಡಿದುಬಿಟ್ಟ. “ನೀವೆಲ್ಲ ಏನಾದರು ಹೇಳಿ. ಅವನನ್ನು ನನ್ನ ಬಂಡಿಯಲ್ಲಿ ಕೂರಿಸಿಕೊಂಡು ಬೌರಿಂಗ್ ಪೇಟೆ (ಬಂಗಾರಪೇಟೆ) ಗೆ ಹೋಗ್ತಿನಿ. ಬೆಂಗಳೂರಿನ ರೈಲಿನಲ್ಲಿ ಕೂರಿಸಿ ಟಿಕೆಟ್ ಕೊಡಿಸಿ, ಒಂದು ರೂಪಾಯಿ ಕೈ ಖರ್ಚಿಗೆ ಕೊಟ್ಟುಬಿಡ್ತೀನಿ. ಅವನ ಓದು ಮಾತ್ರ ನಡೀಲೇಬೇಕು”. ರಸೂಲ್‌ಖಾನ್‌ನ ಈ ನಿರ್ಧಾರ ಎಲ್ಲರನ್ನೂ ದಂಗುಬಡಿಸಿತು. ಎಲ್ಲ ಅವನು ಹೇಳಿದಂತೆಯೇ ನಡೆಯಿತು. ಡಿವಿಜಿ ಬೆಂಗಳೂರನ್ನು ಕಂಡದ್ದು ಹೀಗೆ ರಸೂಲ್‌ಖಾನನ ದಯೆಯಿಂದ.

ವಿಶ್ವೇಶ್ವರಯ್ಯ ಅವರು ದಿವಾನರಾಗಿದ್ದ ಕಾಲ. ಡಿವಿಜಿ ಆಗ ಯುವ ಪತ್ರಕರ್ತ. ದಸರಾ ಉತ್ಸವ ಬಂತು. ರಾಜ್ಯದ ಎಲ್ಲ ಪತ್ರಿಕೆಗಳೂ ಅದರ ವಿಶೇಷ ವರದಿ ನೀಡಿದವು. ಇದಾದ ನಾಲ್ಕು ದಿನಕ್ಕೆ ಪತ್ರಕರ್ತರಿಗೆಲ್ಲ ಸರ್ಕಾರದಿಂದ ದೊಡ್ಡ ಮೊತ್ತ ಸಂಭಾವನೆ ರೂಪದಲ್ಲಿ ಹೋಯಿತು. ಡಿವಿಜಿ ತಮಗೆ ಬಂದಿದ್ದ ಹಣದ ಸಹಿತ ದಿವಾನರಲ್ಲಿಗೆ ಬಂದರು.

“ಏನು ಬಂದಿರಿ ಗುಂಡಪ್ಪ?”

“ನನಗೆ ಈ ಹಣ ಯಾಕೆ ಕಳಿಸಿದ್ದಾರೆ?”

ದಸರಾ ಉತ್ಸವವನ್ನು ಚೆನ್ನಾಗಿ ವರದಿ ಮಾಡಿದ್ದೀರಿ, ಅದಕ್ಕೆ.

©KTBS NOT TO BE REPUBLISHED

"ಅದಕ್ಕೆ ಹಣ ಯಾಕೆ ಕಳಿಸಬೇಕು?"

"ಪತ್ರಕರ್ತರಿಗೆ ಓಡಾಟ, ಖರ್ಚು ಇರುತ್ತದೆ. ಅಲ್ಲದೆ ಹಿಂದಿನಿಂದ ಬಂದ ಪದ್ಧತಿ"

"ವರದಿ ಮಾಡುವುದು ಪತ್ರಕರ್ತರ ಕರ್ತವ್ಯ. ಅದಕ್ಕೆ ಖರ್ಚಾದರೆ ಪತ್ರಿಕೆಯವರು ಕೊಡಬೇಕು, ಸರ್ಕಾರವಲ್ಲ. ನನಗೆ ಈ ಹಣ ಖಂಡಿತ ಬೇಡ. ಬೇಡವೇ ಬೇಡ". ಎಂದರು ಡಿವಿಜಿ.

ವಿಶ್ವೇಶ್ವರಯ್ಯ ಅವರು ತಮ್ಮ ಕಾರ್ಯದರ್ಶಿಗೆ ಹೇಳಿದರು.

"ಈ ಮನುಷ್ಯನ ರೀತಿಯೇ ಬೇರೆ. ಇವರಿಗೆ ನಾವು ಹಣ ಕೊಡಲು ಬರುವುದಿಲ್ಲ. ಅದನ್ನು ಹಿಂದಕ್ಕೆ ತೆಗೆದುಕೊಂಡು ಬಿಡಿ!"

ವಿಶ್ವೇಶ್ವರಯ್ಯ ಅವರು ತಮ್ಮ ಕೆಲಸ ಕಾರ್ಯಗಳಲ್ಲಿ ಎಷ್ಟೋ ಜನ ಮೇಧಾವಿಗಳ ಸಹಾಯ ಪಡೆಯುತ್ತಿದ್ದರು. ಪ್ರತಿಯಾಗಿ ಅದಕ್ಕೆ ತಕ್ಕ ಸಂಭಾವನೆಯನ್ನು ಕೊಡುತ್ತಿದ್ದರು. ಡಿವಿಜಿ ಅವರಿಂದಲೂ ಅವರು ಅನೇಕ ಕೆಲಸ ಮಾಡಿಸಿಕೊಂಡಿದ್ದುಂಟು. ಮೊದಲ ಸಲ ಅವರಿಗೆ ಸಂಭಾವನೆ ಕೊಡಲು ಹೋದಾಗ ಡಿವಿಜಿ ಒಪ್ಪಲಿಲ್ಲ. ಇದು ರಾಜ್ಯದ ಕೆಲಸ. ಅಲ್ಲದೆ ವಿಶ್ವೇಶ್ವರಯ್ಯ ಎಂಥ ಮಹಾವ್ಯಕ್ತಿ! ಅವರ ಜೊತೆಗೆ ವ್ಯವಹರಿಸಿದ್ದೇ ತಮಗೊಂದು ಹೆಮ್ಮೆ. ಹಾಗಿರುವಾಗ ಅದಕ್ಕೆ ಸಂಭಾವನೆಯೇ? ಎಂದಿಗೂ ಕೂಡದು. ಇದು ಅವರ ತರ್ಕ. ಆದರೆ ಈ ತರ್ಕ ನಡೆಯಲಿಲ್ಲ. ಡಿವಿಜಿ ಮೊಂಡಾದರೆ ವಿಶ್ವೇಶ್ವರಯ್ಯ ಜಗಮೊಂಡು. ಇದು ನನ್ನ ವೈಯಕ್ತಿಕ ಕೆಲಸ. ನನಗೆ ಇದಕ್ಕೆ ಹಣ ಬರುತ್ತದೆ. ನೀವು ತೆಗೆದುಕೊಳ್ಳಲೇಬೇಕು. ಇಲ್ಲದಿದ್ದರೆ ಮುಂದೆ ನಿಮ್ಮ ಸಹಾಯವೇ ಬೇಡ ಎಂದು ಕೋಪಿಸಿಕೊಂಡರು. ಆಯಿತು; ತೆಗೆದುಕೊಳ್ಳಲು ಡಿವಿಜಿ ಒಪ್ಪಿದರು. ಮುಂದೆ ವಿಶ್ವೇಶ್ವರಯ್ಯ ಅವರಿಗೆ ಪ್ರತಿಸಲವೂ ಚೆಕ್ಕು ಕೊಡುತ್ತಾ ಹೋದರು. ಡಿವಿಜಿ ಪಡೆಯುತ್ತಾ ಹೋದರು. ಆದರೆ ಆ ಚೆಕ್ಕುಗಳು ಬ್ಯಾಂಕಿನ ಮೆಟ್ಟಿಲನ್ನು ಹತ್ತಿದರೆ ತಾನೆ?

ಹಣವನ್ನು ಸರ್ಕಾರದ ಸಹಾಯವನ್ನು ಇಷ್ಟು ಉದಾಸೀನ ಮಾಡಿದ ವ್ಯಕ್ತಿ ಎಂಥ 'ಶ್ರೀಮಂತ'ರಿದ್ದಿರಬಹುದು. ಒಮ್ಮೆ ಡಿವಿಜಿಯ ಬಂಧುಗಳೊಬ್ಬರ ಮನೆಯಲ್ಲಿ ಒಂದು ಉತ್ಸವ ನಡೆಯಿತು. ಡಿವಿಜಿಗೆ ಹೋಗಲು ಆಗಲಿಲ್ಲ. ಮಕ್ಕಳನ್ನು ಕಳಿಸಿದರು. ಆರತಿ ಅಕ್ಷತೆಯ ಹೊತ್ತಾದರೂ ಹೆಂಡತಿ ಮನೆಯಲ್ಲೇ ಇದ್ದಾರೆ. ಗಂಡ ಅಸಮಾಧಾನದಿಂದ ಕೇಳಿದರು.

"ನೀನು ಉತ್ಸವಕ್ಕೆ ಹೋಗುವುದಿಲ್ಲವೇ?"

'ಇಲ್ಲ'

'ಯಾಕೆ'?

'ಮಕ್ಕಳನ್ನು ಕಳಿಸಿದ್ದೇನಲ್ಲ'

©KTBS NOT TO BE REPUBLISHED

"ಅದು ಸರಿ ನೀನೂ ಹೋಗಬೇಕಷ್ಟೆ. ಅವರು ನಮಗೆ ಬಹಳ ಬೇಕಾದವರು ನೀನು ಹೋಗದಿದ್ದರೆ ಬೇಸರಪಡುವುದಿಲ್ಲವೇ?"

"ಮನೆಯಲ್ಲಿ ಯಾರಾದರೂ ಇರಬೇಕಲ್ಲ"

"ನಾನು ಇರುತ್ತೇನೆ. ನೀನು ಹೋಗಿ ಬಾ."

ಅವರ ಹೆಂಡತಿ ಏನೇನೋ ಸಬೂಬು ಹೇಳಿದರು. ಡಿವಿಜಿ ಅದಕ್ಕೆ ಉತ್ತರ ಕೊಡುತ್ತಲೇ ಹೋದರು. ನಿಜವಾದ ಕಾರಣ ಕಡೆಗೆ ಹೊರಬರಲೇಬೇಕಾಯಿತು. "ನಾನು ಹೇಳಬಾರದೆಂದಿದ್ದೆ. ನೀವು ಪಟ್ಟುಹಿಡಿದು ನನ್ನ ಬಾಯಿ ಬಿಡಿಸುತ್ತಿದ್ದೀರಿ. ನನ್ನ ಹತ್ತಿರ ಇರುವುದು ಇದೊಂದೇ ಸೀರೆ. ಇದೂ ಒಂದೆರಡು ಕಡೆ ಹರಿದಿದೆ. ನಾನು ಈ ಬಟ್ಟೆಯಲ್ಲಿ ಹೊರಗೆ ಕಾಣಿಸಿಕೊಂಡರೆ ಜನ ನಿಮ್ಮನ್ನು ಕುರಿತು ಆಡಿಕೊಳ್ಳುವುದಿಲ್ಲವೇ? ಬಂಧುಗಳ ಮನೆಗೆ ಹೋಗಿಬರುವುದು ಹೇಗೆ ನನಗೆ ಕರ್ತವ್ಯವೋ ಹಾಗೇ ನಿಮ್ಮ ಮರ್ಯಾದೆಗೆ ಊನಬಾರದಂತೆ ನಡೆದುಕೊಳ್ಳುವುದೂ ನನಗೆ ಕರ್ತವ್ಯವೇ ಅಲ್ಲವೇ?"

ಡಿವಿಜಿ ಅವರು ಆಧುನಿಕ ಕನ್ನಡ ಸಾಹಿತ್ಯದ ದಿಗ್ಗಜರಲ್ಲಿ ಒಬ್ಬರು. ಕನ್ನಡ ಸಾರಸ್ವತ ಲೋಕದ ಭೀಷ್ಮ ಎಂದು ಕರೆಸಿಕೊಂಡವರು. ಅವರದ್ದು ಹೋಲಿಕೆ ಇಲ್ಲದ ಅಪೂರ್ವ ವ್ಯಕ್ತಿತ್ವ. ಇತರ ಸಾಹಿತಿಗಳಂತೆ ಅವರು ಸಾಹಿತಿ ಮಾತ್ರವಾಗಿರಲಿಲ್ಲ. ಹೆಸರಾಂತ ಪತ್ರಕರ್ತರಾಗಿದ್ದರು. ಹಿರಿಯ ವೇದಾಂತಿಯಾಗಿದ್ದರು. ರಾಜ್ಯಶಾಸ್ತ್ರದಲ್ಲಿ ಆಳವಾದ ತಿಳಿವಳಿಕೆಯುಳ್ಳವರಾಗಿದ್ದರು. ಸಾರ್ವಜನಿಕ ಜೀವನಕ್ಕೆ ಸಂಬಂಧಿಸಿದ ಎಲ್ಲ ವಿಚಾರಗಳ ಮಂಥನಕ್ಕಾಗಿ ಗೋಖಲೆ ಸಾರ್ವಜನಿಕ ಸಂಸ್ಥೆಯಂಥ ಪ್ರಸಿದ್ಧ ಸಂಸ್ಥೆಯನ್ನು ಕಟ್ಟಿದ ಸಾಹಿತಿ ಬೇರೆ ಯಾರಿದ್ದಾರೆ? ಅವರನ್ನು 'ಮಹಾ ಧೀಮಂತ' ಎಂಬ ಮಾತಿನಿಂದ ವರ್ಣಿಸುವುದು ಸರಿಯಾದೀತೇನೋ. ಅವರ ವ್ಯಕ್ತಿತ್ವವನ್ನು ಅವರು ಬರೆದ ಕವಿತೆಗಳ ಸಾಲುಗಳು ಬಹಳ ಸೊಗಸಾಗಿ ವರ್ಣಿಸುತ್ತವೆ. ಈ ಸಾಲುಗಳನ್ನು ಗಮನಿಸಿ.

ವನಸುಮದೊಲೆನ್ನ ಜೀ
ವನವು ವಿಕಸಿಸುವಂತೆ
ಮನವನನುಗೊಳಿಸು ಗುರುವೇ – ಹೇ ದೇವ ॥

ಕಾನನದಿ ಮಲ್ಲಿಗೆಯು
ಮೌನದಿಂ ಬಿರಿದು ನಿಜ
ಸೌರಭವ ಸೂಸಿ ನಲವಿಂ
ತಾನೆಲೆಯ ಪಿಂತಿರ್ದು
ದೀನತೆಯ ತೋರಿ ಅಭಿ
ಮಾನವನು ತೊರೆದು ಕೃತಕೃತ್ಯತೆಯ ಪಡೆವಂತೆ

©KTBS NOT TO BE REPUBLISHED

ಇಳೆಯಿಂದ ಮೊಳಕೆ ಒಗೆವಂದು ತಮಟೆಗಳಿಲ್ಲ
ಫಲ ಮಾಗುವಂದು ತುತ್ತೂರಿ ದನಿಯಿಲ್ಲ
ಬೆಳಕೀವ ಸೂರ್ಯಚಂದ್ರರದೊಂದು ಸದ್ದಿಲ್ಲ
ಹೊಲಿ ನಿನ್ನ ತುಟಿಗಳನು – ಮಂಕುತಿಮ್ಮ

ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ
ಎಲ್ಲರೊಳಗೊಂದಾಗು ಮಂಕುತಿಮ್ಮ.

## ಕೃತಿಕಾರರ ಪರಿಚಯ



**ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ** ಅವರು **೨೯. ೧೦. ೧೯೩೬ರಲ್ಲಿ ಶಿವಮೊಗ್ಗದ**ಲ್ಲಿ ಜನಿಸಿದರು. ತಂದೆ ಶಿವರಾಮ ಭಟ್ಟ, ತಾಯಿ ಮೂಕಾಂಬಿಕೆ. ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಪ್ರಾಧ್ಯಾಪಕರಾಗಿ, ನಿರ್ದೇಶಕರಾಗಿ, ಆರ್ಟ್ಸ್ ಫ್ಯಾಕಲ್ಟಿಯ ಡೀನ್ ಆಗಿ ದುಡಿದಿದ್ದಾರೆ. ಇವರು ಶ್ರೇಷ್ಠ ಸಾಹಿತಿ, ಪ್ರೌಢ ವಿಮರ್ಶಕ, ಜನಪ್ರಿಯ ಭಾವಗೀತಕಾರ, ಸಮರ್ಥ ಅನುವಾದಕ, ವಿದ್ವಾಂಸ ಮತ್ತು ವಾಗ್ಮಿ.

ಇವರ ಕವನ ಸಂಕಲನಗಳು **ವೃತ್ತ, ಚಿತ್ರಕೂಟ, ಸುಳಿ.** ಇವರ ಪ್ರಸಿದ್ಧ ಧ್ವನಿ ಸುರುಳಿಗಳು **ದೀಪಿಕಾ, ಭಾವಸಂಗಮ, ಬಂದೇ ಬರತಾವ ಕಾಲ, ಬಾರೋ ವಸಂತ, ಅಭಿನಂದನ, ಭಾವೋತ್ಸವ, ಪ್ರೇಮಧಾರೆ.** ಮಕ್ಕಳ ಧ್ವನಿ ಸುರುಳಿಗಳು **ನಂದನ, ಕಿನ್ನರಿ, ನವಿಲುಗರಿ, ಕಿಶೋರಿ** ಮುಂತಾದವು. ಹತ್ತಾರು ಸಾಹಿತ್ಯ ಸಾಧಕರ ಜೀವನ ಘಟನೆಗಳ ಬಗೆಗೆ ಬೆಳಕು ಚೆಲ್ಲುವ **ಸಾಹಿತ್ಯ ರತ್ನ ಸಂಪುಟ** ಕೃತಿಯನ್ನು ರಚಿಸಿದ್ದಾರೆ. ೨೦೦೦ದಲ್ಲಿ ಹೂಸ್ಟನ್ನಿನಲ್ಲಿ ನಡೆದ ಪ್ರಥಮ ಅಮೆರಿಕಾ ವಿಶ್ವ ಕನ್ನಡ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. **ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಶಿವರಾಮ ಕಾರಂತ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ಆಳ್ವಾಸ್ ನುಡಿಸಿರಿ ಪ್ರಶಸ್ತಿ, ಆರ್ಯಭಟ ಪ್ರಶಸ್ತಿ** ಇವೆಲ್ಲವೂ ಇವರ ಸಾಹಿತ್ಯ ಸೇವೆಗೆ ಸಂದಿವೆ.

**ಡಾ. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ ಅವರ ಸಾಹಿತ್ಯ ರತ್ನ ಸಂಪುಟ** ಕೃತಿಯಿಂದ ಪ್ರಸ್ತುತ ಗದ್ಯ ಭಾಗವನ್ನು ಆಯ್ದು ಸಂಪಾದಿಸಿ ನಿಗದಿಪಡಿಸಿದೆ.

©KTBS NOT TO BE REPUBLISHED

## ಆಶಯ ಭಾವ

ಕನ್ನಡ ನಾಡು ರಸ ಋಷಿಗಳ ಬೀಡು. ಸಾಧು ಸತ್ಪುರುಷರ ನೆಲೆವೀಡು. ಕನ್ನಡ ನಾಡಿನಲ್ಲಿ ಹಲವಾರು ಸತ್ಪುರುಷರು ಜನಿಸಿ, ತ್ಯಾಗಜೀವನ ನಡೆಸಿ, ಇತರರಿಗೆ ಆದರ್ಶಪ್ರಾಯರಾಗಿದ್ದಾರೆ.

ಇಂತಹ ಋಷಿಪ್ರಾಯರಾದವರಲ್ಲಿ ಡಿವಿಜಿ ಅವರೂ ಒಬ್ಬರು. ಸುಸಂಸ್ಕೃತ ವಿದ್ಯಾವಂತರಾದ ಡಿವಿಜಿ ಅವರು ಸುಮಾರು ೬೬ ಕೃತಿಗಳನ್ನು ಎಂದರೆ ಸುಮಾರು ೮೦೦೦ ಪುಟಗಳ ಸಾಹಿತ್ಯವನ್ನು ೧೫೦೦ ಪುಟಗಳ ಬಿಡಿ ಲೇಖನಗಳನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ ಸಿರಿವಂತ ಸಾಹಿತಿ. ಲೇಖಕ, ಪತ್ರಕರ್ತ, ಸಂಪಾದಕ, ಸಾಹಿತಿ ಮತ್ತು ರಾಜಕಾರಣಿಯಾಗಿ ಎಲ್ಲದಕ್ಕೂ ಮಿಗಿಲಾಗಿ ಲೌಕಿಕ ಆಸೆ ಆಮಿಷಗಳಿಗೆ ಒಳಗಾಗದೇ ಮೇರು ವ್ಯಕ್ತಿತ್ವದ ಆದರ್ಶ ವ್ಯಕ್ತಿಯಾಗಿ ಬಾಳಿ ಬದುಕಿದವರು ಡಾ. ಡಿ.ವಿ.ಗುಂಡಪ್ಪ ಅವರು. ತನಗಾಗಿ ಆಸ್ತಿ, ಹಣ ಮುಂತಾದುವನ್ನು ಗಳಿಸದೆ ಸದಾ ಸಮಾಜಮುಖಿಯಾಗಿ, ಆದರ್ಶ ರಾಷ್ಟ್ರ ನಿರ್ಮಾಣಕ್ಕಾಗಿ ದಣಿಯದೇ ದುಡಿದವರು ಡಿವಿಜಿ. ಅವರ ಸಾರ್ಥಕ ಬದುಕು, ಆದರ್ಶ ಜೀವನ ನಮ್ಮೆಲ್ಲರ ಬದುಕಿನ ಸೂತ್ರವಾಗಲಿ ಎಂಬುದೇ ಪಠ್ಯದ ಆಶಯ.

* * *

## ಪದಗಳ ಅರ್ಥ

| | | | |
|---|---|---|---|
| ಇಳೆ | – ಭೂಮಿ | ಕಾನನ | – ವನ, ಕಾಡು |
| ತರ್ಕ | – ವಾದ | ತಿರುಪೆ | – ಭಿಕ್ಷೆ |
| ಪರಮೋಚ್ಚ | – ಅತ್ಯುನ್ನತ | ಮೆಟ್ರಿಕ್ಯುಲೇಷನ್ | – ೧೦ನೆಯ ತರಗತಿಗೆ ಸಮಾನ ಓದು |
| ಮೇಧಾವಿ | – ಬುದ್ಧಿವಂತ | ವನ | – ಕಾಡು |
| ಸಂಭಾವನೆ | – ಗೌರವಧನ | ಸುಮ | – ಹೂವು |
| ವಿಕಸನ | – ಹಿಗ್ಗುವಿಕೆ, ಅರಳುವಿಕೆ, ದೊಡ್ಡದಾಗುವಿಕೆ | | |

## ಅಭ್ಯಾಸ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಡಿವಿಜಿ ಅವರ ಹುಟ್ಟೂರು ಯಾವುದು?

೨. ಡಿವಿಜಿ ಅವರ ಮನಸ್ಸಿನ ಮೇಲೆ ಪ್ರಭಾವ ಬೀರಿದವರು ಯಾರು?

೩. ಡಿವಿಜಿ ಅವರನ್ನು ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಕಳುಹಿಸಿದವರು ಯಾರು?

೪. ವಿಶ್ವೇಶ್ವರಯ್ಯ ಅವರು ಮೈಸೂರು ಸರ್ಕಾರದಲ್ಲಿ ಅಲಂಕರಿಸಿದ್ದ ಹುದ್ದೆ ಯಾವುದು?

೫. ಡಿವಿಜಿ ಅವರು ಸ್ಥಾಪಿಸಿದ ಸಂಸ್ಥೆ ಯಾವುದು?

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.**

೧. ರಸೂಲ್‌ಖಾನ್ ಅವರು ಡಿವಿಜಿ ಅವರ ವಿದ್ಯಾಭ್ಯಾಸಕ್ಕಾಗಿ ಮಾಡಿದ ಸಹಾಯವೇನು?

೨. ವಿಶ್ವೇಶ್ವರಯ್ಯ ಅವರು ತಮ್ಮ ಕಾರ್ಯದರ್ಶಿಗೆ ಏನು ಹೇಳಿದರು?

@KTBS NOT TO BE REPUBLISHED

೩. ಡಿವಿಜಿ ಅವರು ಏಕೆ ಸಂಭಾವನೆಯನ್ನು ಪಡೆಯಲಿಲ್ಲ?

೪. ಡಿವಿಜಿ ಅವರ ಶ್ರೀಮತಿ ಅವರು ಬಂಧುಗಳ ಮನೆಯಲ್ಲಿ ನಡೆದ ಉತ್ಸವಕ್ಕೆ ಏಕೆ ಹೋಗಿರಲಿಲ್ಲ?

೫. ಎಲ್ಲರೊಳಗೊಂದಾಗಿ ಬಾಳುವ ಬಗೆಯನ್ನು ಡಿ.ವಿ.ಜಿ. ಹೇಗೆ ಚಿತ್ರಿಸಿದ್ದಾರೆ?

**ಇ. ಕೊಟ್ಟಿರುವ ಪ್ರಶ್ನೆಗಳಿಗೆ ಏಳು–ಎಂಟು ವಾಕ್ಯಗಳಲ್ಲಿ ಉತ್ತರಿಸಿ.**

೧. ಡಿವಿಜಿ ಅವರ ವ್ಯಕ್ತಿತ್ವವನ್ನು ಸಂಗ್ರಹಿಸಿ ಬರೆಯಿರಿ.

೨. ಡಿವಿಜಿ ಅವರಿಗೂ ಅವರ ಶ್ರೀಮತಿ ಅವರಿಗೂ ನಡೆದ ಸಂಭಾಷಣೆಯನ್ನು ಬರೆಯಿರಿ.

**ಈ. ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.**

೧. "ಏನು ಬಂದಿರಿ ಗುಂಡಪ್ಪ?"

೨. "ನೀನು ಉತ್ಸವಕ್ಕೆ ಹೋಗುವುದಿಲ್ಲವೇ?"

೩. "ನನ್ನ ಹತ್ತಿರ ಇರುವುದು ಇದೊಂದೇ ಸೀರೆ"

೪. "ಹೊಲಿ ನಿನ್ನ ತುಟಿಗಳನು ಮಂಕುತಿಮ್ಮ"

೫. "ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ"

**ಉ. ಬಿಟ್ಟ ಸ್ಥಳವನ್ನು ಸೂಕ್ತ ಪದಗಳಿಂದ ತುಂಬಿರಿ.**

೧. ಮೈಸೂರು ರಾಜ್ಯದ ಪರಮೋಚ್ಚ ಅಧಿಕಾರ ಹಿಡಿದಿದ್ದವರು ______________

೨. ಮಿರ್ಜಾ ಅವರ ಕಾಲಕ್ಕೆ ಡಿವಿಜಿ ದೊಡ್ಡ ______________ ಎಂದು ವಿದ್ಯಾವಂತರ ವಲಯದಲ್ಲಿ ಹೆಸರಾಗಿದ್ದರು.

೩. ಮುಳಬಾಗಿಲು ____________________ ಜಿಲ್ಲೆಗೆ ಸೇರಿದೆ.

೪. ಡಿವಿಜಿ ಅವರು ಮುಳಬಾಗಿಲಿನ _______ ಶಾಲೆಯಲ್ಲಿ ಲೋಯರ್ ಸೆಕೆಂಡರಿ ಪೂರ್ತಿಗೊಳಿಸಿದರು.

೫. ಡಿವಿಜಿ ಅವರು ಕನ್ನಡ ಸಾರಸ್ವತ ಲೋಕದ ___________ ಎಂದು ಕರೆಸಿಕೊಂಡರು.

NOT TO BE REPUBLISHED @KTBS

## ಸೈದ್ಧಾಂತಿಕ ಭಾಷಾಭ್ಯಾಸ

# ನಾಮಪದ

ಒಂದು ವಸ್ತು, ಒಬ್ಬ ವ್ಯಕ್ತಿ, ಒಂದು ಸ್ಥಳದ ಹೆಸರಾಗಿರಬಹುದು ಅಥವಾ ಒಂದು ಗುಂಪನ್ನು ಸೂಚಿಸುವ ಪದವಾಗಿರಬಹುದು ಅಥವಾ ಗುಣ, ಸ್ವಭಾವ, ಸಂಖ್ಯೆ, ಸ್ಥಾನ, ಅಳತೆ, ತೂಕ ಇತ್ಯಾದಿಗಳನ್ನು ಸೂಚಿಸುವ ಪದಗಳಾಗಿರಬಹುದು. ಅವುಗಳನ್ನು ನಾಮಪದಗಳೆಂದು ಕರೆಯುತ್ತೇವೆ.

**ನಾಮಪದದ ವಿಧಗಳು :**

೧. **ವಸ್ತುವಾಚಕ ಅಥವಾ ನಾಮವಾಚಕ :** ಯಾವುದೇ ವಸ್ತು, ವ್ಯಕ್ತಿ, ಪ್ರಾಣಿ ಹಾಗೂ ಸ್ಥಳಗಳಿಗೆ ಇರುವ ಹೆಸರುಗಳನ್ನು 'ವಸ್ತುವಾಚಕ'ಗಳೆನ್ನುವರು. ಇವುಗಳಲ್ಲಿ ಮೂರು ವಿಧ. ಅವುಗಳೆಂದರೆ.

ಅ) **ರೂಢನಾಮ :** ಅನಾದಿಕಾಲದಿಂದ ರೂಢಿಯಾಗಿ ಬಂದಿರುವ ಸಾಮಾನ್ಯ ಹೆಸರುಗಳನ್ನು 'ರೂಢನಾಮ' ಎಂದು ಕರೆಯುತ್ತಾರೆ.
ಉದಾ : ಹೆಂಗಸು, ಗಂಡಸು, ಮಕ್ಕಳು, ಜನರು, ನದಿ, ಬೆಟ್ಟ – ಇತ್ಯಾದಿ.

ಆ) **ಅಂಕಿತನಾಮ :** ವ್ಯವಹಾರದ ಉಪಯೋಗಕ್ಕಾಗಿ ಇಟ್ಟುಕೊಂಡಿರುವ ಹೆಸರುಗಳನ್ನು 'ಅಂಕಿತನಾಮ' ಎಂದು ಕರೆಯುತ್ತಾರೆ.
ಉದಾ : ಗಣೇಶ, ಗಂಗಾ, ರಾಮ, ರಹೀಮ, ಧಾರವಾಡ – ಇತ್ಯಾದಿ.

ಇ) **ಅನ್ವರ್ಥನಾಮ :** ವಸ್ತುವಿನ ರೂಪ, ಗುಣ, ವೃತ್ತಿ, ಸ್ವಭಾವಾದಿ ವಿಶೇಷವಾದ ಹಾಗೂ ಅರ್ಥಕ್ಕೆ ಅನುಸಾರ ನೀಡುವ ಹೆಸರುಗಳಿಗೆ 'ಅನ್ವರ್ಥನಾಮ' ಎಂದು ಕರೆಯುತ್ತಾರೆ.
ಉದಾ : ಜಾಣ, ಪಂಡಿತ, ಶಿಕ್ಷಕ, ವಿದ್ಯಾರ್ಥಿ, ವಿಜ್ಞಾನಿ – ಇತ್ಯಾದಿ.

೨. **ಗುಣವಾಚಕ :** ವಸ್ತು ಅಥವಾ ವ್ಯಕ್ತಿಗಳ ಗುಣ, ರೀತಿ ಸ್ವಭಾವಗಳನ್ನು ತಿಳಿಸುವ ವಿಶೇಷಣಗಳಿಗೆ 'ಗುಣವಾಚಕ' ಎನ್ನುವರು. ವಿಶೇಷಣಗಳನ್ನು ಯಾವುದಕ್ಕೆ ಹೇಳಲಾಗುತ್ತದೋ ಅಂಥ ಶಬ್ದಗಳನ್ನು ವಿಶೇಷ್ಯಗಳು ಎನ್ನುತ್ತಾರೆ.

| ಉದಾ : | **ವಿಶೇಷಣ** | **ವಿಶೇಷ್ಯ** |
|---|---|---|
| | ಸಿಹಿ | ಹಣ್ಣು |
| | ದೊಡ್ಡ | ನದಿ |
| | ಒಳ್ಳೆಯ | ಹುಡುಗಿ |

NOT TO BE REPUBLISHED
@KTBS

೩. **ಸಂಖ್ಯಾವಾಚಕ :** ಸಂಖ್ಯೆಯನ್ನು ಹೇಳುವ ಶಬ್ದಗಳನ್ನು ಸಂಖ್ಯಾ ವಾಚಕಗಳು. ಉದಾ : ಒಂದು, ಎರಡು, ಮೂರು, ಹತ್ತು, ಸಾವಿರ, ಲಕ್ಷ, ಕೋಟಿ – ಇತ್ಯಾದಿ.

೪. **ಸಂಖ್ಯೇಯ ವಾಚಕ :** ಸಂಖ್ಯೆಯಿಂದ ಕೂಡಿದ ವಸ್ತು ವ್ಯಕ್ತಿಗಳನ್ನು ಹೇಳುವ ಶಬ್ದಗಳೆಲ್ಲಾ ಸಂಖ್ಯೇಯ ವಾಚಕಗಳು ಎನ್ನುತ್ತಾರೆ. ಕೆಳಗಿನ ಉದಾಹರಣೆಯಲ್ಲಿ ಸಂಖ್ಯಾವಾಚಕ ಮತ್ತು ಸಂಖ್ಯೇಯ ವಾಚಕಗಳಿಗಿರುವ ವ್ಯತ್ಯಾಸವನ್ನು ತಿಳಿಯಿರಿ.

| ಉದಾ : | **ಸಂಖ್ಯಾವಾಚಕ** | **ಸಂಖ್ಯೇಯ ವಾಚಕ** |
|---|---|---|
| | ಎರಡು | ಇಬ್ಬರು, ಎರಡನೆಯ. |
| | ಮೂರು | ಮೂವರು, ಮೂರನೆಯ, ಮೂರರಿಂದ. |
| | ಐದು | ಐವರು, ಐದನೆಯ. |

೫. **ಭಾವನಾಮ :** ವಸ್ತುಗಳ ಮತ್ತು ಕ್ರಿಯೆಯ ಭಾವವನ್ನು ತಿಳಿಸುವ ಶಬ್ದಗಳನ್ನು 'ಭಾವನಾಮ' ಎನ್ನುತ್ತಾರೆ. 'ಭಾವ' ಎಂದರೆ ಇರುವಿಕೆ, ಸ್ಥಿತಿ ಎಂದು ಅರ್ಥೈಸಬಹುದು.

ಉದಾ : ಬಿಳಿಯದರ ಭಾವ – ಬಿಳುಪು
ಆಡುವುದರ ಭಾವ – ಆಟ

©KTBS NOT TO BE REPUBLISHED

೬. **ಪರಿಮಾಣ ವಾಚಕ :** ವಸ್ತುಗಳ ಸಾಮಾನ್ಯ ಅಳತೆ, ಪರಿಮಾಣ, ಗಾತ್ರ ಇತ್ಯಾದಿಗಳನ್ನು ಹೇಳುವ ಶಬ್ದಗಳನ್ನು 'ಪರಿಮಾಣ ವಾಚಕ' ಎನ್ನುತ್ತಾರೆ.

ಉದಾ : ಪರಿಮಾಣ – ಹಲವು, ಕೆಲವು. (ಹಲವು ನದಿಗಳು, ಕೆಲವು ಹಣ್ಣುಗಳು)
ಗಾತ್ರ – ಅಷ್ಟು, ಇಷ್ಟು (ಗುಡ್ಡದಷ್ಟು, ಆನೆಯಷ್ಟು)
ಅಳತೆ – ಅಷ್ಟು, ಇಷ್ಟು (ಅಷ್ಟು ದೂರ, ಇಷ್ಟು ಪುಸ್ತಕಗಳು) – ಇತ್ಯಾದಿ.

೭. **ಪ್ರಕಾರ ವಾಚಕ :** ವಸ್ತುಗಳ ಸ್ಥಿತಿ ಅಥವಾ ರೀತಿಗಳನ್ನು ತಿಳಿಸುವ ಶಬ್ದಗಳನ್ನು 'ಪ್ರಕಾರ ವಾಚಕ' ಎನ್ನುವರು. ಇವು ಒಂದು ಬಗೆಯ ಗುಣವಾಚಕಗಳೇ ಆಗಿವೆ.
ಉದಾ : ಅಂಥ, ಅಂಥದು, ಅಂತಹುದು, ಇಂಥ, ಇಂಥದು, ಇಂತಹುದು, ಎಂತಹ – ಇತ್ಯಾದಿ.

೮. **ದಿಗ್ವಾಚಕಗಳು :** ದಿಕ್ಕುಗಳ ಹೆಸರನ್ನು ಸೂಚಿಸುವ ಶಬ್ದಗಳನ್ನು 'ದಿಗ್ವಾಚಕ' ಎನ್ನುವರು. ಉದಾ : ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ, ಈಶಾನ್ಯ, ಆಗ್ನೇಯ, ವಾಯವ್ಯ, ನೈರುತ್ಯ – ಇತ್ಯಾದಿ.

೯. **ಸರ್ವನಾಮ :** ನಾಮಪದಗಳ ಬದಲಾಗಿ ಬಳಸುವ ಪದಗಳಿಗೆ ಸರ್ವನಾಮಗಳು ಎನ್ನುವರು.
ಉದಾ : ಅವನು, ಅವಳು, ಅದು, ಇದು, ಅವರು, ಇವರು, ಇವುಗಳಿಂದ – ಇತ್ಯಾದಿ.

ಸರ್ವನಾಮಗಳನ್ನು 'ಪುರುಷಾರ್ಥಕ ಸರ್ವನಾಮ', 'ಆತ್ಮಾರ್ಥಕ ಸರ್ವನಾಮ', 'ಪ್ರಶ್ನಾರ್ಥಕ ಸರ್ವನಾಮ' ಎಂದು ಮೂರು ಭಾಗಗಳಾಗಿ ವಿಂಗಡಿಸಬಹುದು.

೧. **ಪುರುಷಾರ್ಥಕ ಸರ್ವನಾಮ :** ಪುರುಷಾರ್ಥಕ ಸರ್ವನಾಮಗಳಲ್ಲಿ ಮೂರು ವಿಧ.

ಅ. **ಉತ್ತಮ ಪುರುಷ :** ಮಾತನಾಡುವ ವ್ಯಕ್ತಿ ತನ್ನನ್ನು ನಿರ್ದೇಶಿಸಿಕೊಳ್ಳುವ ಸರ್ವನಾಮಗಳನ್ನು 'ಉತ್ತಮ ಪುರುಷ' ಎನ್ನಲಾಗುತ್ತದೆ.
ಉದಾ : ನಾನು, ನಾವು.

ಆ. **ಮಧ್ಯಮ ಪುರುಷ :** ಮಾತನಾಡುವವನು ತನ್ನ ಮುಂದಿರುವ ವ್ಯಕ್ತಿಯನ್ನು ನಿರ್ದೇಶಿಸುವ ಸರ್ವನಾಮಗಳನ್ನು 'ಮಧ್ಯಮ ಪುರುಷ' ಎನ್ನಲಾಗುತ್ತದೆ.
ಉದಾ : ನೀನು, ನೀವು.

ಇ. **ಪ್ರಥಮ ಪುರುಷ :** ಮಾತನಾಡುವವನಿಂದ ದೂರವಿರುವ ವ್ಯಕ್ತಿ ಇಲ್ಲವೇ ವಸ್ತುವನ್ನು ನಿರ್ದೇಶಿಸುವ ಸರ್ವನಾಮಗಳನ್ನು 'ಪ್ರಥಮ ಪುರುಷ' ಎನ್ನಲಾಗುತ್ತದೆ
ಉದಾ : ಅವರು, ಅವನು, ಅವಳು, ಅದು, ಅವು, ಇದು, ಇವು.

೨. **ಆತ್ಮಾರ್ಥಕ ಸರ್ವನಾಮ :** ಮಾತನಾಡುವವನು ತನ್ನನ್ನು ಹಾಗೂ ಇತರರನ್ನು ಗೌರವ ಸೂಚಕವಾಗಿ ಆತ್ಮಪ್ರಶಂಸೆಯಿಂದ ಬಳಸುವ ಸರ್ವನಾಮಗಳನ್ನು 'ಆತ್ಮಾರ್ಥಕ ಸರ್ವನಾಮ' ಎನ್ನುತ್ತಾರೆ. ಉದಾ : ತಾನು, ತಾವು, ತನ್ನ, ತಮ್ಮ.

೩. **ಪ್ರಶ್ನಾರ್ಥಕ ಸರ್ವನಾಮ :** ಪ್ರಶ್ನೆಯಿಂದ ಕೂಡಿದ ಎಲ್ಲ ಸರ್ವನಾಮಗಳನ್ನು ಪ್ರಶ್ನಾರ್ಥಕ ಸರ್ವನಾಮ ಎನ್ನಲಾಗುತ್ತದೆ.
ಉದಾ : ಯಾವುವು? ಯಾವುದು? ಯಾರು? ಏತರದು? ಆವುದು?

@KTBS NOT TO BE REPUBLISHED

## ಅಭ್ಯಾಸ ಚಟುವಟಿಕೆ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

೧. ನಾಮಪದ ಎಂದರೇನು?
೨. ಭಾವನಾಮ ಎಂದರೇನು?

೩. ಸರ್ವನಾಮ ಎಂದರೇನು? ವಿಧಗಳಾವುವು?

೪. ಪುರುಷಾರ್ಥಕ ಸರ್ವನಾಮಗಳಲ್ಲಿ ಎಷ್ಟು ವಿಧ?

## ಪ್ರಾಯೋಗಿಕ ಅಭ್ಯಾಸ

**ಅ. ಕೊಟ್ಟಿರುವ ವಾಕ್ಯಗಳಲ್ಲಿರುವ ನಾಮಪದಗಳನ್ನು ಆರಿಸಿ ಬರೆಯಿರಿ.**

೧. ಡಿವಿಜಿಯ ಊರು ಮುಳಬಾಗಿಲು.

೨. ಬೆಂಗಳೂರಿನ ರೈಲಿನಲ್ಲಿ ಕೂರಿಸುತ್ತೇನೆ.

೩. ವಿಶ್ವೇಶ್ವರಯ್ಯನವರು ದಿವಾನರಾಗಿದ್ದ ಕಾಲವದು.

೪. ಡಿವಿಜಿಯ ಬಂಧುಗಳ ಮನೆಯಲ್ಲಿ ಒಂದು ಉತ್ಸವವು ನಡೆಯಿತು.

**ಆ. ಕೊಟ್ಟಿರುವ ಪದಗಳಲ್ಲಿರುವ ವಿಭಕ್ತಿ ಪ್ರತ್ಯಯಗಳನ್ನು ಪ್ರತ್ಯೇಕಿಸಿ ಬರೆದು ಅದು ಯಾವ ವಿಭಕ್ತಿ ಎಂಬುದನ್ನು ಬರೆಯಿರಿ.**

| | | | | |
|---|---|---|---|---|
| ದಿವಾನರನ್ನು | ದಿನದಿನದ | ಡಿವಿಜಿಗೆ | ಬಲದಿಂದ | ವಲಯದಲ್ಲಿ |
| ಮಂಕುತಿಮ್ಮನ | ಶಿಕ್ಷಣವನ್ನು | ಓದಿಗೆ | ಸಹಾಯಕ್ಕೆ | ಬಂಡಿಯಲ್ಲಿ |
| ದಯೆಯಿಂದ | ರಸೂಲ್‌ಖಾನನ | | | |

**ಇ. ಈ ಗದ್ಯ ಭಾಗದಲ್ಲಿ ಬಂದಿರುವ 'ಸರ್ವನಾಮ' ಪದಗಳನ್ನು ಪಟ್ಟಿ ಮಾಡಿ.**

## ಪೂರಕ ಓದು

✦ ಡಿ.ವಿ.ಜಿ. ಅವರ ಮಂಕುತಿಮ್ಮನ ಕಗ್ಗ, ಜ್ಞಾಪಕ ಚಿತ್ರಶಾಲೆ, ಮೈಸೂರಿನ ದಿವಾನರುಗಳು ಕೃತಿಗಳನ್ನು ಓದಿರಿ.

✦ ✦ ✦ ✦ ✦

©KTBS NOT TO BE REPUBLISHED

# ೩. ನೀರು ಕೊಡದ ನಾಡಿನಲ್ಲಿ

– ನೇಮಿಚಂದ್ರ

**ಪ್ರವೇಶ :** ವಿಶ್ವವು ಜಾಗತೀಕರಣದ ಹೆಸರಿನಲ್ಲಿ ಪ್ರಕೃತಿಯಿಂದ ಮಾನವನಿಗೆ ಉಚಿತವಾಗಿ ಲಭ್ಯವಾಗಬಹುದಾದ ಗಾಳಿ, ಬೆಳಕು, ನೀರು ಮತ್ತು ಆಹಾರಗಳಂಥ ಅತ್ಯವಶ್ಯಕವಾದ ವಸ್ತುಗಳನ್ನು ಹಣಗಳಿಸುವ ಮಾರ್ಗವನ್ನಾಗಿ ಪರಿವರ್ತಿಸಲು ಹೊರಟಿರುವುದು ಆತಂಕಕಾರಿ ವಿಷಯವಾಗಿದೆ. ಭಾರತೀಯರಾದ ನಾವು ಮಾನವೀಯತೆಗೆ ಬೆಲೆಕೊಟ್ಟು "ಬಳಲಿ ಬಂದವರಿಗೆ ನೀರು, ಹಸಿದು ಬಂದವರಿಗೆ ಅನ್ನವನ್ನಿಕ್ಕಿ" ಮೌಲ್ಯಯುತ ಸಂಸ್ಕೃತಿಯನ್ನು ಕಾಪಾಡಿಕೊಂಡು ಬಂದಿರುವುದು ವಿಶ್ವವೇ ಹೆಮ್ಮೆಪಡುವ ಸಂಗತಿಯಾಗಿದೆ.

ಭಾರತದಿಂದ ಹೊರಗೆ ಕಾಲಿಟ್ಟರೆ, ಉಳಿದೆಲ್ಲವೂ 'ನೀರು ಕೊಡದ ನಾಡುಗಳು' ಎಂಬುದು ನನ್ನ ಇಲ್ಲಿಯವರೆಗಿನ ಅನುಭವ. ಎರಡು ವಾರ ಕಳೆದಿದೆ. ಊರೂರು ಅಲೆದಿದ್ದಾಯಿತು. ದಿನವೂ ಅಸಾಧ್ಯ ಬಾಯಾರಿಕೆ. ಕೋಲಾಗಳು, ಫ್ರೆಂಚ್ ವೈನ್, ಬಿಯರ್, ಬಾಟಲಿಯಲ್ಲಿ ಹಣ್ಣಿನ ರಸ ಧಾರಾಳವಾಗಿ ದೊರೆಯುತ್ತವೆ. ಕುಡಿಯಲು ನೀರು ಸಿಗದು.

ಇಲ್ಲಿ ಯೂರೋಪಿನಲ್ಲಾಗಲಿ, ಅಲ್ಲಿ ಅಮೇರಿಕದಲ್ಲಾಗಲಿ ನೀರು ಕೊಡುವ ಸಂಪ್ರದಾಯವಿಲ್ಲ. ಹಿಂದೆ ಇತ್ತೇನೋ, ಈಗಂತೂ ಇಲ್ಲ. ನೀರು ಸಲೀಸಾಗಿ ಎಲ್ಲೆಂದರಲ್ಲಿ ಪುಕ್ಕಟ್ಟೆಯಾಗಿ ನಿಮಗೆ ಖಂಡಿತ ಸಿಗದು. ನಮ್ಮಲ್ಲಿಯಂತೆ ರೈಲು ನಿಲ್ದಾಣಗಳಲ್ಲಿ, ಬಸ್ಸು ನಿಲ್ದಾಣಗಳಲ್ಲಿ, ವಿಮಾನ ನಿಲ್ದಾಣಗಳಲ್ಲೂ 'ದುಡ್ಡಿಲ್ಲದೆ ಕುಡಿಯಬಲ್ಲ' ನೀರನ್ನು ಇರಿಸುವುದಿಲ್ಲ. ಬಾಯಾರಿದಾಗ ಈಗಲೂ ಹೋಟೆಲ್ ಒಂದಕ್ಕೆ ಹೊಕ್ಕು, ನೀರು ಮಾತ್ರ ಕುಡಿದು ಹೊರ ಬರಬಹುದಾದ ಸವಲತ್ತು ಇಲ್ಲಿಲ್ಲ. ಮನೆಯ ಹೊರಗೆ ಕಾಂಪೌಂಡ್ ಗೋಡೆಗೆ ಸಣ್ಣ ತೊಟ್ಟಿ ಕಟ್ಟಿ, 'ದನಕರುಗಳು ಕುಡಿದು ಹೋಗಲಿ' ಎಂದು ನೀರು ತುಂಬಿಡುತ್ತಿದ್ದ ಬಾಲ್ಯದ ದಿನಗಳು ನನಗಿನ್ನೂ ನೆನಪಿವೆ. ನಾನು ದಿಲ್ಲಿಗೆ ಬಂದು, ವಿದೇಶಕ್ಕೆ ಹಾರಿದ್ದೆ. ದಿಲ್ಲಿಯಲ್ಲೋ ಧಗೆಧಗೆ ಬಿಸಿಲು. ಆದರೆ ಯಾರೋ ಪುಣ್ಯಾತ್ಮರು ಅಲ್ಲಿ ದೊಡ್ಡ ಮಣ್ಣಿನ ಮಡಕೆಗಳಲ್ಲಿ ನೀರು ತುಂಬಿಟ್ಟಿರುತ್ತಿದ್ದರು. ಅನೇಕ ಗುರುದ್ವಾರಗಳ ಬಳಿ, ಸ್ವಯಂ ಸೇವಕರು ನೀರಿನ ದೊಡ್ಡ ಕೊಳಾಯಿ ಹಿಡಿದು, ನಿಲ್ಲಿಸಿದ ಆಟೋ, ಬಸ್ಸು ಹಾಗೂ ದಾರಿಹೋಕರಿಗೆಲ್ಲ ನೀರು ತುಂಬಿ ತುಂಬಿ ಕುಡಿಸುವುದನ್ನೂ ನೋಡಿದ್ದೇನೆ. ರೋತಕ್ ರಸ್ತೆಯ ಅತ್ತೆಯ ಮನೆಯೊಳಗೆ ಕಾಲಿಡುತ್ತಿದ್ದಂತೆ, 'ಬೇಟಾ ತಾಯಾಜಿ ಆಯೆ ಹೈ, ಥಂಡಾ ಪಾನಿ ಪಿಲಾವೋ' ನನ್ನ ಮೈದುನನ ಮಗನಿಗೆ ಅತ್ತೆ ಕೂಗಿ ಹೇಳಿದರು. ಪುಟ್ಟ ಹುಡುಗ ತತ್‌ಕ್ಷಣ 'ತಣ್ಣನೆಯ ನೀರು' ತಂದು ಕೈಗಿಟ್ಟ.

NOT TO BE REPUBLISHED @KTBS

ದಿಲ್ಲಿಯ ಧೂಳು ಹಾದಿಗಳೆಲ್ಲ ಮರೆತವು. ಮನೆಗೆ ಬಂದವರಿಗಂತು ' ಮೊದಲು ನೀರು ಕೊಡುವ' ಸಂಪ್ರದಾಯ. ಡಾಬಾ ಆಗಲಿ, ದರ್ಶಿನಿ ಆಗಲಿ, ಪಂಚತಾರಾ ಹೋಟಲೇ ಆಗಲಿ ಮೊದಲು ನೀರು ಮೇಜಿನ ಮೇಲೆ ಕುಳಿತುಕೊಳ್ಳುತ್ತದೆ. ಪುಕ್ಕಟ್ಟೆಯಾಗಿ ಕೊಡುವ ನೀರು. ಆದರೆ ನಾನೀಗ 'ನೀರು ಕೊಡದ ನಾಡು'ಗಳಲ್ಲಿ ಅಲೆಯುತ್ತಿದ್ದೇನೆ.

'ಮ್ಯಾಗ್ಡೊನಾಲ್ಡ್' ನಂತಹ ಅಗ್ಗದ ಫಾಸ್ಟ್‌ಫುಡ್ ಜಾಯಿಂಟ್ಸ್‌ಗೆ ಹೋಗಿ, ವೈಭವದ ಪಂಚತಾರಾ ಹೋಟೇಲುಗಳಿಗೇ ಹೋಗಿ, ನೀರು ಇಡುವ ಅಥವಾ ಕೊಡುವ ಸಂಪ್ರದಾಯವೇ ಇಲ್ಲಿಲ್ಲ. ಹೋಟೇಲುಗಳಲ್ಲಿ ವೈನ್, ಬಿಯರ್, ಇಲ್ಲವೇ ಕೋಲಾಗಳಿಂದಲೇ ಊಟ ಆರಂಭ. 'ಮ್ಯಾಗ್ಡೊನಾಲ್ಡ್'ಗಳಲ್ಲಿ ಫ್ರೆಂಚ್ ಪ್ರೈಸ್ ಇರಲಿ, ಸ್ಯಾಂಡ್ವಿಚ್ ಆಗಲಿ, ಬರ್ಗರ್ ಆಗಲಿ ಜೊತೆಗೆ ದೊಡ್ಡ ಗಾತ್ರದ ಕೋಲಾದೊಡನೆಯೇ ನೀಡುತ್ತಾರೆ.

ಮಧ್ಯಾಹ್ನದ ಊಟದ ಸಮಯ, ನಾನು 'ನೀರು, ನೀರು' ಎಂದು ಬಡಬಡಿಸುವಾಗ, ಸಣ್ಣ ಬಾಟಲಿಯಲ್ಲಿ ನೀರು ಬರುತ್ತಿತ್ತು. ಕುಡಿದು ನೋಡಿದರೆ ಅದು ಬರೀ ಸೋಡಾ. 'ಸೋಡಾ ಅಲ್ಲ ವಾಟರ್' ಎನ್ನುತ್ತಿದ್ದೆ. 'ಇದು ನೀರೆ, ಸ್ಪಾರ್ಕ್ಲಿಂಗ್ ವಾಟರ್' ಎನ್ನುತ್ತಿದ್ರು. ' ಅಪ್ಪಾ ಮಹಾನಿಯರೇ, ನನಗೆ ಹೊಳೆಯುವ ನೀರು ಬೇಡ. ಸಾದಾ ನೀರು ಕೊಡಿ' ಎಂದೆ ಪುಟ್ಟ ಬಾಟಲು ತರಿಸಿದರು. ಸ್ಟಿಲ್ ವಾಟರ್ ಹೊಸ ಪದಪುಂಜವನ್ನು ಕಲಿತೆ. ಅದನ್ನು ಕುಡಿದು ನೋಡಿದರೆ, ಅದರಲ್ಲೂ ಅಲ್ಪ ಮಟ್ಟದ ಸೋಡಾ, ಕಡೆಗೂ ದುಡ್ಡು ಕೊಟ್ಟರೂ, ಸೀದಾಸಾದಾ ನೀರು ಸಿಗುವುದು ಅಪರೂಪವಿತ್ತು. ಏಕೆ ಹೀಗೆ? ಉತ್ತರ ಹೊಳೆಯುವುದೇನೂ ಕಷ್ಟವಲ್ಲ. ಪುಕ್ಕಟ್ಟೆಯಾಗಿ ಏನನ್ನೂ ಕೊಡದಿದ್ದರೆ, ನೀವು ಕೊಳ್ಳುತ್ತೀರಿ. ಕೊಳ್ಳುತ್ತಿರುವುದು ಸೀದಾಸಾದಾ ಅಲ್ಲ ಎಂದು ನಂಬಿಸಿದರೆ, ಮತ್ತಷ್ಟು ಕೊಳ್ಳುತ್ತೀರಿ. 'ಕೊಳ್ಳುತ್ತಿರುವುದು ಅದ್ಭುತವಾದದ್ದು' ಎಂದರೆ ಇನ್ನಷ್ಟು ಕೊಳ್ಳುತ್ತೀರಿ. ಕೊಳ್ಳುಬಾಕ ಸಂಸ್ಕೃತಿಯ ತಳಹದಿಯೇ ಇಲ್ಲಿದೆ. ನೀರು ನಿಮಗೆ ಧಾರಾಳವಾಗಿ ಎಲ್ಲೆಡೆ ಪುಕಟ್ಟೆಯಾಗಿ ದೊರತರೆ, ಕೋಲಾ ಕಂಪನಿಗಳ ಜಾಹೀರಾತಿಗೆ ಮಣಿಯುವುದು ಹೇಗೆ? ಇದು ಒಂದು ಬಗೆಯ ಸೂಕ್ಷ್ಮ ರೀತಿಯ 'ಸೈಕಾಲಜಿಕಲ್ ವಾರ್ ಫೇರ್'. ಅಮೆರಿಕದ ಉದ್ದಗಲವನ್ನು ವಾರಗಟ್ಟಲೆ ಅಲೆವಾಗ, ಎಲ್ಲೆಡೆಯಲ್ಲಿ ಗಮನಿಸಿದ್ದೆ, ದೊಡ್ಡಗಾತ್ರದ ಕೋಲಾ ಬಾಟಲಿಗಳಿಗೆ ೦.೯೯ ಡಾಲರ್ ಬೆಲೆ, ಅದೇ ಸಣ್ಣಗಾತ್ರದ ನೀರಿನ ಬಾಟಲಿಗೂ ಅದಕ್ಕಿಂತ ಹೆಚ್ಚಿನ ಹಣ! ಕೊಳ್ಳುವ ಗ್ರಾಹಕನ ಮನಸಿನಲ್ಲಿ 'ನೀರಿಗೇಕೆ ಅಷ್ಟು ಹಣ? ಅದಕ್ಕಿಂತ ಅಗ್ಗವಾಗಿ ಕೋಲಾ ಸಿಗುತ್ತದೆಯಲ್ಲ?, ಎಂಬ ತರ್ಕ ಹೊಳೆದು ಕೋಲಾ ಅಭ್ಯಾಸ ಮಾಡಿಕೊಳ್ಳುತ್ತಾನೆ. ಅಲ್ಲಿಗೆ ನೀರು ಕುಡಿಯುವ ಅಭ್ಯಾಸ ತಪ್ಪುತ್ತದೆ.

ವಿದೇಶಗಳಲ್ಲಿ ಮನೆಯ ನಲ್ಲಿಯಲ್ಲಿ ಬರುವ ನೀರನ್ನು ಯಾರೂ ಕುಡಿಯುವುದಿಲ್ಲ. ಅದನ್ನು ಕುಡಿದರೇನು ಪ್ರಾಣ ಹೋಗುವುದಿಲ್ಲ. ಆದರೆ ' ಅದು ಶುದ್ಧವಲ್ಲ, ಶುದ್ಧ ನೀರನ್ನು ಬಾಟಲಿಯಲ್ಲಿ ಕೊಂಡು ಮಾತ್ರ ತರಬಹುದು' ಎಂದು ಇಡೀ ದೇಶದ ತಲೆ ತೊಳೆದಿರುವಾಗ, ಪ್ರತಿಯೊಬ್ಬರೂ

NOT TO BE REPUBLISHED ©KTBS

ನೀರನ್ನು ಕೊಂಡು ಕುಡಿಯುತ್ತಾರೆ. ಇಂತಹುದೇ ಹುನ್ನಾರ ಭಾರತದಲ್ಲಿ ಅದಾಗಲೇ ಆರಂಭವಾಗಿದೆ. ಕೀಟನಾಶಕವಿರುವ ನೀರನ್ನೂ ಶುದ್ಧವೆಂದು ಮಾರಿ ಉದ್ಧಾರವಾದ ಕಂಪನಿಗಳು! ಕೊಳ್ಳುಬಾಕ ಸಂಸ್ಕೃತಿಯ ಪರಾಕಾಷ್ಠೆಯಾಗಿ ನನಗೆ 'ನೀರು ಕೊಡದ ನಾಡುಗಳು' ಕಾಣುತ್ತವೆ. ಇಂತಹುದೇ ಮರಳುತನಕ್ಕೆ ಅದಾಗಲೇ ಭಾರತೀಯರು ಬಲಿಯಾಗಿದ್ದಾರೆ. ನಮ್ಮ ಎಳನೀರು, ಮಜ್ಜಿಗೆ, ಪಾನಕ, ಕಬ್ಬಿನ ಹಾಲು, ತಾಜಾ ಹಣ್ಣಿನ ರಸ ಎಲ್ಲವನ್ನು ತೊರೆದು ಕೋಲಾಗಳಿಗೆ ಮುಗಿಬೀಳುತ್ತಿರುವ ಜನರ ಸಂಖ್ಯೆ ಏರುತಿದೆ. ವೈಯಕ್ತಿಕ ವಿದೇಶ ಪ್ರವಾಸಗಳಲ್ಲಿ ನನಗೆ ಇಷ್ಟು ಕಷ್ಟವಾಗಿದ್ದಿಲ್ಲ. ತಿಂಗಳುಗಟ್ಟಲೆ ಅಲೆದರೂ ನಾವಿಳಿದುಕೊಳ್ಳುತ್ತಿದ್ದ ಅಗ್ಗದ ಹೋಟೇಲಿನಿಂದ ಬೆಳಗ್ಗೆ ಹೊರಡುವಾಗಲೇ ಬಾಟಲಿಯಲ್ಲಿ ನಲ್ಲಿ ನೀರನ್ನು ತುಂಬಿಸಿಕೊಂಡು ಹೊರಡುತ್ತಿದ್ದೆವು. ನಮ್ಮ ಭಾರತೀಯ 'ನಿರೋಧಕ ಶಕ್ತಿಯ' ಎದುರು ಯಾವ ನೀರಾದರೂ ಅಡ್ಡಿ ಇರಲಿಲ್ಲ. ಆದರೆ ಕೆಲಸದ ಮೇಲೆ ಬಂದ ಈ ಪ್ರವಾಸದಲ್ಲಿ ಮಣಮಣ ಫೈಲುಗಳನ್ನು ಹೊತ್ತು, ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ಅಲೆಯುವಾಗ ನೀರಿನ ಬಾಟಲಿ ಹಿಡಿದು ಹೋಗುವುದು ಅಸಾಧ್ಯವಾಗಿತ್ತು.

ಕೊಳ್ಳುಬಾಕತನ, ಲಾಭಕೋರತನದ ರೋಗಗಳು ಸಾಂಕ್ರಾಮಿಕವಾಗಿ ಎಲ್ಲ ನೆಲದಲ್ಲೂ ಹರಡಿ, ಭಾರತಕ್ಕೂ ಲಗ್ಗೆ ಇಟ್ಟಿವೆ ಎಂದು ತೀರಾ ಇತ್ತೀಚಿನ ದಿನಗಳಲ್ಲಿ ಗಾಢವಾಗಿ ನಮ್ಮೆಲ್ಲರಿಗೂ ಅನುಭವವಾಗಿದೆ. 'ಸಂಸ್ಕೃತಿಯ ಮೇಲೆ ದಾಳಿ' ಎನ್ನುವಾಗ ನನಗೆ 'ಮದರ್ಸ್‌ಡೇ,' 'ಫಾದರ್ಸ್ ಡೇ', 'ವ್ಯಾಲೆಂಟೈನ್ ಡೇ' ಆಚರಿಸುವುದು ಅಷ್ಟು ದೊಡ್ಡ ಅನಾಹುತವಾಗಿ ಕಾಣುವುದಿಲ್ಲ. ಈ ಹೊಸ ಹೊಸ ದಿನಗಳೆಲ್ಲ ಉಕ್ಕಿದ ಪ್ರೀತಿಯ ದ್ಯೋತಕವಲ್ಲ. 'ಗಿಫ್ಟ್', 'ಗ್ರೀಟಿಂಗ್ ಕಾರ್ಡ್' ಮಾರುವ ಹೊಸ ಹುನ್ನಾರಗಳೆಂದು ಸರ್ವರಿಗೂ ವೇದ್ಯವಾಗಿದೆ. ಆದರೆ ನನಗೆ ಗಾಬರಿ ಹುಟ್ಟಿಸುವುದು ನಮ್ಮ ಭಾರತೀಯ ಸಂಸ್ಕೃತಿಯ ಬುನಾದಿಯನ್ನು ಜೀವನಶೈಲಿಯನ್ನು, ನಂಬಿಕೆಗಳನ್ನು, ಮೌಲ್ಯಗಳನ್ನು, ಸಂಸ್ಕೃತಿಯ ಬುನಾದಿಯನ್ನು ಅಲುಗಿಸುವ 'ಕೊಳ್ಳುಬಾಕತನ'. ಅಗತ್ಯಗಳಲ್ಲಿ ನಡೆದು ಹೋಗುತ್ತಿದ್ದ ಬದುಕು, ಇಂದು 'ಬೇಕು'ಗಳ ಬಲೆಗೆ ಬಿದ್ದಿದೆ. ಸರಕಾರಿ ಕಾಲೇಜಿನ ಪ್ರೊಫೆಸರ್ ಮತ್ತು ಪ್ರಾಂಶುಪಾಲರಾದ ನಮ್ಮ ತಂದೆಗೆ ಕಾಲೇಜಿಗೆ ಸೈಕಲಿನಲ್ಲಿ ಹೋಗುವುದು ಅಪಮಾನಕರವಾಗಿ ಕಂಡಿರಲೇ ಇಲ್ಲ. ಕೊಂಡ ಒಂದು ವಸ್ತುವನ್ನು ಬದುಕಿಡೀ ಬಳಸುವ ಪರಿಪಾಠವಿತ್ತು. ಇಂದು ಶಾಲೆಯಲ್ಲಿಯೇ ಬೈಕು ಬೇಕು ಎನ್ನುವ ಮಗ. ಇಂತಹುದೇ ಬ್ರಾಂಡಿನ ಶೂ ಬೇಕು ಎನ್ನುವ ಮಕ್ಕಳು. ಮಾರುತಿ ಕಾರಿದ್ದರೆ, ಸ್ಯಾಂತ್ರೋ ಬೇಕು ಎಂದು ಓಡುವ ಹಿರಿಯರು. ಮಾರುಕಟ್ಟೆಗೆ ಬಂದದ್ದೆಲ್ಲವು ಬೇಕು. ಬೇಕುಗಳನ್ನು 'ಅಗತ್ಯ'ಗಳಾಗಿ, ಹಾಗೂ 'ಅತ್ಯಗತ್ಯ'ಗಳಾಗಿ ಬಲು ಜಾಣತನದಿಂದ ಬದಲಿಸುವ ಜಾಹೀರಾತುಗಳು ಮತ್ತೆ ಮತ್ತೆ ಬಿತ್ತರಿಸುತ್ತವೆ. ಆರಾಮ, ಐಷಾರಾಮದ, ಅಪ್ಪಟ ಅನಗತ್ಯದ ವಸ್ತುಗಳನ್ನು 'ಇವಿಲ್ಲದೆ ಬದುಕಿಲ್ಲ' ಎಂಬಂತೆ ಬಿಂಬಿಸುತ್ತಾರೆ. 'ಡಿಓಡರೆಂಟ್' ಹಾಕಿಕೊಳ್ಳದೆ ಇದ್ದರೆ ' ತಾನು ನಾತ ಬಡಿಯುತ್ತೇನೆ' ಎಂಬಷ್ಟು ಕೀಳರಿಮೆಯನ್ನು ಹುಟ್ಟಿಸಬಲ್ಲರು. ಕೊನೆಗೆ ಎಲ್ಲವೂ ನಿಮ್ಮನ್ನು ಕೊಳ್ಳುವಂತೆ ಪ್ರೇರೇಪಿಸುತ್ತವೆ.

NOT TO BE REPUBLISHED @KTBS



ಕೆಲವು ವರ್ಷಗಳ ಹಿಂದೆ ದಿನಪತ್ರಿಕೆಯಲ್ಲಿ ಓದಿದ್ದೆ. ಜನಪ್ರಿಯ ಹೋಟೆಲಿನ ಮಾಲೀಕರೊಬ್ಬರು ಬರೆದಿದ್ದರು. ತಂಪು ಪಾನೀಯದ ಕಂಪನಿಯೊಂದು ಆತನನ್ನು ಸಂಪರ್ಕಿಸಿ 'ನೀವು ಗ್ರಾಹಕರಿಗೆ ಬಂದೊಡನೆ ನೀರು ಕೊಡುವುದನ್ನು ನಿಲ್ಲಿಸಿದರೆ, ಇಷ್ಟು ಹಣ ಕೊಡುವುದಾಗಿ' ಹೇಳಿತ್ತಂತೆ! ಈಗಾಗಲೇ ಬೆಂಗಳೂರಿನಲ್ಲೂ ನನಗೆ 'ನೀರು ಕೊಡದ ಸಂಸ್ಕೃತಿ'ಯ ಅನುಭವವಾಗಿದೆ. ಮಹಾತ್ಮಗಾಂಧಿ ರಸ್ತೆಯ 'ಬಾಂಬೆ ಬಜಾರ್' ಎದುರಿನ ಪುಟ್ಟ ಜಾಯಿಂಟ್‌ನಲ್ಲಿ ನಾನು ಮತ್ತು ಮಗಳು ಕುಳಿತಿದ್ದೆವು. ಇಲ್ಲಿ ನೀರು ತಂದಿಡಲಿಲ್ಲ. ಐಸ್‌ಕ್ರೀಂ ತಿಂದ ನಾವು 'ನೀರು ಬೇಕು' ಎಂದು ಕೇಳಿದೆವು. 'ಮಿನರಲ್ ವಾಟರ್?' ವೇಟರ್ ಪ್ರಶ್ನಿಸಿದ 'ಇಲ್ಲಪ್ಪ ಸಾಮಾನ್ಯ ನೀರು' ಎಂದೆ. ಮಾಯವಾದ ವೇಟರ್ ಹದಿನೈದು ನಿಮಿಷ ಕಾದರೂ ಬರಲೇ ಇಲ್ಲ. ಕಾದು ಕಾದು ಸುಸ್ತಾಗಿ ಕೊನೆಗೆ ಕೌಂಟರಿಗೇ ಹೋಗಿ, ಬಿಲ್ಲು ಕೊಟ್ಟು ಹೊರಬಿದ್ದೆವು. ಅದೇ ವೇಟರ್, ಪುಟ್ಟ ಪುಟ್ಟ ಬಾಟಲಿಗಳಲ್ಲಿ ಮಿನರಲ್ ವಾಟರುಗಳನ್ನು ಬೇರೆ ಬೇರೆ ಮೇಜಿಗೆ ಸರಬರಾಜು ಮಾಡುವುದು ಕಂಡಿತು. 'ಮಿನರಲ್ ವಾಟರ್?' ಎಂದ ಅವರು ಕೇಳುವ ಭಂಗಿ ಭಾವ ಹೇಗಿರುತ್ತದೆ ಎಂದರೆ ನಿಮಗೆ 'ಆರ್ಡಿನರಿ ವಾಟರ್' ಎಂದು ಹೇಳಲೂ ಹಿಂಜರಿಕೆಯಾಗಬೇಕು.

ಆದರೆ ನಿಜಕ್ಕೂ ಆಘಾತವಾದದ್ದು, ತೀರಾ ಇತ್ತೀಚೆಗೆ ಮಾಲತಿಯೊಡನೆ ಇಂದಿರಾನಗರದ ಮುಖ್ಯ ರಸ್ತೆಯ ಪುಟ್ಟ ಜಾಯಿಂಟ್‌ಗೆ ಹೊಸ ಬಗೆಯ ಐಸ್‌ಕ್ರೀಂ ತಿನ್ನುವ ಬಯಕೆಯಲ್ಲಿ ಹೊಕ್ಕಾಗ. 'ಮಿಸಿಸಿಪಿ ಮಡ್ ಪೀ' ಎಂದು ಎಲ್ಲೋ ಪತ್ರಿಕೆಯಲ್ಲಿ ಓದಿದ್ದ ಮಾಲತಿ, ಆರ್ಡರ್ ಮಾಡಿದರು. ದೊಡ್ಡ ಬಿಳಿ ಪಿಂಗಾಣಿ ತಟ್ಟೆಯಲ್ಲಿ ಕೇಕ್ ಮತ್ತು ಐಸ್‌ಕ್ರೀಂ ಇರಿಸಿ, ಮೇಲೆ ಕೋಕೋ ಪುಡಿ ಉದುರಿಸಿ ಆಕರ್ಷಕವಾಗಿ ತಂದಿಟ್ಟರು. ಬೆಲೆ ನೂರು ರೂಪಾಯಿ ಎಂದಾಗ ಹೌಹಾರಿದ್ದುಂಟು! ಇಲ್ಲೂ ನೀರು ಕೊಟ್ಟಿರಲಿಲ್ಲ. 'ನೀರು ಕೊಡಿ' ಎಂದೆ, 'ಮಿನಿರಲ್ ವಾಟರ್?' ಎಂದಳು ಸರ್ವ್ ಮಾಡುತ್ತಿದ್ದ ಹುಡುಗಿ. 'ಇಲ್ಲ ಸಾಧಾರಣ ನೀರು' ಎಂದರೆ, ನಮ್ಮಲ್ಲಿ ಸಾಧಾರಣ ನೀರು

©KTBS NOT TO BE REPUBLISHED

ಇಲ್ಲ ಎಂದು ಬಿಡುವುದೆ! ನೂರು ರೂಪಾಯಿ ಐಸ್‌ಕ್ರೀಂ ತಿಂದರೂ ಪುಕ್ಕಟ್ಟೆಯಾಗಿ ಒಂದು ಲೋಟ ನೀರು ಕೊಡದ ಜಾಯಿಂಟ್‌ಗಳಿವು. ಮತ್ತೆ ಹತ್ತೊ–ಇಪ್ಪತ್ತೋ ಪಡೆದು ಮಿನರಲ್ ವಾಟರ್ ಮಾರುವ ಹುನ್ನಾರ. ನನಗೆ ರೇಗಿಹೋಯಿತು. ಅಲ್ಲಿ ನೀರು ಕೊಡಲಿಲ್ಲ. ಹೊರಬಂದು 'ಬನ್ನಿ ಮಾಲತಿ ಸಾಗರ್‌ಗೆ, ಪಾನಿಪುರಿ ತಿನ್ನೋಣ' ಎಂದೆ. ಎದುರಿಗೊಂದು 'ಸಾಗರ್' ಹೋಟೆಲಿತ್ತು. ನುಗ್ಗಿದೆವು. ಕುಳಿತೊಡನೆ ವೇಟರ್ ಬಂದು ನಾಲ್ಕು ಲೋಟ ನೀರು ತಂದಿಟ್ಟ. ಬರೀ ಬಾಯಲ್ಲ ಮನಸ್ಸೂ ತಂಪಾಯಿತು.

ಹೇಳಿ, ಕಾಯ್ದುಕೊಳ್ಳಬಲ್ಲವೇ ಮಾನವೀಯ ಮೌಲ್ಯಗಳನ್ನು, ಕೊಳ್ಳುಬಾಕತನದ ಕಪಿಮುಷ್ಠಿಯಿಂದ ಬಿಡಿಸಿಕೊಳ್ಳಬಲ್ಲವೇ? ಬಾಯಾರಿದವರಿಗೆ ನೀರು ಕೊಡಬಲ್ಲವೆ? ಹಸಿದವರಿಗೆ ಅನ್ನ ಕೊಡಬಲ್ಲವೆ? ಇನ್ನೊಬ್ಬರ ನೀರು–ಅನ್ನವನ್ನು ಕಸಿದುಕೊಳ್ಳದೆ ಬದುಕಬಲ್ಲವೆ? ನಮ್ಮ ಸಂಸ್ಕೃತಿಯನ್ನು ಕಾಯ್ದುಕೊಳ್ಳುವ ಅಸ್ತ್ರ, ನಮ್ಮ ಕೈಯಲ್ಲೇ ಇದೆಯಲ್ಲವೇ? 'ಮತ್ತೆಂದೂ ನೀರು ಕೊಡದ ಆ ಜಾಯಿಂಟ್‌ಗೆ ಹೋಗುವುದಿಲ್ಲ. ನನ್ನಿಂದಂತೂ ಇಂತಹ ಜಾಯಿಂಟ್‌ಗಳು ಉದ್ಧಾರವಾಗುವುದು ಬೇಡ' ಎಂದುಕೊಂಡಿದ್ದೇನೆ.

## ಕೃತಿಕಾರರ ಪರಿಚಯ



**ಶ್ರೀಮತಿ ನೇಮಿಚಂದ್ರ** ಅವರು **ಚಿತ್ರದುರ್ಗದಲ್ಲಿ ಜುಲೈ ೧೬, ೧೯೫೯** ರಂದು ಜನಿಸಿದರು. ತಂದೆ ಪ್ರೊ. ಜಿ. ಗುಂಡಣ್ಣ, ತಾಯಿ ತಿಮ್ಮಕ್ಕ. ಪ್ರಾರಂಭಿಕ ಶಿಕ್ಷಣ ತುಮಕೂರು, ಮೈಸೂರಿನಲ್ಲಿ ಪೂರೈಸಿದರು. ಮೈಸೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಎಂಜನಿಯರಿಂಗ್‌ನಿಂದ ಬಿ.ಎಸ್.ಸಿ. ಪದವಿಯನ್ನು ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಿಂದ ಎಂ.ಎಸ್. ಪದವಿಯನ್ನು ಗಳಿಸಿದರು. ಬೆಂಗಳೂರಿನ ಎಚ್.ಎ.ಎಲ್. ಸಂಸ್ಥೆಯಲ್ಲಿ ಉನ್ನತ ತಂತ್ರಜ್ಞ ಅಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಕನ್ನಡದಲ್ಲಿ ಚಿಂತನ ಪೂರ್ಣ ಲೇಖನ, ಪುಸ್ತಕಗಳನ್ನು ಬರೆಯುತ್ತಿದ್ದಾರೆ. ಇವರ ಪ್ರಮುಖ ಕೃತಿಗಳೆಂದರೆ **ಯಾದ್ ವಶೇಮ್ – ಕಾದಂಬರಿ, ನಮ್ಮ ಕನಸುಗಳಲ್ಲಿ ನೀವಿದ್ದೀರಿ, ಮತ್ತೆ ಬರೆದ ಕಥೆಗಳು, ನೇಮಿಚಂದ್ರರ ಕಥೆಗಳು** ಮುಂತಾದ ಕಥಾಸಂಕಲನಗಳು. **ಒಂದು ಕನಸಿನ ಪಯಣ, ಪೆರುವಿನ ಪವಿತ್ರ ಕಣಿವೆಯಲ್ಲಿ – ಪ್ರವಾಸ ಕಥನಗಳು. ಬದುಕು ಬದಲಿಸಬಹುದು ಅಂಕಣ ಬರಹಗಳು** ಮೊದಲಾದವುಗಳು. **ಪೆರುವಿನ ಪವಿತ್ರ ಕಣಿವೆಯಲ್ಲಿ ಕೃತಿಗೆ ಕರ್ನಾಟಕ ಸಾಹಿತ್ಯ ಪ್ರಶಸ್ತಿ. ನೃಪತುಂಗ ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿಗಳು** ಸಂದಿವೆ.

ಪ್ರಸ್ತುತ **'ನೀರು ಕೊಡದ ನಾಡಿನಲ್ಲಿ'** ಅಂಕಣ ಬರೆಹವನ್ನು ಶ್ರೀಮತಿ ನೇಮಿಚಂದ್ರ ಅವರ **'ಬದುಕು ಬದಲಿಸಬಹುದು'** ಕೃತಿಯಿಂದ ಆಯ್ದು ಸಂಪಾದಿಸಿ ನಿಗದಿಪಡಿಸಿದೆ.

©KTBS NOT TO BE REPUBLISHED

## ಆಶಯ

ವಿಶ್ವದ ಜಾಗತೀಕರಣದ ಹೊಡೆತಕ್ಕೆ ಸಿಲುಕಿದ ನಮ್ಮ ನಗರಗಳಿಂದು ಕೊಳ್ಳುಬಾಕತನವನ್ನು, ಲಾಭಕೋರತನವನ್ನು ಹುಟ್ಟುಹಾಕಿ ವಿಶ್ವದ ಮಾರುಕಟ್ಟೆಯಾಗಲು ಹೊರಟಿರುವುದು ಬಲು ಅಪಾಯಕಾರಿ ಎಂಬ ವೈಚಾರಿಕ ಚಿಂತನೆಯನ್ನು ಹಾಗೂ ನಮ್ಮ ಸಂಸ್ಕೃತಿಯ ಹಿರಿಮೆಯನ್ನು ಕಾಪಾಡಿಕೊಳ್ಳುವ ಅನಿವಾರ್ಯತೆಯನ್ನು "ನೀರು ಕೊಡದ ನಾಡಿನಲ್ಲಿ" ಈ ಗದ್ಯಭಾಗದಲ್ಲಿ ಅತ್ಯುತ್ತಮವಾಗಿ ಚಿತ್ರಿಸಿದೆ.

## ಪದಗಳ ಅರ್ಥ

ಅಗ್ಗ–ಕಡಿಮೆ ಬೆಲೆ; ಅಲೆ–ಸುತ್ತಾಡು; ಅಸ್ತ್ರ–ಆಯುಧ; ಜನಪ್ರಿಯ–ಪ್ರಸಿದ್ಧ, ಖ್ಯಾತಿಪಡೆದ; ಪರಾಕಾಷ್ಠೆ–ಕೊನೆಯ ಗಡಿ; ಪುಕ್ಕಟ್ಟೆ–ಉಚಿತ ; ಬುನಾದಿ–ತಳಹದಿ ; ಭಂಗಿ – ವ್ಯಂಗ್ಯ, ಕುಟಿಲತೆ; ಮಣ–ಹೆಚ್ಚು ತೂಕವಾದ; ಮರುಳು–ಹುಚ್ಚುತನ; ಮಾಲೀಕ–ಯಜಮಾನ; ಹರಡು–ಪಸರಿಸು, ಕೆದರು; ಹಿಂಜರಿಕೆ–ಹಿಂದೆ ಸರಿ, ಕೀಳರಿಮೆ; ಹುನ್ನಾರ–ಸಂಚು; ಹೊಕ್ಕು–ಒಳಗೆ ಹೋಗು.

## ಅಭ್ಯಾಸ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಎಲ್ಲೆಲ್ಲಿ ನೀರು ಕೊಡುವ ಸಂಪ್ರದಾಯವಿಲ್ಲ?

೨. ಮನೆಗೆ ಬಂದವರನ್ನು ಹೇಗೆ ಸತ್ಕರಿಸುವ ಸಂಪ್ರದಾಯ ನಮ್ಮಲ್ಲಿದೆ?

೩. ವಿದೇಶಗಳಲ್ಲಿ ನೀರಿಗಿಂತ ಅಗ್ಗವಾಗಿ ಸಿಗುವುದೇನು?

೪. ಭಾರತದಲ್ಲಿ ಇತ್ತೀಚೆಗೆ ಯಾವ ಹುನ್ನಾರ ನಡೆದಿದೆ?

೫. ಸರ್ವರಿಗೂ ವೇದ್ಯವಾಗಿರುವ ಅಂಶಗಳಾವುವು?

೬. ಲೇಖಕಿಗೆ ಹೋಟೆಲ್‌ನಲ್ಲಿ ನಾಲ್ಕು ಲೋಟ ನೀರು ತಂದಿಟ್ಟಾಗ ಆದ ಅನುಭವವೇನು?

**ಆ . ಕೊಟ್ಟಿರುವ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.**

೧. ವಿದೇಶಗಳಲ್ಲಿ ಬಾಯಾರಿಕೆಗೆ ಧಾರಾಳವಾಗಿ ಏನೇನು ದೊರೆಯುವವು?

೨. ಗುರುದ್ವಾರಗಳ ಬಳಿ ಸ್ವಯಂ ಸೇವಕರು ಏನು ಮಾಡುತ್ತಿದ್ದರು?

೩. ಕೋಲಾಗಳ ಆಸೆಯಿಂದ ನಾವು ಏನೆಲ್ಲವನ್ನು ತೊರೆಯುತ್ತಿದ್ದೇವೆ?

೪. ನಾಗರೀಕತೆಯ ದೊಡ್ಡ ಅನಾಹುತಗಳಾಗಿ ಕಾಣಿಸಿಕೊಳ್ಳುತ್ತಿರುವ ಆಚರಣೆಗಳಾವುವು?

೫. ಜನಪ್ರಿಯ ಹೋಟಲಿನ ಮಾಲೀಕನಿಗೆ ತಂಪುಪಾನೀಯ ಕಂಪನಿ ಹೇಳಿದ್ದೇನು?

© KTBS NOT TO BE REPUBLISHED

**ಇ. ಕೊಟ್ಟಿರುವ ಪ್ರಶ್ನೆಗಳಿಗೆ ಐದು-ಆರು ವಾಕ್ಯಗಳಲ್ಲಿ ಉತ್ತರಿಸಿ.**

೧. ದುಡ್ಡಿಲ್ಲದೇ ಕುಡಿಯಬಲ್ಲ ನೀರು ಸಿಗುತ್ತಿದ್ದ ಕಾಲದ ಬಗ್ಗೆ ಲೇಖಕರ ಅಭಿಪ್ರಾಯವೇನು?

೨. ಕಂಪನಿಗಳು ಅಪ್ಪಟ ಅಗತ್ಯದ ವಸ್ತುಗಳನ್ನು 'ಇವಿಲ್ಲದೆ ಬದುಕಿಲ್ಲ' ಎಂಬಂತೆ ಹೇಗೆ ಬಿಂಬಿಸುತ್ತಿವೆ?

೩. ಲೇಖಕಿಗೆ ಬೆಂಗಳೂರಿನಲ್ಲಿ 'ನೀರು ಕೊಡದ ಸಂಸ್ಕೃತಿಯ' ಬಗ್ಗೆ ಆದ ಅನುಭವವನ್ನು ಬರೆಯಿರಿ.

**ಈ. ಖಾಲಿಬಿಟ್ಟ ಜಾಗಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿರಿ.**

೧. ಭಾರತದಿಂದ ಹೊರಗೆ ಕಾಲಿಟ್ಟರೆ ಉಳಿದೆಲ್ಲವು ___________

೨. ಈ ದೇಶಗಳಲ್ಲಿ ಮನೆಯ _________ ಯಲ್ಲಿ ಬರುವ ನೀರನ್ನು ಕುಡಿಯುವುದಿಲ್ಲ.

೩. ಗ್ರೀಟಿಂಗ್ಸ್ ಕಾರ್ಡ್ ಮಾರುವ ಹೊಸ__________ ಗಳೆಂದು ಸರ್ವರಿಗೂ ವೇದ್ಯವಾಗಿದೆ.

೪. ಸ್ಯಾಂಡ್ವಿಚ್ ಬರ್ಗರ್ ಜೊತೆಗೆ ದೊಡ್ಡ ಗಾತ್ರದ ____________ ನೀಡುತ್ತಾರೆ.

## ಸೈದ್ಧಾಂತಿಕ ಭಾಷಾಭ್ಯಾಸ

© KTBS NOT TO BE REPUBLISHED

**ಪದಗಳು**

ಯಾವುದೇ ಭಾಷೆಯಾಗಲಿ ಅದು ತನ್ನ ಸುತ್ತಮುತ್ತಣ ಭಾಷೆಗಳ ಸಂಪರ್ಕದಿಂದಾಗಿ ಬೇರೆ ಭಾಷೆಗಳ ಪದಗಳನ್ನು ತನ್ನ ತೆಕ್ಕೆಗೆ ಸೇರಿಸಿಕೊಂಡು ಬೆಳೆಯುತ್ತದೆ. ಇದು ಭಾಷಿಕ ಸಹಜ ಕ್ರಿಯೆ.

**ಮೋಟಾರುಗಳಲ್ಲಿ ಜಬರ್ದಸ್ತಿನಿಂದ ಓಡಾಡುವುದೇ ಜೀವನದ ಮುಖ್ಯ ಗುರಿಯಲ್ಲವೆಂದು ನಾವು ತಿಳಿಯಬೇಕು.**

ಈ ವಾಕ್ಯ ಕನ್ನಡ ಭಾಷೆಯ ವಾಕ್ಯವಾದರೂ ಇಲ್ಲಿರುವ ಎಲ್ಲಾ ಪದಗಳು ಕನ್ನಡದವುಗಳಲ್ಲ. **ಮೋಟಾರು** ಪದ ಆಂಗ್ಲ ಭಾಷೆಯಿಂದಲೂ **ಜಬರ್ದಸ್ತ್** ಪದ ಹಿಂದಿ ಭಾಷೆಯಿಂದಲೂ **ಜೀವನ, ಮುಖ್ಯ** ಪದಗಳು **ಸಂಸ್ಕೃತ**ದಿಂದಲೂ ಬಂದ ಪದಗಳಾಗಿದ್ದು ಉಳಿದವು ಕನ್ನಡ ಪದಗಳು. ಹೀಗಾಗಿ ಕನ್ನಡ ಭಾಷೆಯಲ್ಲಿ ಕನ್ನಡದ ಪದಗಳಲ್ಲದೆ ಬೇರೆ ಭಾಷೆಗಳಿಂದ ಬಂದ ಪದಗಳೂ ಇವೆ.

**ದೇಶ್ಯ ಪದ: ಆಯಾ ಭಾಷೆಯ ಮೂಲ** (ಸ್ವಂತ) ಪದಗಳೇ **ದೇಶ್ಯ ಪದಗಳು.**

**ಸಂಖ್ಯಾಪದಗಳು** (ಒಂದರಿಂದ ಒಂಬೈನೂರ ತೊಂಬತ್ತೊಂಬತ್ತರವರೆಗೆ), **ದೇಹದ ಅಂಗಗಳ ಹೆಸರು**(ಕೈ, ಕಾಲು, ಬಾಯಿ ಇತ್ಯಾದಿ), **ವಿಭಕ್ತಿ ಪ್ರತ್ಯಯಗಳು, ಬಂಧುವಾಚಕ ಪದಗಳು** (ಅಜ್ಜ, ಅಜ್ಜಿ, ಅಪ್ಪ, ಅಮ್ಮ, ಚಿಕ್ಕಪ್ಪ, ಅಣ್ಣ ಇತ್ಯಾದಿ), ಮುಂತಾದ ನಿರ್ದಿಷ್ಟ ಪದಗಳು, ಪ್ರತಿಯೊಂದು ಭಾಷೆಯಲ್ಲೂ ಆಯಾ ಭಾಷೆಗಳ ಸ್ವಂತ ಪದಗಳಾಗಿರುತ್ತವೆ.

**ಅನ್ಯದೇಶ್ಯ ಪದ : ಬೇರೆ ಭಾಷೆಯಿಂದ ಬಂದಿರುವ ಪದಗಳೇ ಅನ್ಯದೇಶ್ಯ ಪದಗಳು.**

ಕನ್ನಡದಲ್ಲಿ ಬಳಕೆಯಾಗುತ್ತಿರುವ **ಅರ್ಜಿ, ಕಚೇರಿ, ಕಾರ್ಖಾನೆ,** ಮುಂತಾದವು **ಹಿಂದುಸ್ತಾನೀ ಭಾಷೆಯ** ಪದಗಳು.

**ಕೋರ್ಟು, ಬ್ಯಾಂಕು, ಹಾರ್ಮೋನಿಯಂ, ಹೋಟೆಲು** ಮುಂತಾದವು **ಆಂಗ್ಲಭಾಷೆಯಿಂದ ಬಂದ** ಪದಗಳು.

**ಅಲಮಾರು, ಸಾಬೂನು, ಮೇಜು** ಮುಂತಾದವು **ಪೋರ್ಚುಗೀಸ್ ಭಾಷೆಯಿಂದ ಬಂದ** ಪದಗಳು. ಹೀಗೆ ಕನ್ನಡ ಭಾಷೆಗೆ ಅನ್ಯಭಾಷಾ ಪದಗಳು ಬಂದಾಗ ಅವು ಕನ್ನಡದ ಜಾಯಮಾನಕ್ಕೆ ತಕ್ಕಂತೆ ಬದಲಾವಣೆಗೊಂಡು ಬಳಕೆಯಾಗುತ್ತವೆ.

**ಮಾಲೆ, ರಾಜ, ವಿಪತ್ತು, ದೇವತೆ** ಮುಂತಾದ ಪದಗಳು **ಸಂಸ್ಕೃತ ಭಾಷೆಯಿಂದ** ಬಂದಿವೆ. ಇವನ್ನು **ಅನ್ಯದೇಶ್ಯ** ಪದಗಳೆಂದು ಕರೆಯುವ ವಾಡಿಕೆ ಇಲ್ಲ. ಇವುಗಳನ್ನು **ತತ್ಸಮ** ಎಂದು ಕರೆಯುವರು.

**ತತ್ಸಮ– ತದ್ಭವ**

**ಸಂಸ್ಕೃತ ಮತ್ತು ಪ್ರಾಕೃತ** ಭಾಷೆಗಳಿಂದ ಕನ್ನಡಕ್ಕೆ ಪದಗಳನ್ನು ಪಡೆದುಕೊಳ್ಳುವಾಗ ಅಲ್ಪಸ್ವಲ್ಪ ಬದಲಾವಣೆಗೆ ಒಳಪಟ್ಟ ಹಾಗೂ ಬಹಳಷ್ಟು ಬದಲಾವಣೆಗೆ ಒಳಪಟ್ಟ ಪದಗಳು ಇವೆ.

**ತತ್ಸಮ: ತತ್** ಎಂದರೆ **ಅದಕ್ಕೆ, ಸಮ** ಎಂದರೆ **ಸಮಾನ** ಎಂದರ್ಥ. ಹಾಗಾಗಿ **ತತ್ಸಮ** ಎಂದರೆ ಸಂಸ್ಕೃತಕ್ಕೆ **ಸಮಾನವಾದುದು** ಎಂದರ್ಥ.

**ಸಂಸ್ಕೃತದಿಂದ ಕನ್ನಡಕ್ಕೆ ಬರುವಾಗ ಯಾವುದೇ ಬದಲಾವಣೆ ಹೊಂದದೆ ಹಾಗೆಯೇ ಬಂದು ಸೇರಿದ ಪದಗಳೂ** ಇವೆ. ಉದಾ: **ರಾಮ, ಭೀಮ, ವಸಂತ, ಸೋಮ, ಚಂದ್ರ, ಕರ್ತೃ,** ಸ್ತ್ರೀ ಇತ್ಯಾದಿ ಪದಗಳು.

**ಮಾಲೆ, ಶಾಲೆ, ಆಶೆ,** ನಿದ್ರೆ ಇತ್ಯಾದಿ 'ಆ' ಕಾರಾಂತ ಪದಗಳು 'ಎ' ಕಾರಾಂತವಾಗಿ ಬದಲಾವಣೆಗೊಂಡ ಪದಗಳೂ ಇವೆ. ಇಂತಹ ಪದಗಳನ್ನು 'ತತ್ಸಮ'ಗಳೆಂದು ಕರೆಯಲಾಗುತ್ತದೆ.

**ತದ್ಭವ:** ಸಂಸ್ಕೃತದಿಂದ ಕನ್ನಡಕ್ಕೆ ಬರುವಾಗ ಅಲ್ಪಸ್ವಲ್ಪ ಅಥವಾ ಪೂರ್ಣ ಬದಲಾವಣೆ ಹೊಂದಿರುವ ಪದಗಳೇ **ತದ್ಭವಗಳು ('ತತ್' ಎಂದರೆ 'ಅದರಿಂದ' ಅಂದರೆ 'ಸಂಸ್ಕೃತದಿಂದ', 'ಭವ' ಎಂದರೆ 'ಹುಟ್ಟಿದ' ಅಂದರೆ 'ಸಂಸ್ಕೃತದಿಂದ ಹುಟ್ಟಿದ', ಎಂದರ್ಥ.)**

©KTBS NOT TO BE REPUBLISHED

೧. **ಸಿರಿ, ಬಾವಿ, ದನಿ, ಆಸೆ** ಮುಂತಾದ ಪದಗಳು ಅಲ್ಪಸ್ವಲ್ಪ ಬದಲಾವಣೆ ಹೊಂದಿದ ಪದಗಳು.

೨. **ಬಸದಿ, ಬೇಸಗೆ, ಕೊಡಲಿ, ಬಸವ, ಬಿನ್ನಣ,** ಮುಂತಾದ ಪದಗಳು ಪೂರ್ಣ ಬದಲಾವಣೆ ಹೊಂದಿದ ಪದಗಳು.

## ಅಭ್ಯಾಸ ಚಟುವಟಿಕೆ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

೧. ದೇಶ್ಯ ಮತ್ತು ಅನ್ಯದೇಶ್ಯ ಪದಗಳನ್ನು ಪಟ್ಟಿ ಮಾಡಿ.

೨. ಕನ್ನಡದಲ್ಲಿರುವ ಯಾವುದಾದರು ಐದು ತದ್ಭವ ಪದಗಳನ್ನು ಪಟ್ಟಿ ಮಾಡಿ.

**ಆ. ಪ್ರಾಯೋಗಿಕ ಭಾಷಾಭ್ಯಾಸ**

**೧. ಕೊಟ್ಟಿರುವ ಪದಗಳಲ್ಲಿರುವ ಗುಣಿತಾಕ್ಷರಗಳನ್ನು ಪ್ರತ್ಯೇಕಿಸಿ ಬರೆಯಿರಿ.**

ಹೋಟೆಲ್ ಮಾಲೀಕ ರಸ್ತೆ ಗ್ರಾಹಕ ಗಾಂಧೀಜಿ ಇವರು ಪುಣ್ಯಾತ್ಮ

**೨. ಕೊಟ್ಟಿರುವ ಪದಗಳಲ್ಲಿರುವ ಸಜಾತೀಯ ಮತ್ತು ವಿಜಾತೀಯ ಸಂಯುಕ್ತಾಕ್ಷರಗಳನ್ನು ಆರಿಸಿ ಬರೆಯಿರಿ.**

ದಿನಪತ್ರಿಕೆ ಅಗತ್ಯ ಅಮ್ಮ ವಸ್ತು ಪುಕ್ಕಟ್ಟೆ ಹಣ್ಣಿನರಸ ನಿಲ್ದಾಣ
ಮಣ್ಣು ಸಂಪ್ರದಾಯ ಶುದ್ಧ ಅಗ್ಗ ಸಂಸ್ಕೃತಿ ಪ್ರವಾಸ
ಶಕ್ತಿ ಹುನ್ನಾರ

**೩. ಕೊಟ್ಟಿರುವ ಪದಗಳ ತದ್ಭವ ರೂಪ ಬರೆಯಿರಿ**

ವರ್ಷ ಪ್ರಾಣ ಶಕ್ತಿ ಪುಣ್ಯ

**೪. ಕೊಟ್ಟಿರುವ ಪದಗಳಲ್ಲಿರುವ ದೇಶೀಯ ಮತ್ತು ಅನ್ಯದೇಶೀಯ ಪದಗಳನ್ನು ಆರಿಸಿ ಬರೆಯಿರಿ**

ದೊಡ್ಡದು ಬಸ್ಸು ಬರ್ಗರ್ ಪಾನಕ ವಾಟರ್ ಸಣ್ಣ ಹುನ್ನಾರ

**೫. ಈ ಗದ್ಯ ಭಾಗದಲ್ಲಿ ಬಳಕೆಯಾಗಿರುವ ಆಂಗ್ಲ ಪದಗಳನ್ನು ಪಟ್ಟಿ ಮಾಡಿ.**

## ಪೂರಕ ಓದು

- ಹಾ. ಮಾ. ನಾಯಕರ ಅಂಕಣ ಬರಹಗಳನ್ನು ಓದಿರಿ.
- ನೇಮಿಚಂದ್ರ ಅವರ **ಬದುಕು ಬದಲಿಸಬಹುದು** ಕೃತಿಯನ್ನು ಓದಿರಿ.

@KTBS NOT TO BE REPUBLISHED

# ೪. ಯಶೋಧರೆ

**– ಮಾಸ್ತಿ ವೆಂಕಟೇಶ ಐಯ್ಯಂಗಾರ್**

M3B7R6

**ಪ್ರವೇಶ :** ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ನಾಟಕವು ಒಂದು. "ಕಾವ್ಯಗಳಲ್ಲಿ ನಾಟಕ ಮನೋಹರವಾದದ್ದು" ನಾಟಕದಲ್ಲಿ ಪಾತ್ರಗಳ ಅಭಿನಯ, ದೃಶ್ಯಾವಳಿಗಳು, ಸಂಭಾಷಣೆ, ಸಂಗೀತ ಮೊದಲಾದವು ನೋಡುಗರ ಮನಸ್ಸನ್ನು ಸೂರೆಗೊಳ್ಳುತ್ತವೆ. ಇತಿಹಾಸದಲ್ಲಿ ಬರುವ ಮಹಾಪುರುಷರು, ಯುಗಪ್ರವರ್ತಕರು ಮೊದಲಾದವರ ಪರಿಚಯವನ್ನು ಹಾಗೂ ಅಂದಿನ ಸಾಮಾಜಿಕ ವ್ಯವಸ್ಥೆಗಳ ಪ್ರತಿಬಿಂಬವಾಗಿ ಮೂಡಿಬಂದವುಗಳೇ ಐತಿಹಾಸಿಕ ನಾಟಕಗಳು. ಈ ನಿಟ್ಟಿನಲ್ಲಿ ಕಪಿಲವಸ್ತುವಿನ ರಾಜಕುಮಾರ 'ಸಿದ್ಧಾರ್ಥ', ಬುದ್ಧನಾಗ ಬಯಸಿ ರಾತ್ರೋರಾತ್ರಿ ಯಾರಿಗೂ ತಿಳಿಸದೆ ರಾಜ್ಯವನ್ನು ಪರಿತ್ಯಾಗ ಮಾಡಿ ಹೋಗುತ್ತಾನೆ. ಆದರೆ ಇತ್ತ ಆತನ ಮಡದಿ 'ಯಶೋಧರೆ' ಅನುಭವಿಸುತ್ತಿದ್ದ ಭಯ, ಆತಂಕ ಹಾಗೂ ಮಾನಸಿಕ ತುಮುಲಗಳನ್ನು ಈ ನಾಟಕದಲ್ಲಿ ಪ್ರೇಕ್ಷಕರ ಮನಮುಟ್ಟುವಂತೆ ಮನೋಜ್ಞವಾಗಿ ಚಿತ್ರಿಸಲಾಗಿದೆ.

©KTBS NOT TO BE REPUBLISHED

(ಯಶೋಧರೆ ಪಠದ ಅಡಿಗೆ ತಲೆಯಿಟ್ಟು ದುಃಖಿಸುವಳು. ರಾಹುಲನು ಹೂಗಳನ್ನು ತೆಗೆದು ಪೀಠದ ಮೇಲೆ ಹಾಕುವನು. ತಾಯ ಹೆರಳಿಗೆ ಒಂದು ಹೂವನಿಟ್ಟು ಸೊಗಸು ನೋಡುವನು. ಅದೇ ವೇಳೆಗೆ ರಾಜನೂ, ಅಂಬಿಕೆಯೂ ಬರುವರು)



ರಾಜ : ಅಮ್ಮಾಜಿ, ಬಂದಿಹೆನು.

ಯಶೋಧರೆ : (ಎದ್ದು ಬಂದು ನಮಸ್ಕರಿಸಿ) ಪೀಠವನು ಕೊಳಬೇಕು.

ನಾನು ಬಹುದಿನದಿಂದ ನಿಮ್ಮ ಬೇಡುತಲಿದ್ದೆ.
ಸೋದರಿಯ ಸುತೆಯೆಂದು ಎಳೆತನದಲೇ ನನ್ನ
ಕರೆತಂದಿರಿ, ಸಾಕಿ ಸಲಹಿದಿರಿ; ಸೊಸೆಯಾಗಿ
ಮನೆಗೆ ಹೋಗಿಸಿದಿರಿ, ಬಾಳುವೆಯನುದ್ಧರಿಸಿದಿರಿ.
ಕನಸಿರಲಿ ಎಣಿಸಲಾಗದ ಸೌಖ್ಯಗಳ ನಾನು
ನಿಮ್ಮ ಅರಮನೆಯಲ್ಲಿ ಅನುಭವಿಸಿ ಸುಖಿಸಿದೆನು.

ರಾಜ : ನನ್ನ ಅರಮನೆಯಲ್ಲಿ ?

ಯಶೋಧರೆ: ನಮ್ಮ ಅರಮನೆಯಲ್ಲಿ.
ನಿಮ್ಮ ಐಶ್ವರ್ಯದಲಿ ಕಣಮಾತ್ರವನು ನನಗೆ
ಇಲ್ಲವೆನ್ನದೆ ನನ್ನ ಪರಿಪಾಲಿಸಿದಿರಿ.
ಪತಿಯನಿತ್ತರಿ ; ಬಾಲ ದೇವರಾಗಿರಲೆಂದು ;
ಪತಿಯನಿನ್ನೊಮ್ಮೆ ನೀಡಿರಿ ; ನನ್ನ ರಕ್ಷಿಸಿರಿ.

ರಾಜ : ಏನಮಾಡೆಂದು ಕೇಳುವೆ ?

ಯಶೋಧರೆ: ನಮ್ಮ ಅಣ್ಣಾಜಿ
ತಂದೆಯನು ಕರೆತರಲು ಹೋಗುವೆನು ಎನಲಾಗಿ
ನೀವು ಒಪ್ಪಿದಿರಂತೆ. ನಾನು ನಿಮ್ಮನು ಮೊದಲೆ
ಬೇಡಿಕೊಂಡಿದ್ದೆ. ನಾನವರೆಡೆಗೆ ಹೋಗುವೆನು
ಇವನನ್ನಿಲ್ಲಿಯೇ ನಿಲಿಸಿಕೊಳ್ಳಿರಿ.

ರಾಜ : ಅಮ್ಮಾಜಿ,
ಬಾಲಕನು ತಂದೆಯನು ಕರೆತರುವೆನೆಂದೆನಲು
ಕೇವಲ ವಿನೋದದಲಿ ಆಗಬಹುದೆಂದೆನು.
ನಮ್ಮ ಕುವರನ ಕರೆದುತರಬೇಕು ಎನಲಾಗಿ
ಹೋಹ ಬೇಹಿಲ್ಲವೇ? ಎಳೆಯನನು ಕಳುಹುವರೆ?

ರಾಹುಲ : ಏನು ತಾತ, ಮುನ್ನ ಹೋಹಬಹುದೆಂದವರು
ಈಗ ಉಂಟೇ ಎಂದು ಹೇಳುವಿರಿ ? ದೊಡ್ಡವರು

NOT TO BE REPUBLISHED @KTBS

ನನಗೊಂದು ಮಾತನಾಡುತ ತಾಯಿ ಕೇಳಿದರೆ
ಬೇರೊಂದು ಮಾತ ಹೇಳುವಿರೊ ? ನಾ ಹೋಹುವೆನು.
ಅಮ್ಮ ಇಂದಳುತಲಿದ್ದರು. ಅಣ್ಣ ಬಾರದಿರೆ
ಅಳುತಲೇ ಇರುವರು. ನಾ ಹೋಗಿ ಕರತರುವೆನು.

ಯಶೋಧರೆ: ಕೇಳಿದಿರ ಹಸುಳೆಯಾಡುವ ಮಾತ ? ನನಗೋ
ನಿನ್ನೆ ನೋಡಿದ ಒಂದು ಕನಸು ಮನವು ತುಡುಕಿ
ಉಸಿರಿಂದ ಉಸಿರು ಕಳವಾಗಿ ಚೇತನವೆಲ್ಲ
ಬೆಂಡಾಗಿ ಹೋಗಿಹುದು ; ಒಣಗಿ ತರಗಾಗಿಹುದು.

ರಾಜ : ಹೌದು. ಅಂಬಿಕೆ ಕನಸ ಮಾತ ಹೇಳಿದಳೆನಗೆ.
ನಿಜದಿಂದ ಬಂದಿರುವ ನೋವು ಸಾಕಾಗಿರಲು
ಕನಸೊಂದು ಬೇರೆ ನಿನ್ನನು ಹಿಂಸೆಪಡಿಸುತಿದೆ.

ಯಶೋಧರೆ: ಇಂದು ಇರುಳಾಗುವುದು ; ಇನ್ನೇನ ಮಾಡುವ ;
ನಿದ್ದೆಯಲಿ ಮುಳುಗಲಿನ್ನಾವ ಕನಸಿನ ಮೊಸಳೆ
ಹಿಡಿಯುವುದೊ; ಇನ್ನೆನಿತು ತೊಳಲಬೇಕೋ, ಎಂದು
ಚೇತನಗಳೆಲ್ಲ ಭೀತಿಯಲಿ ಕಲಕಿಹವೆನಗೆ.
ನನ್ನನುದ್ಧರಿಸಬೇಕು. (ಮಂಡಿಯೂರಿ ನಮಸ್ಕರಿಸುವಳು.)

ರಾಜ : ಏಳು, ಅಮ್ಮಾಜಿ ;
ನಿನ್ನ ದುಃಖವ ನಾನು ಕಾಣೆನೇ ? ಏಳಮ್ಮ,
(ಯಶೋಧರಾ ಎದ್ದು ಕುಳಿತುಕೊಳ್ಳುವಳು)
ನೀ ಬಲ್ಲೆಯಲ್ತೆ ನಿನ್ನಾಣ್ಮ ಸನ್ಯಾಸವನು
ಸ್ವೀಕರಿಸಿಹನು ಎಂದು ? ನೀ ಹೋಗಿ ಆತನನು
ನೋಡುವುದು ಸರಿಯಪ್ಪುದೇ ?

ಯಶೋಧರೆ: ಹೋಗಿ ಕೇಳುವೆನು.

ರಾಜ : ಸಂನ್ಯಾಸಿಯಾದವನು ಸತಿಯ ನೋಡುವ ಮಾತು
ಸಂಪ್ರದಾಯಕೆ ವಿರೋಧ.

NOT TO BE REPUBLISHED ©KTBS

ಯಶೋಧರೆ: ಪೂರ್ವದಲಿ ಗಾರ್ಗಿ
ಸಂನ್ಯಾಸದಲಿ ತನ್ನ ಪತಿಯೊಡನೆ ಕಾನನಕೆ
ತೆರಳಿದಳು ಎಂದು ಕೇಳಿಹೆನು. ನಾನಂತೆಯೇ
ಸಂನ್ಯಾಸವನು ಕೊಂಡು ಪತಿಯೆಡೆಗೆ ಸಾರಿದರೆ.....

ರಾಜ : ಈಗ ನೀನಿಹ ರೀತಿ ಸಂನ್ಯಾಸವಲ್ಲವೆ ?

ಯಶೋಧರೆ: ಆಣ್ಮ ಸಂನ್ಯಾಸಿಯಾಗಿಹರೆಂಬುದನು ನೆನೆವ
ಸಾಧನೆಯ ವೇಷವಿದು. ಇಂದು ನಿಜದಲಿ ನಾನು.
ಸಂನ್ಯಾಸವನು ಕೊಂಡು ಪತಿಯೆಡೆಗೆ ಸಾರಿದರೆ.....

ರಾಜ : ಪತಿಯೆಡೆಗೆ ಸಾರುವರೆ ಸಂನ್ಯಾಸನು ಕೊಳಲು
ಅದನು ಸಂನ್ಯಾಸವೆನ್ನುವುದೆಂತು ಅಮ್ಮಾಜಿ ?

ಯಶೋಧರೆ : ನನಗೆ ಕವಿದಿರುವ ಮಂಕನು ನೆನೆಯೆ ನನಗೇ
ನಗೆ ಬರುತಲಿದೆ, ಅಂತೆ ಅಳು ಬರುತಲಿದೆ. ಇನ್ನು
ಏನಮಾಡುವುದೋ ತೋರದು. ಎಂತು ನಡೆಯಲಿ ?
ನೀವೆ ಅಪ್ಪಣೆಮಾಡಿ. ಅದರಂತೆ ನಡೆಯುವೆನು.

ರಾಜ : ಕುವರನಿಗೆ ಹೇಳಿ ಕಳುಹಿಸುವ, ಅವನಿಷ್ಟವನು
ತಿಳಿದು ಅದರಂತೆ ನಡೆಯುವ.


ಯಶೋಧರೆ: ಆಗಬಹುದು, ಇಂದೆ ಬೇಹನು ಕಳುಹಿ.

ರಾಜ : ಕಳುಹುವೆನು, ಯಾರಲ್ಲಿ ?

ರಾಹುಲ : ತಾತ ಅಣ್ಣನ ನೋಡೆ ಯಾರನೋ ಕಳುಹುವಿರ ?
ನಾ ಹೋಗಿಬರುವೆ. ನನ್ನನು ಕಳುಹಿ.

ಯಶೋಧರೆ: ಅಣ್ಣಯ್ಯ
ಮೊದಲು ಬೇಹಿನ ಜನರು ಹೋಗಿ ಅವರಿಚ್ಛೆಯನು
ತಿಳಿದು ಮರಳಲಿ.

©KTBS NOT TO BE REPUBLISHED



NOT TO BE REPUBLISHED ©KTBS

ರಾಹುಲ : ಮತ್ತೆ ಹೋಗುವುದಂತೆ ! ಮತ್ತೆ ! ನಾನೊಲ್ಲೆ.
ನಾನೀಗಲೇ ಹೋಗಬೇಕು. ನಿಮಗೇನು ?
ಅಣ್ಣನನು ನೋಡಿಹಿರಿ : ನೋಡಬೇಕೆಂದಾಸೆ
ಅಷ್ಟು ಬಲವಾಗಿಲ್ಲ. ನಾನವರ ನೋಡಿಲ್ಲ.
ಇನ್ನೆಷ್ಟು ದಿನಕೆ ನೋಡುವುದು ? ಅಮ್ಮಾಜಿ,
ನಿನಗೆ ಭಯ ಬೇಡಮ್ಮ, ನಾ ಮರಳಿ ಬಹೆನಮ್ಮ ;
ನಿಜವಾಗಿಯೂ ಬಹೆನು, ಅಲ್ಲಿಯೇ ನಿಲೆನಮ್ಮ ;
ನನ್ನ ಕಳುಹಿಸಮ್ಮ ; ಅವರ ನಾ ಕರೆತರುವೆನು.
ತಾತ ನನ್ನನು ಕಳುಹಿ ; ನಾ ಮರಳಿ ಬರುವೆನು.
ಅಣ್ಣನನು ನೋಡಬೇಕೆಂದು, ಅವರೊಡನಿದ್ದು
ಮಾತಾಡಬೇಕೆಂದು, ನನಗೆ ಬಹು ಆಸೆಯಿದೆ.

ರಾಜ : ಇರಲಿ ಸುಮ್ಮನಿರಣ್ಣ.

ಯಶೋಧರೆ: ಕನಸು ನಿಜವಾಯಿತು.
ಕನಸಿನಲಿ ಕಂಡ ಹುಲಿ ನಿಜದೊಳೆದುರಿಗೆ ಬಂದು,
ಕೊಡು ನಿನ್ನ ಜೀವವನು, ಎಂದು ಕೇಳುತಲಿಹುದು.

ರಾಹುಲ : ಅಮ್ಮಾಜಿ, ನಾನು ಬರುವೆನೊ ಇಲ್ಲವೋ ಎಂದು
ನಿನಗೆ ಭಯವಿಹುದಾಗೆ ನನ್ನ ಜೊತೆಯಲಿ ನಮ್ಮ
ಅಂಬಿಕೆಯ ಕಳುಹಮ್ಮ. ನಾವಿಬ್ಬರೂ ಹೋಗಿ
ಅಣ್ಣನನು ಕರೆದಹೆವಮ್ಮ. ಒಪ್ಪಮ್ಮ.

ರಾಜ : ಅಂಬಿಕೆ.

ಅಂಬಿಕ : ಸ್ವಾಮಿ.

ರಾಜ : ಬಾಲನಾಡಿದ ಮಾತ ಕೇಳಿದೆಯ? ಏನೆಂಬೆ ?

ಅಂಬಿಕ : ಕೇಳಿದೆ. ಅಮ್ಮಾಜಿ
ಭಯಪಡುತಲಿಹರು. ತಾವರಿಯದಿಹದೇನುಂಟು ?

ರಾಜ : ಅಮ್ಮಾಜಿ ಏನೆಂಬೆ ? ಅಂಬಿಕೆಯ ಜೊತೆಯಲ್ಲಿ
ರಾಹುಲನ ಕಳುಹಿಸಲು ಧೈರ್ಯವಾಗಿರಬಹುದು.
ಏನಹೇಳುವೆ ?

ಯಶೋಧರೆ: ನನಗೆ ಯಾವುದೂ ತೋಚದಿದೆ.
ಅವರ ನೋಡುವ ಪುಣ್ಯ ನನ್ನ ಈ ಕಣ್ಗಳಿಗೆ
ಇರುವುದೋ ಇಲ್ಲವೋ ನಾನರಿಯೆ. ಬಾಲಕನು
ತನ್ನ ತಂದೆಯ ನೋಡಬೇಕೆಂದು ಆಶಿಸಲು
ಬೇಡವೆನ್ನುವುದು ಸರಿಯೇ ಎಂದು ಆಂತರ್ಯ
ಸಂದೇಹದೊಳಗಿಹುದು. ಕಳುಹುವುದು ಸರಿಯೆಂದು.
ನಿಮಗೆ ತೋರಿದರೆ ಕಳುಹಿರಿ. ಬೇಡವೆನೆ ನಾನು.

ರಾಹುಲ : ಅಮ್ಮಾ, ಎಷ್ಟು ಒಳ್ಳೆಯವಳಮ್ಮಾ ನೀನು !
ಅಂಬಿಕೇ, ನಡೆ, ಹೋಗಿ ಅಣ್ಣನನು ಕರೆತರುವ.
ತಾತಾ ನಾ ಹೋಗಿಬರಲೆ ? ಅಮ್ಮಾಜೀ.
ನಾವು ಹೋಗಿ ಬರೋಣವೇನಮ್ಮ ?

ಯಶೋಧರೆ: ಆಹಾ, ಏನು ಉತ್ಸಾಹವಿದು ! ಅಪ್ಪಾಜಿ ಹೋಗಿಬಾ.
ಅಣ್ಣಯ್ಯ, ನನ್ನ ಮರೆಯದಿರಣ್ಣ. ನಿಮ್ಮಣ್ಣ
ನಮ್ಮ ಮರೆತರು, ನನ್ನ ಬದುಕೆಲ್ಲ ಬಯಲಾಯ್ತು.
ಅವರು ಬಿಟ್ಟಂತೆ ನೀನೆನ್ನ ಕೈ ಬಿಡಬೇಡ.

©KTBS NOT TO BE REPUBLISHED

ಹೋಗಿಬಾ. ಹೋಗಿಬಾ ; ಅಂಬಿಕೆ, ಜೊತೆಯೊಳಿರು;
ನನ್ನ ಮರೆಯದಿರು.


ಅಂಬಿಕೆ : ನನ್ನಾಣೆ ಮರೆಯುವೆನೆ ತಾಯಿ ?

ಯಶೋಧರೆ: ಮರೆತರೂ ತಪ್ಪಲ್ಲ. ಅದು ನನ್ನ ವಿಧಿ ಎಂಬೆ.

ರಾಜ : ನಿನ್ನ ವಿಧಿ ಕೆಟ್ಟುದೆಂದೆಣಿಸದಿರು ಅಮ್ಮಾಜಿ.
ನಿನ್ನರಸನೀಗ ಲೋಕಕೆ ಪೂಜ್ಯನೆನಿಸಿಹನು.
ರಾಜ್ಯವಾಳುವುದೆಂಬ ಕಿರಿಯ ಹಿರಿಮೆಯನು.
ಜಗದ ಜೀವಗಳ ಉದ್ಧರಿಪ ಹಿರಿಹಿರಿಮೆಯನು
ಅಳವಟ್ಟು, ರಾಜ ಅಧಿರಾಜ ವೃಂದಗಳಿಂದ
ಓಲೈಸಿಕೊಳ್ಳುತ್ತ ಚಕ್ರಾಧಿಪತಿಯಂತೆ
ನಿಂದಿಹನು. ಏಕೆ ಚಿಂತಿಸುವೆ ? ಈ ಬಾಲಕನು
ನಿನ್ನ ಈ ಹತ್ತು ವರುಷದ ತಪವೆ ಮೆಯ್‌ವೆತ್ತು
ನಿನ್ನಾಣ್ಮನನು ಕರೆಯಹೊರಟಂತೆ ಹೊರಟಿಹನು.
ವಿಧಿಯರಿತು ನಡೆವ ಹವನದಲಿ ಉದ್ಗಾತೃಗಳು
ಸ್ವರಹಿಡಿದು ಸೊಗಸಾಗಿ ನುಡಿದ ಶಕ್ತಿಯ ಮಂತ್ರ
ದೇವರನು ತರುವಂತೆ ನಮ್ಮ ಈ ಬಾಲಕನು
ನಮ್ಮ ಸಿದ್ಧಾರ್ಥನನು ಬಿಡದೆ ತಂದೇತಹನು.
ಬಾ ನನ್ನ ಅಣ್ಣಯ್ಯ, ತಾಯಿಗಭಿವಂದಿಸು.
ಬಹು ಹಿರಿಯ ಜೀವವಯ್ಯಾ ನಿನ್ನ ತಾಯಿಯದು ;
ಬಹು ಹಿರಿಯ ತಪ ಪುಣ್ಯ, ಬೀಳ್ಕೊಳುವ ಮೊದಲಲ್ಲಿ
ಹರಕೆಯನು ಕೊಳು. ಇಲ್ಲಿ ಬಾ, ಒಮ್ಮೆ ವಂದಿಸು.
ತಾಯ್ತಂದೆಗಳ ಪುಣ್ಯ ನಿನ್ನಲ್ಲಿ ಫಲಿಸಲಿ.
ಸಿದ್ಧಾರ್ಥನನು ಕರೆದುತಹ ಕಾರ್ಯದಲಿ ನೀನು
ಸಿದ್ಧಾರ್ಥನಪ್ಪಂತೆ ದೇವರ್ಕಳೆಸಗಲಿ.

**(ರಾಹುಲನು ಇವರಿಗೆ ನಮಿಸುವನು. ತೆರೆ ಬೀಳುವುದು)**

NOT TO BE REPUBLISHED
@KTBS



## ಕೃತಿಕಾರರ ಪರಿಚಯ

ಕನ್ನಡ ಸಾಹಿತ್ಯ ಲೋಕದಲ್ಲಿ **'ಸಣ್ಣಕಥೆಗಳ ಜನಕ'** ರೆಂದೇ ಖ್ಯಾತಿಪಡೆದು, **'ಶ್ರೀನಿವಾಸ'** ಕಾವ್ಯನಾಮದಿಂದ ಹೆಸರಾಂತ **ಮಾಸ್ತಿ ವೆಂಕಟೇಶ ಅಯ್ಯಂಗಾರರು ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಮಾಸ್ತಿ** ಎಂಬ ಗ್ರಾಮದಲ್ಲಿ ೬-೬-೧೮೯೧ ರಲ್ಲಿ ಜನಿಸಿದರು. ತುಂಬು ಬಡತನವಿದ್ದರೂ ಕಷ್ಟಪಟ್ಟು ವಿದ್ಯಾಭ್ಯಾಸ ಮಾಡಿ ಉತ್ತಮ ದರ್ಜೆಯಲ್ಲಿ ಇಂಗ್ಲಿಷ್ ಎಂ.ಎ. ಪದವಿ ಪಡೆದರು. **'ಮೈಸೂರು ಸಿವಿಲ್ ಸರ್ವಿಸ್'** ಪರೀಕ್ಷೆಯಲ್ಲಿ ಮೊದಲ ಸ್ಥಾನ ಪಡೆದು ಅಸಿಸ್ಟೆಂಟ್ ಕಮಿಷನರ್ ಆಗಿ ರಾಜ್ಯದ ವಿವಿಧೆಡೆ ಸೇವೆ ಸಲ್ಲಿಸಿರುತ್ತಾರೆ.

ಇವರು ಕಾವ್ಯ, ನಾಟಕ, ಕಾದಂಬರಿ ವಿಮರ್ಶೆ – ಹೀಗೆ ಕನ್ನಡ ಸಾಹಿತ್ಯ ವಿವಿಧ ಪ್ರಕಾರಗಳಲ್ಲಿ ಕೃತಿ ರಚಿಸಿದ್ದಾರೆ. ಇವರ ಸಣ್ಣಕಥೆಗಳು ಒಟ್ಟು ಹದಿಮೂರು ಸಂಪುಟಗಳಲ್ಲಿ ಪ್ರಕಟವಾಗಿವೆ. **'ಗೌತಮಿ ಹೇಳಿದ ಕಥೆ', 'ಸಾರಿಪುತ್ರನ ಕೊನೆಯ ದಿನಗಳು', 'ಕುಚೇಲನ ಭಾಗ್ಯ', 'ಹೇಮಕೂಟದಿಂದ ಬಂದ ಮೇಲೆ', 'ಚಿಕವೀರ ರಾಜೇಂದ್ರ'** ಮೊದಲಾದವು ಪ್ರಮುಖ ಕೃತಿಗಳು. ಇವರ ಚಿಕವೀರ ರಾಜೇಂದ್ರ ಕಾದಂಬರಿಗೆ ೧೯೮೩ ರಲ್ಲಿ ಜ್ಞಾನಪೀಠ ಪ್ರಶಸ್ತಿ ದೊರೆತಿದೆ. ಇವರು ೬-೬-೧೯೮೬ರಲ್ಲಿ ನಿಧನರಾದರು.

ಪ್ರಸ್ತುತ ಗದ್ಯಭಾಗವನ್ನು ಮಾಸ್ತಿ ವೆಂಕಟೇಶ ಅಯ್ಯಂಗಾರರ **'ಯಶೋಧರೆ'** ನಾಟಕದಿಂದ ಸಂಪಾದಿಸಿ ನಿಗದಿಪಡಿಸಿದೆ.

NOT TO BE REPUBLISHED @KTBS

## ಪೂರ್ವ ಕಥೆ

ಸಿದ್ಧಾರ್ಥ ರಾಜ್ಯವನ್ನು ಪರಿತ್ಯಾಗ ಮಾಡಿ ಹೋಗಿ ಹತ್ತು ವರ್ಷಗಳು ಕಳೆದಿವೆ. ತಂದೆಯನ್ನೇ ಕಾಣದ ಮಗು ರಾಹುಲನಿಗೂ ಹತ್ತು ವರ್ಷಗಳಾಗಿವೆ. ಇತ್ತ ಕಪಿಲವಸ್ತುವಿನ ಅರಮನೆಯ ಅಂತಃಪುರದಲ್ಲಿ ಯಶೋಧರಾ ಒಬ್ಬಳೇ ಚಿಂತಾಮಗ್ನಳಾಗಿ ಸಿದ್ಧಾರ್ಥನ ಪಥವನ್ನು ನೋಡುತ್ತಾ ಕಣ್ಣೀರಿಡುತ್ತಾ ಕುಳಿತಿರುತ್ತಾಳೆ. ದುಃಖಿಸಲು ಕಾರಣವನ್ನು ಆಕೆಯ ಸಖಿ ಅಂಬಿಕೆ ಕೇಳಲಾಗಿ ಹಿಂದಿನ ರಾತ್ರಿ ಅಮಂಗಳವನ್ನು ಸೂಚಿಸುವ ಕನಸೊಂದನ್ನು ಕಂಡೆನೆಂದು ಹೇಳುತ್ತಾ, ಹತ್ತು ವರ್ಷಗಳ ಹಿಂದೆ ಇಂಥಹ ಕನಸೊಂದನ್ನು ಕಂಡು ಎಚ್ಚರವಾಗಿ ನೋಡಿದರೆ ನನ್ನ ಮನದನ್ನ ಇರದೇ ರಾಜ್ಯ ತೊರೆದು ಹೋಗಿದ್ದ. ಇಂದು ಕನಸಿನಿಂದ ಎಚ್ಚೆತ್ತು ನೋಡಿದರೆ ಮಗ ಇದ್ದಾನೆ. ಆದರೆ ಎಲ್ಲಿ ನನ್ನನ್ನು ತೊರೆದು ಹೋಗುತ್ತಾನೆಂದು ವ್ಯಾಕುಲತೆಗೆ ಒಳಗಾಗಿರುವುದಾಗಿ ತಿಳಿಸುತ್ತಾಳೆ. ಅಭ್ಯಾಸಕ್ಕೆ ಹೋಗಿದ್ದ ರಾಹುಲನು ಬಂದು ಅಮ್ಮ ತಂದೆಯನ್ನು ನಾನು ನೋಡಿಯೇ ಇಲ್ಲ, ಆತನನ್ನು ಕರೆತರಲು ನಾನು ಹೋಗುವುದಾಗಿ ತಿಳಿಸುತ್ತಾ ಇದಕ್ಕೆ ತಾತನ ಅನುಮತಿ ಪಡೆದಿರುವುದಾಗಿ ತಿಳಿಸುತ್ತಾನೆ. ಇದರಿಂದ ಆತಂಕಗೊಂಡು ರಾಜನನ್ನು ಕರೆಯಲು ಸಖಿ ಅಂಬಿಕೆಯನ್ನು ಕಳಿಸುತ್ತಾಳೆ. ರಾಜ ಅಂತಃಪುರಕ್ಕೆ ಅಂಬಿಕೆಯೊಂದಿಗೆ ಆಗಮಿಸುತ್ತಾನೆ.

## ಪದಗಳ ಅರ್ಥ

ಆಣ್ಮ–ಒಡೆಯ, ಸ್ವಾಮಿ; ಆಶಿಸು–ಬಯಸು; ಉದ್ಗಾತೃ–ಋತ್ವಿಜ, ಯಜ್ಞದಲ್ಲಿ ಸಾಮಗಾನವನ್ನು ಹಾಡುವವನು; ಎನಿತು–ಎಷ್ಟು; ಎಸಗಲಿ–ಆರ್ಶೀವದಿಸಲಿ; ಕವಿ–ಆವರಿಸು, ಮುತ್ತು; ಕಾನನ–ಕಾಡು, ಅರಣ್ಯ; ಚೇತನ–ಶಕ್ತಿ, ಚೈತನ್ಯ; ತರಗು–ಕುಂದುವಿಕೆ, ಇರುಳು–ರಾತ್ರಿ; ತುಡುಕಿ–ಕಸಿದುಕೊಂಡು, ಕಿತ್ತುಕೊಳ್ಳು; ತೊಳಲು–ಚಿಂತೆಮಾಡು, ಶ್ರಮಪಡು; ಪರಿಪಾಲಿಸು–ರಕ್ಷಣೆಮಾಡು, ಕಾಪಾಡು; ಬೇಹು–ಗುಪ್ತಾಚಾರ; ಮಂಕು–ಭ್ರಾಂತಿ; ವಿನೋದ – ಹಾಸ್ಯ, ಉತ್ಸುಕತೆ; ವೃಂದ–ಸಮೂಹ, ಗುಂಪು; ಸಂದೇಹ–ಅನುಮಾನ; ಸತಿ–ಹೆಂಡತಿ; ಸಲಹು–ಕಾಪಾಡು; ಸುತೆ–ಮಗಳು; ಹವನ–ಹೋಮ, ಯಜ್ಞ; ಹಸುಳೆ–ಮಗು;

## ಅಭ್ಯಾಸ

**ಅ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಯಶೋಧರೆ ಮತ್ತೊಮ್ಮೆ ಯಾರನ್ನು ನೀಡಬೇಕೆಂದು ರಾಜನಲ್ಲಿ ಬೇಡುತ್ತಾಳೆ?
೨. ತಂದೆಯನ್ನು ಕರೆತರಲು ಹೋಗುವೆನೆಂದು ಹೇಳಿದವರಾರು?
೩. ರಾಜನಿಗೆ ಕನಸಿನ ವಿಚಾರವನ್ನು ತಿಳಿಸಿದವರಾರು?
೪. ಸಂಪ್ರದಾಯಕ್ಕೆ ವಿರುದ್ಧವಾದದ್ದು ಯಾವುದು?
೫. ಈಗ ನೀನಿರುವ ರೀತಿ ಯಾವುದೆಂದು ಯಶೋಧರೆಯನ್ನು ರಾಜ ಕೇಳಿದನು?

**ಆ. ಈ ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯದಲ್ಲಿ ಉತ್ತರಿಸಿ.**

೧. ರಾಜನನ್ನು ಪೀಠದಲ್ಲಿ ಕುಳ್ಳಿರಿಸಿ ಯಶೋಧರೆ ಏನೆಂದು ವಿನಂತಿಸುತ್ತಾಳೆ?
೨. ಯಶೋಧರೆ ಮಂಡಿಯೂರಿ ನಮಸ್ಕರಿಸುತ್ತಾ ಏನು ಹೇಳುತ್ತಾಳೆ?
೩. ರಾಜನು ಈಗ ನೀನಿರುವ ರೀತಿ ಸನ್ಯಾಸವಲ್ಲವೆ ಎನ್ನಲು ಕಾರಣವೇನು?
೪. ಯಶೋಧರೆಯ ಅಂತರ್ಯದಲ್ಲಿರುವ ಸಂದೇಹವೇನು?

**ಇ. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು–ಐದು ವಾಕ್ಯದಲ್ಲಿ ಉತ್ತರಿಸಿ.**

೧. ಬೇಹಿನವರನ್ನು ಕಳಿಸುವ ವಿಚಾರದಲ್ಲಿ ರಾಹುಲನ ಅಭಿಪ್ರಾಯವೇನು?
೨. ಯಶೋಧರೆಯ ವಿಧಿಯ ಬಗ್ಗೆ ರಾಜನು ಏನೆಂದು ಹೇಳಿದನು?

**ಈ. ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಸಹಿತ ಸ್ವಾರಸ್ಯವನ್ನು ಬರೆಯಿರಿ.**

೧. "ಸೋದರಿಯ ಸುತೆಯೆಂದು ಎಳೆತನದಲೇ ನನ್ನ ಕರೆತಂದು ಸಾಕಿದಿರಿ"
೨. "ಅಮ್ಮಾಜಿ, ನಿನಗೆ ಭಯ ಬೇಡಮ್ಮ ನಾ ಮರಳಿ ಬಹೆನಮ್ಮ"
೩. "ನಿನ್ನ ವಿಧಿ ಕೆಟ್ಟುದೆಂದೆಣಿಸದಿರು ಅಮ್ಮಾಜಿ"
೪. "ನಿದ್ದೆಯಲಿ ಮುಳುಗಲಿನ್ನಾವ ಕನಸಿನ ಮೊಸಳೆ ಹಿಡಿಯುವುದೋ"

NOT TO BE REPUBLISHED @KTBS

**ಉ. ಯಶೋಧರೆ ಗದ್ಯಭಾಗವನ್ನು ಸರಳ ಕಥಾರೂಪದಲ್ಲಿ ಬರೆಯಿರಿ.**

**ಊ. ಹೊಂದಿಸಿ ಬರೆಯಿರಿ**

| | | |
|---|---|---|
| ೧. ಯಶೋಧರೆ | – | ಸಖಿ |
| ೨. ಶುದ್ಧೋದನ | – | ಬುದ್ಧನ ಮಗ |
| ೩. ಅಂಬಿಕೆ | – | ರಾಜ |
| ೪. ರಾಹುಲ | – | ಗೌತಮ ಬುದ್ಧ |
| ೫. ಸಿದ್ಧಾರ್ಥ | – | ಯುವರಾಣಿ |

**ಋ. ಈ ಕೆಳಗಿನ ಪದಗಳಿಗೆ ತದ್ಭವ ಪದಗಳನ್ನು ಬರೆಯಿರಿ.**

ವಿನೋದ, ದುಃಖ, ರಾಜ, ಕಾರ್ಯ.

**ಎ. ಈ ಪದಗಳನ್ನು ಬಿಡಿಸಿ ಸಂಧಿಯನ್ನು ಹೆಸರಿಸಿ.**

ನಿನ್ನಾಣ್ಮ , ಚಕ್ರಾಧಿಪತಿ, ಹರಕೆಯನು, ಪತಿಯೊಡನೆ, ಇಂದಳುತ,

## ಸೈದ್ಧಾಂತಿಕ ಭಾಷಾಭ್ಯಾಸ

### ಲಿಂಗ, ವಚನ ಮತ್ತು ವಾಕ್ಯಗಳ ಪರಿಚಯಾತ್ಮಕ ವಿವರ

**ಲಿಂಗಗಳು**

**– ಶ್ಯಾಮ ಗಿರೀಶನಿಗೆ ಬುದ್ಧಿ ಹೇಳಿದನು.**

**– ಗೌರಿ ತನ್ನ ತಂಗಿಗೆ ಪುಸ್ತಕವನ್ನು ಕೊಟ್ಟಳು.**

**– ಆಡು ಸೊಪ್ಪನ್ನು ತಿನ್ನುತ್ತದೆ.**

ಮೊದಲ ವಾಕ್ಯದಲ್ಲಿರುವ **'ಶ್ಯಾಮ', 'ಗಿರೀಶ'** ಪದಗಳು ಗಂಡಸರಿಗೂ **'ಗೌರಿ', 'ತಂಗಿ'** ಪದಗಳು ಹೆಂಗಸರಿಗೂ **'ಆಡು', 'ಸೊಪ್ಪು'** ಪದಗಳು ಗಂಡಸೂ ಅಲ್ಲದ ಹೆಂಗಸೂ ಅಲ್ಲದ ಬೇರೆ ಯಾವುದಕ್ಕೋ ಸಂಬಂಧಿಸಿದ್ದೆಂದು ತಿಳಿಯುತ್ತದೆ.

**'ಗಂಡಸು'** ಎಂಬ ಅರ್ಥ ನೀಡುವ ಪದಗಳನ್ನು **ಪುಲ್ಲಿಂಗ** ಎಂತಲೂ **'ಹೆಂಗಸು'** ಎಂಬ ಅರ್ಥ ನೀಡುವ ಪದಗಳನ್ನು **ಸ್ತ್ರೀಲಿಂಗ** ಎಂತಲೂ, **'ಗಂಡಸು'** ಎಂಬ ಅರ್ಥವನ್ನೂ **'ಹೆಂಗಸು'** ಎಂಬ ಅರ್ಥವನ್ನೂ ನೀಡದ ಪದಗಳನ್ನು **ನಪುಂಸಕಲಿಂಗ** ಎಂತಲೂ ಕರೆಯುವರು.

@KTBS NOT TO BE REPUBLISHED

## ವಚನಗಳು

**ವಚನ** ಎಂದರೆ **ಎಣಿಕೆ** ಎಂದರ್ಥ. ವಸ್ತು ಅಥವಾ ವ್ಯಕ್ತಿಗಳನ್ನು ಎಣಿಸುವಾಗ ಒಂದು ಅಥವಾ ಒಂದಕ್ಕಿಂತ ಹೆಚ್ಚು ಎಂದು ಎಣಿಸಿ ಒಂದಕ್ಕಿಂತ ಹೆಚ್ಚಾದರೆ ಎಷ್ಟು ಎಂದು ನಿರ್ಧರಿಸುತ್ತೇವೆ. ಹೀಗೆ – **ಒಂದು ವಸ್ತು ಅಥವಾ ಒಬ್ಬ ವ್ಯಕ್ತಿಯನ್ನು ಸೂಚಿಸುವ ಪದಗಳೇ ಏಕವಚನ. ಒಂದಕ್ಕಿಂತ ಹೆಚ್ಚು ಇರುವ ವಸ್ತು ಅಥವಾ ವ್ಯಕ್ತಿಗಳನ್ನು ಸೂಚಿಸುವ ಪದಗಳೇ ಬಹುವಚನ.**

ಏಕವಚನದ ನಾಮಪ್ರಕೃತಿಗಳಿಗೆ **ಅರು, ವು, ಗಳು, ಅಂದಿರು** ಇತ್ಯಾದಿ **ಬಹುವಚನ ಸೂಚಕಗಳು** ಸೇರಿ **ಬಹುವಚನ** ಪದಗಳಾಗುತ್ತವೆ.

ಉದಾ : ರಾಜ + ಅರು > ರಾಜರು    ನೀನು + ವು > ನೀವು
ಮರ + ಗಳು > ಮರಗಳು    ಅಣ್ಣ + ಅಂದಿರು > ಅಣ್ಣಂದಿರು
ರಾಣಿ + ಅರು > ರಾಣಿಯರು

## ವಾಕ್ಯಗಳು

ಮಾತು ಪದಗಳಿಂದ ಆರಂಭವಾಗುತ್ತದೆ. ಆದರೆ ಅದು ವಿಕಾಸಗೊಳ್ಳುವುದು ವಾಕ್ಯಗಳ ಮೂಲಕ. ಹಾಗಾಗಿ ಪದಗಳ ಅರ್ಥಪೂರ್ಣ ಸಮೂಹವೇ **ವಾಕ್ಯ.** ಹಾಗೆಂದ ಮಾತ್ರಕ್ಕೆ ಅದೊಂದು ಪದಗಳ ಗುಂಪು ಎಂದು ಹೇಳಲಾಗದು. ಆ ಪದಗಳು ಒಂದು ನಿರ್ದಿಷ್ಟ ರೀತಿಯಲ್ಲಿ (ಅರ್ಥವತ್ತಾದ) ಜೋಡಣೆಯಾದಾಗ ಮಾತ್ರ **ವಾಕ್ಯ** ಎನಿಸಿಕೊಳ್ಳುತ್ತದೆ.

**ಈ ವಾಕ್ಯಗಳನ್ನು ಗಮನಿಸಿ**

೧. **ಜಿಂಕೆಯು ಹುಲ್ಲನ್ನು ತಿಂದಿತು.**

೨. **ಕೃಷ್ಣನು ಧೇನುಕಾಸುರನನ್ನು ಕೊಂದ.**

ಈ ಎರಡೂ ವಾಕ್ಯಗಳು ಸಂಪೂರ್ಣ ಅರ್ಥವನ್ನು ಕೊಡುತ್ತವೆ. ಆದರೆ ಪ್ರತಿಯೊಂದು ವಾಕ್ಯದಲ್ಲಿರುವ ಯಾವುದಾದರೂ ಒಂದು ಪದ ಇಲ್ಲವಾದಲ್ಲಿ ಆ ವಾಕ್ಯ ಪೂರ್ಣ ಅರ್ಥ ಕೊಡದೆ ಪ್ರಶ್ನೆ ಮೂಡುವಂತೆ ಮಾಡುತ್ತದೆ.

**ಉದಾ :** ಮೊದಲ ವಾಕ್ಯದಲ್ಲಿರುವ **'ಜಿಂಕೆ'** ಪದ ಇಲ್ಲವಾದರೆ ಹುಲ್ಲನ್ನು ತಿಂದುದು ಯಾವುದು? ಎಂಬ ಪ್ರಶ್ನೆ ಮೂಡುತ್ತದೆ. **'ಹುಲ್ಲನ್ನು'** ಪದ ಇಲ್ಲವಾದರೆ ಜಿಂಕೆ ಏನನ್ನು ತಿಂದಿತು ಎಂಬ ಪ್ರಶ್ನೆ ಮೂಡುತ್ತದೆ. **'ತಿಂದಿತು'** ಪದ ಇಲ್ಲವಾದರೆ ಜಿಂಕೆ ಹುಲ್ಲನ್ನು ಏನು ಮಾಡಿತು ಎಂಬ ಪ್ರಶ್ನೆ ಮೂಡುವಂತೆ ಮಾಡುತ್ತದೆ.

©KTBS NOT TO BE REPUBLISHED

ಇಲ್ಲಿ **'ಜಿಂಕೆ'** ಎಂಬುದು **'ಕರ್ತೃಪದ'**; **'ಹುಲ್ಲು'** ಎಂಬುದು **'ಕರ್ಮಪದ'**; **'ತಿಂದಿತು'** ಎಂಬುದು **'ಕ್ರಿಯಾಪದ'**. ಅರ್ಥಪೂರ್ಣ ವಾಕ್ಯ ಎಂದರೆ **ಕರ್ತೃ, ಕರ್ಮ, ಕ್ರಿಯಾಪದ**ಗಳಿಂದ ವ್ಯವಸ್ಥಿತವಾಗಿ ಕೂಡಿರುವ ಪದಸಮೂಹ. ಆದರೆ ಕೆಲವು ಕ್ರಿಯಾಪದಗಳು ಕರ್ಮಪದವನ್ನು ಅಪೇಕ್ಷಿಸುವುದಿಲ್ಲ. ಅಂತಹ ಕ್ರಿಯಾಪದದ ಜತೆಗೆ ಕರ್ತೃಪದ ಇದ್ದರೆ ಅರ್ಥಪೂರ್ಣ ವಾಕ್ಯವಾಗುತ್ತದೆ.

## ವಾಕ್ಯ ಪ್ರಭೇದಗಳು

ವಾಕ್ಯಗಳನ್ನು **ಸಾಮಾನ್ಯ, ಸಂಯೋಜಿತ ಮತ್ತು ಮಿಶ್ರವಾಕ್ಯ** ಎಂಬುದಾಗಿ ಮೂರು ವಿಭಾಗ ಮಾಡಲಾಗಿದೆ.

೧. **ಸಾಮಾನ್ಯವಾಕ್ಯ :** ೧. ಸುಬ್ರಹ್ಮಣ್ಯಮ್ ನಮ್ಮನ್ನು ವಿಶ್ವಾಸದಿಂದ ಸ್ವಾಗತಿಸಿದರು.
೨. ಹತ್ತನೆಯ ಶತಮಾನದವರೆಗೆ ಗಂಗರು ತಲೆಯೆತ್ತಿ ಬಾಳಿದರು.

ಈ ಎರಡೂ ವಾಕ್ಯಗಳು ಒಂದೊಂದು ಪೂರ್ಣ ಕ್ರಿಯಾಪದದೊಡಗೂಡಿ ಸ್ವತಂತ್ರ ವಾಕ್ಯಗಳಾಗಿವೆ. **ಒಂದು ಪೂರ್ಣ ಕ್ರಿಯಾಪದದೊಡನೆ ಸ್ವತಂತ್ರ ವಾಕ್ಯವಾಗಿರುವ ವಾಕ್ಯಗಳೇ ಸಾಮಾನ್ಯವಾಕ್ಯಗಳು.**

೨. **ಸಂಯೋಜಿತವಾಕ್ಯ :** ಪಾಂಡವರ ಯಜ್ಞ ತುರಗ ಮಣಿಪುರವನ್ನು ಪ್ರವೇಶಿಸಿತು; ಆಗ ಬಭ್ರುವಾಹನನು ಅದನ್ನು ಕಟ್ಟಿ ಹಾಕಿದನು ; ಆದ್ದರಿಂದ ಬಭ್ರುವಾಹನನಿಗೂ ಅರ್ಜುನನಿಗೂ ಯುದ್ಧ ನಡೆಯಿತು.

ಇಲ್ಲಿ ಮೂರು ಸ್ವತಂತ್ರ ವಾಕ್ಯಗಳು **'ಆಗ', 'ಆದ್ದರಿಂದ'** ಪದಗಳ ಸಹಾಯದಿಂದ ಒಂದಕ್ಕೊಂದು ಸಂಯೋಜನೆಗೊಂಡು ಒಂದು ಪೂರ್ಣಾರ್ಥದ ವಾಕ್ಯವಾಗಿದೆ. **ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಎರಡು ಅಥವಾ ಹೆಚ್ಚು ಉಪವಾಕ್ಯಗಳು ಸೇರಿ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು ಸಂಯೋಜಿತ ವಾಕ್ಯ.**

೩. **ಮಿಶ್ರವಾಕ್ಯ :** ಗಾಯತ್ರಿ ಗಾಯನಸ್ಪರ್ಧೆಯಲ್ಲಿ ಗೆದ್ದಳಾದರೂ ಅವಳಿಗೆ ಬಹುಮಾನ ಸ್ವೀಕರಿಸಲು ಸಾಧ್ಯವಾಗದಿದ್ದಾಗ ಆಕೆ ತುಂಬಾ ನೊಂದುಕೊಂಡಳು.

ಇಲ್ಲಿ **'ಆಕೆ ತುಂಬಾ ನೊಂದುಕೊಂಡಳು'** ಎಂಬ ಪ್ರಧಾನ ವಾಕ್ಯಕ್ಕೆ **'ಗಾಯತ್ರಿ ಗಾಯನ ಸ್ಪರ್ಧೆಯಲ್ಲಿ ಗೆದ್ದಳು'; 'ಅವಳಿಗೆ ಬಹುಮಾನ ಸ್ವೀಕರಿಸಲು ಸಾಧ್ಯವಾಗಲಿಲ್ಲ'** ಎಂಬ ಉಪವಾಕ್ಯಗಳು ಅಧೀನವಾಗಿ **'ಮಿಶ್ರವಾಕ್ಯ'**ವಾಗಿದೆ.

**ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದರೆ ಅಂತಹ ವಾಕ್ಯವೇ ಮಿಶ್ರವಾಕ್ಯ.**

@KTBS NOT TO BE REPUBLISHED

## ಅಭ್ಯಾಸ ಚಟುವಟಿಕೆ

**ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ**

೧. ಲಿಂಗದ ವಿಧಗಳಾವುವು?

೨. ಬಹುವಚನವನ್ನು ನಿದರ್ಶನದ ಮೂಲಕ ವಿವರಿಸಿ.

೩. ವಾಕ್ಯ ಎಂದರೇನು?

೪. ವಾಕ್ಯ ಪ್ರಭೇದಗಳ ಪರಿಚಯ ಮಾಡಿ.

## ಪ್ರಾಯೋಗಿಕ ಭಾಷಾಭ್ಯಾಸ

**೧. ಕೊಟ್ಟಿರುವ ಪದಗಳನ್ನು ಪುಲ್ಲಿಂಗ, ಸ್ತ್ರೀಲಿಂಗ ಮತ್ತು ನಪುಂಸಕ ಲಿಂಗಗಳಾಗಿ ವರ್ಗೀಕರಿಸಿ.**

ರಾಹುಲ ಯಶೋಧರೆ ಸಖಿ ಅಮ್ಮಾಜಿ ರಾಜ ವಿಧಿ ಅಂಬಿಕೆ

ಲೋಕ ಅರಮನೆ ತಂದೆ ಸನ್ಯಾಸ ಸತಿ ಹುಲಿ ಕನಸು

**೨. ಕೊಟ್ಟಿರುವ ಪದಗಳ ಬಹುವಚನ ರೂಪ ಬರೆಯಿರಿ.**

ನಾನು ಅಮ್ಮ ಕಿರಿಯ ರಾಜ ನನ್ನ ಲೋಕ ಬಾಲಕ

ಮಗು ತಾಯಿ ದೇವ ಸ್ವರ ತಾತ ನೀನು

**೩. ಕೊಟ್ಟಿರುವ ವಾಕ್ಯಗಳಲ್ಲಿರುವ ಕರ್ಮ, ಕ್ರಿಯಾ ಹಾಗೂ ಕರ್ತೃಪದಗಳನ್ನು ಆರಿಸಿ ಬರೆಯಿರಿ.**

೧. ಅಮ್ಮ ಅಣ್ಣನನ್ನು ಕರೆಯುವೆನು.

೨. ಸನ್ಯಾಸವನು ಕೊಂಡು ಪತಿಯನ್ನು ಸೇರುವೆನು.

೩. ಸಿದ್ಧಾರ್ಥನು ಕರೆಯನ್ನು ಕೇಳಿಸಿಕೊಳ್ಳಲಿಲ್ಲ.

**೪. ಕೊಟ್ಟಿರುವ ಸಾಮಾನ್ಯ ವಾಕ್ಯಗಳನ್ನು ಸಂಯೋಜಿತ ವಾಕ್ಯವಾಗಿ ಪರಿವರ್ತಿಸಿ ಬರೆಯಿರಿ.**

- ವಾಸುವಿನ ತಲೆಗೆ ಹಾಕಿದ ಎಣ್ಣೆ ಹಣೆಯ ಮೂಲಕ ಇಳಿದು ಕಣ್ಣುಗಳನ್ನು ಪ್ರವೇಶಿಸಿತು.
- ಅವನ ಕಣ್ಣುಗಳು ಉರಿಯತೊಡಗಿದವು.
- ಅವನು ಕಣ್ಣುಗಳನ್ನು ಬಟ್ಟೆಯಿಂದ ಉಜ್ಜತೊಡಗಿದನು.

## ಪೂರಕ ಓದು

✦ ಡಾ॥ ಪ್ರಭುಶಂಕರ್‌ರವರ **'ಬುದ್ಧ ನಾಟಕ ಚಕ್ರ'** ಗೀತಾನಾಟಕಗಳನ್ನು ಓದಿರಿ.

✦ ದ.ರಾ. ಬೇಂದ್ರೆಯವರ **'ಬುದ್ಧ'** ಕವನವನ್ನು ಓದಿರಿ.

✦ ✦ ✦ ✦ ✦

NOT TO BE REPUBLISHED ©KTBS

## ಪದ್ಯ ಭಾಗ

L9B1V4

# ೧. ಕನ್ನಡಿಗರ ತಾಯಿ

**– ರಾಷ್ಟ್ರಕವಿ ಎಂ. ಗೋವಿಂದ ಪೈ**

**ಪ್ರವೇಶ :** ಜಗತ್ತಿನಲ್ಲಿರುವ ಎಲ್ಲಾ ಭಾಷೆಗಳಲ್ಲಿಯೂ ನಾಡು – ನುಡಿಯ ಮೇಲಿನ ಅಭಿಮಾನವು ಆಯಾಯ ಭಾಷೆಯ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿಯೂ ಅಭಿವ್ಯಕ್ತಗೊಂಡಿದೆ. ಇವು ಜನಮಾನಸದ ಅಮೃತಧಾರೆಗಳಾಗಿವೆ. ನಾಡು–ನುಡಿಯ ಆತ್ಮಾಭಿಮಾನದಿಂದ ಕೂಡಿದ ದೇಶಾಭಿಮಾನವು ನಾಡಿನ ಏಳಿಗೆಗಾಗಿ ದುಡಿಯುವಂತೆ ನಮ್ಮೆಲ್ಲರನ್ನು ಪ್ರೇರೇಪಿಸುತ್ತವೆ. ಭವ್ಯ ಪರಂಪರೆಯುಳ್ಳ ಕರುನಾಡು ಅನೇಕ ಪ್ರಾಂತ್ಯಗಳಲ್ಲಿ ಹರಿದು ಹಂಚಿ ಹೋಗಿದ್ದ ಕಾಲದಲ್ಲಿ ಕರ್ನಾಟಕ ಏಕೀಕರಣದ ಕನಸನ್ನು ಕಂಡವರು ಅನೇಕರು. ಕನ್ನಡದ ಮಕ್ಕಳೆಲ್ಲ ಒಂದಾಗಿ ಬನ್ನಿ, ಉದಯವಾಗಲಿ ಚೆಲುವ ಕನ್ನಡ ನಾಡು, ಬಾರಿಸು ಕನ್ನಡ ಡಿಂಡಿಮವ, ಹಚ್ಚೇವು ಕನ್ನಡದ ದೀಪ ಎಂದೆಲ್ಲ ಅನೇಕರು ನಾಡು ನುಡಿಯ ಶ್ರೇಷ್ಠತೆ, ಪಾವಿತ್ರ್ಯತೆಯನ್ನು ಸಾರುವ ಮೂಲಕ ನವೋದಯ ಸಾಹಿತ್ಯಕ್ಕೆ ನಾಂದಿ ಹಾಡಿದರು. ಜೊತೆಗೆ ಕನ್ನಡಿಗರನ್ನು ಒಗ್ಗೂಡಿಸುವ ಕಾರ್ಯದಲ್ಲಿ ತೊಡಗಿದರು. ಈ ನಿಟ್ಟಿನಲ್ಲಿ ಮೂಡಿಬಂದ ಕವನಗಳಲ್ಲಿ ಇದು ಒಂದಾಗಿದೆ.

©KTBS
NOT TO BE REPUBLISHED

ತಾಯೆ ಬಾರ, ಮೊಗವ ತೋರ, ಕನ್ನಡಿಗರ ಮಾತೆಯೆ!
ಹರಸು ತಾಯೆ, ಸುತರ ಕಾಯೆ, ನಮ್ಮ ಜನ್ಮದಾತೆಯೆ!
ನಮ್ಮ ತಪ್ಪನೆನಿತೊ ತಾಳ್ವೆ,
ಅಕ್ಕರೆಯಿಂದೆಮ್ಮನಾಳ್ವೆ,
ನೀನೆ ಕಣಾ ನಮ್ಮ ಬಾಳ್ವೆ,
ನಿನ್ನ ಮರೆಯಲಮ್ಮೆವು!
ತನು ಕನ್ನಡ, ಮನ ಕನ್ನಡ, ನುಡಿ ಕನ್ನಡವೆಮ್ಮವು. ॥೧॥

ಹಣ್ಣನೀವ ಕಾಯನೀವ ಪರಿಪರಿಯ ಮರಂಗಳೊ,
ಪತ್ರಮೀವ ಪುಷ್ಪಮೀವ ಲತೆಯ ತರತರಂಗಳೊ,
ತೆನೆಯ ಕೆನೆಯ ಗಾಳಿಯೊ,
ಖಗಮೃಗೋರಗಾಳಿಯೊ,
ನದಿ ನಗರ ನಗಾಳಿಯೊ!
ಇಲ್ಲಿಲ್ಲದುದುಳಿದುದೆ?
ಜೇನು ಸುರಿವ ಹಾಲು ಹರಿವ ದಿವಂ ಭೂಮಿಗಿಳಿದುದೆ? ॥೨॥



ಜೈನರಾದ ಪೂಜ್ಯಪಾದ ಕೊಂಡಕುಂದವರ್ಯರ,
ಮಧ್ವಯತಿಯೆ ಬಸವಪತಿಯೆ ಮುಖ್ಯ ಮತಾಚಾರ್ಯರ,
ಶರ್ವ ಪಂಪ ರನ್ನರ,
ಲಕ್ಷ್ಮೀಪತಿ ಜನ್ನರ,
ಷಡಕ್ಷರಿ ಮುದ್ದಣ್ಣರ,
ಪುರಂದರವರೇಣ್ಯರ,
ತಾಯೆ, ನಿನ್ನ ಬಸಿರೆ ಹೊನ್ನಗನಿ ವಿದ್ಯಾರಣ್ಯರ! ।೩॥

ಹಳೆಯ ಬೀಡ ಬೇಲನಾಡ ಮಾಡಮೆನಿತೊ ಸುಂದರಂ!
ಬಿಳಿಯ ಕೊಳದ ಕಾರಕಳದ ನಿಡುಕರೆನಿತೊ ಬಂಧುರಂ!
ಇಲ್ಲಿಲ್ಲದ ಶಿಲ್ಪಮಿಲ್ಲ;
ನಿನ್ನ ಕಲ್ಲೆ ನುಡಿವುದಲ್ಲ!
ಹಿಂಗತೆಯಿನಿವಾಲ ಸೊಲ್ಲ
ನೆಮ್ಮತೃಷೆಗೆ ದಕ್ಕಿಸು!
ಹೊಸತು ಕಿನ್ನರಿಯಲಿ ನಿನ್ನ ಹಳೆಯ ಹಾಡನುಕ್ಕಿಸು! ॥೪॥

@KTBS NOT TO BE REPUBLISHED

ತನ್ನ ಮರೆಯ ಕಂಪನರಿಯದದನೆ ಹೊರಗೆ ಹುಡುಕುವ
ಮೃಗದ ಸೇಡು ನಮ್ಮ ಪಾಡು ಪರರ ನುಡಿಗೆ ಮಿಡುಕುವ!
ಕನ್ನಡ ಕಸ್ತೂರಿಯನ್ನ
ಹೊಸತುಸಿರಿಂ ತೀಡದನ್ನ
ಸುರಭಿ ಎಲ್ಲಿ? ನೀನದನ್ನ
ನವಶಕ್ತಿಯಿನೆಬ್ಬಿಸು–
ಹೊಸ ಸುಗಂಧದೊಸಗೆಯಿಂದ ಜಗದಿ ಹೆಸರ ಹಬ್ಬಿಸು। ॥೫॥

ನಮ್ಮೆದೆಯಂ ತಾಯೆ ಬಲಿಸು,
ಎಲ್ಲರ ಬಾಯಲ್ಲಿ ನೆಲಸು,
ನಮ್ಮ ಮನಮನೊಂದೆ ಕಲಸು!
ಇದನೊಂದನೆ ಕೋರುವೆ!
ನಿನ್ನ ಮೂರ್ತಿ ಜಗತ್ಕೀರ್ತಿ ಎಂದಿಗೆಮಗೆ ತೋರುವೆ? ॥೬॥



## ಕೃತಿಕಾರರ ಪರಿಚಯ

**ರಾಷ್ಟ್ರಕವಿ ಎಂ. ಗೋವಿಂದ ಪೈ** ಅವರು **ಕಾಸರಗೋಡು ಜಿಲ್ಲೆಯ ಮಂಜೇಶ್ವರದಲ್ಲಿ ೨೩.೦೩.೧೮೮೩**ರಲ್ಲಿ ಜನಿಸಿದರು. ತಂದೆ ಸಾಹುಕಾರ ತಿಮ್ಮಪೈ, ತಾಯಿ ದೇವಕಿಯಮ್ಮ. ಬಿ.ಎ. ಪದವಿಯನ್ನು ಪಡೆದಿದ್ದ ಗೋವಿಂದ ಪೈ ಅವರು ದೇಶೀ ಭಾಷೆಗಳಲ್ಲಲ್ಲದೆ ವಿದೇಶಿ ಭಾಷೆಗಳ ಪಾಂಡಿತ್ಯವನ್ನುಳ್ಳವರಾಗಿದ್ದರು. ಪ್ರಾಸ ಬಿಟ್ಟು ಪದ್ಯ ರಚಿಸಿದ ಮೊದಲ ಕವಿ ಎಂಬ ಹೆಗ್ಗಳಿಕೆಗೂ ಪಾತ್ರರಾದವರು. ಸಂಶೋಧಕ, ವಿಮರ್ಶಕ, ಅನುವಾದಕರಾಗಿಯೂ ಜನಪ್ರಿಯರಾದ ರಾಷ್ಟ್ರಕವಿ ಗೋವಿಂದ ಪೈ ಅವರ (**'ಸುವಾಸಿನಿ'**) ಮೊದಲ ಕವಿತೆ **೧೯೦೦** ರಲ್ಲಿ **ಸುವಾಸಿನಿ** ಪತ್ರಿಕೆಯಲ್ಲಿ ಪ್ರಕಟವಾಯಿತು. ಅವರ ಕವನ ಸಂಕಲನಗಳು ಇಂತಿವೆ. **ಗಿಳಿವಿಂಡು, ನಂದಾದೀಪ** ಮೊದಲಾದವು. **ನವೀನ ಚಂದ್ರಸೇನರ ಬಂಗಾಳಿ ಕೃಷ್ಣ ಚರಿತೆಯ** ಗದ್ಯಾನುವಾದ, **'ಸಿಂಗಾಲ ಸುತ್ತ'** ಬೌದ್ಧ ಸೂತ್ರಗಳ ಕನ್ನಡ ಅನುವಾದ. ಅಲ್ಲದೇ **೩೫ ವೃತ್ತ**ಗಳುಳ್ಳ ಪ್ರಾಸ ರಹಿತ **ಗೊಮ್ಮಟ ಜಿನಸ್ತುತಿ**ಯನ್ನು ರಚಿಸಿ ಪ್ರಕಟಿಸಿದರು. **ರವೀಂದ್ರನಾಥ ಠಾಕೂರ್, ಅಹಮ್ಮದ್ ಇಕ್ಬಾಲ್, ಉಮರ್ ಖಯ್ಯಾಂನ ರುಬಾಯಿ ಎಂಬ ಜೀವನಚರಿತ್ರೆ**ಗಳನ್ನು ಭಾಷಾಂತರಿಸಿದ್ದಾರೆ. **ವೈಶಾಖ ಮತ್ತು ಗೊಲ್ಗೊಥಾ ಎಂಬ** ಖಂಡಕಾವ್ಯಗಳನ್ನು ಪ್ರಕಟಿಸಿದ್ದಾರೆ.

NOT TO BE REPUBLISHED
@KTBS

ಜಪಾನಿನ **ನೋ ನಾಟಕ**ಗಳನ್ನು ಕನ್ನಡಕ್ಕೆ ಅನುವಾದಿಸಿರುವರಲ್ಲದೇ **ಚಿತ್ರಭಾನು, ಹೆಬ್ಬೆರಳು, ಪಾರ್ಶ್ವನಾಥ ತೀರ್ಥಂಕರ ಚರಿತೆ, ಬಾಹುಬಲಿ ಗೊಮ್ಮಟೇಶ್ವರ ಚರಿತೆ, ಭಗವಾನ್ ಬುದ್ಧ** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ತಮ್ಮ ಜೀವಿತಾವಧಿಯನ್ನು ಸಂಶೋಧನೆ, ಸಾಹಿತ್ಯಕ್ಕಾಗಿ ಮೀಸಲಿಟ್ಟಿದ್ದ ಅವರಿಗೆ **೧೯೪೯** ರಲ್ಲಿ ಮದ್ರಾಸ್ ಸರ್ಕಾರ **ರಾಷ್ಟ್ರಕವಿ** ಬಿರುದು ನೀಡಿ ಗೌರವಿಸಿದೆ. ಇವರು ಕನ್ನಡದ ಮೊದಲ ರಾಷ್ಟ್ರಕವಿ ಹೆಗ್ಗಳಿಕೆಗೆ ಪಾತ್ರರಾದವರು. ಹೊಗಳಿಕೆ ಮತ್ತು ಪ್ರಚಾರಕ್ಕೆ ಹಾತೊರೆಯದ ಇವರು **೧೯೫೦** ರಲ್ಲಿ ಬೊಂಬಾಯಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ೦೬.೦೯.೧೯೬೩ ರಲ್ಲಿ ಗೋವಿಂದ ಪೈ ಅವರು ದೈವಾಧೀನರಾದರು.

ಪ್ರಸ್ತುತ ಪದ್ಯವನ್ನು **ಎನ್. ಎಸ್. ರಘುನಾಥ್** ಅವರು ಸಂಪಾದಿಸಿರುವ **ಶತಮಾನದ ಮಕ್ಕಳ ಸಾಹಿತ್ಯ** ಸಂಕಲನದಿಂದ ಆರಿಸಿ ಸಂಪಾದಿಸಿ ನಿಗದಿಪಡಿಸಿದೆ.

## ಆಶಯ

ಇದು ಕರ್ನಾಟಕ ಏಕೀಕರಣದ ಪೂರ್ವದಲ್ಲಿ ಕನ್ನಡತಾಯಿಯನ್ನು ಸ್ತುತಿಸಿ ಬರೆದ ಕವನ. ಕನ್ನಡತಾಯಿ ತನ್ನ ಮುಖವನ್ನು ತೋರುವ ಮೂಲಕ ಕನ್ನಡದ ಮಕ್ಕಳನ್ನು ಒಂದಾಗಿಸಬೇಕು ಎನ್ನುವುದು ಪದ್ಯದ ಮುಖ್ಯ ಆಶಯ. ಕನ್ನಡನಾಡಿನಲ್ಲಿ ಎಲ್ಲಾ ಸಂಪತ್ತು ಇದೆ. ತಾಯಿಯ ಮುಖ ಕಂಡಾಗ ಅದೆಲ್ಲವೂ ಗೋಚರವಾಗುತ್ತದೆ. ಹೀಗೆ ಗೋಚರಿಸಿದಾಗ ಮಾತ್ರ ಕನ್ನಡ ತಾಯಿಯ ಕೀರ್ತಿ ಜಗತ್ತಿನಾದ್ಯಂತ ಪಸರಿಸಲು ಸಾಧ್ಯ. ಅದಕ್ಕಾಗಿ ಕನ್ನಡತಾಯಿ ಎಲ್ಲರ ನಡೆ–ನುಡಿ, ಆಚಾರ–ವಿಚಾರಗಳಲ್ಲಿ ನೆಲೆಯಾಗಬೇಕು. ಕನ್ನಡ ತಾಯಿ ಜನ್ಮದಾತೆಗೆ ಸಮನಾಗಿರುವುದರಿಂದ ಅವಳ ಹರಕೆ–ಹಾರೈಕೆ ನಮಗೆ ಶ್ರೀರಕ್ಷೆ. ಕನ್ನಡಿಗರಿಗೆ ಕನ್ನಡವೇ ಉಸಿರು, ಕನ್ನಡಿಗರ ಧಮನಿಧಮನಿಗಳಲ್ಲಿಯೂ ಕನ್ನಡವೇ ಉಸಿರಾಗಬೇಕು. ಕನ್ನಡ ನಾಡು ನುಡಿಯ ಶ್ರೇಷ್ಠತೆ, ಭವ್ಯಪರಂಪರೆ, ಇತಿಹಾಸ, ಪ್ರಾಕೃತಿಕ, ಸಾಹಿತ್ಯಿಕ, ವಾಸ್ತುಶಿಲ್ಪಗಳ ಭವ್ಯತೆಯಿಂದ ಜಗತ್ತಿನೆಲ್ಲಡೆ ಹರಡಬೇಕೆಂಬುದು ಕವಿಯ ಆಶಯವಾಗಿದೆ.

NOT TO BE REPUBLISHED @KTBS

## ಪದಗಳ ಅರ್ಥ

ಆಳ್ವೆ – ಆಳುವೆ ; ಒಸಗೆ– ಸಂತೋಷ, ಶುಭವಾರ್ತೆ ; ಕಾರಕಳ – ಕಾರ್ಕಳ (ಉಡುಪಿ ಜಿಲ್ಲೆಯ ಒಂದು ತಾಲೂಕು ಕೇಂದ್ರ); ಕೆನೆ – ಸಾರ, ತಿರುಳು ; ತಾಳ್ವೆ – ಸಹಿಸುವೆ ; ತೃಷೆ – ಬಾಯಾರಿಕೆ ; ದಿವಂ – ಆಕಾಶ ; ನಗಾಳಿ – ಪರ್ವತಗಳ ಸಮೂಹ ; ನಿಡುಕರು –ನಿಡಿದಾಗಿ ನಿಂತಿರುವ (ನಿಡು ನಿಂದಿರುವ) ಗೊಮ್ಮಟ ಮೂರ್ತಿ ; ಬಸಿರು – ಗರ್ಭ, ಗರ್ಭಾಶಯ; ಬಿಳಿಯ ಕೊಳ – ಬೆಳಗೊಳ, ಶ್ರವಣಬೆಳಗೊಳ; ಬೇಲನಾಡು – ಬೇಲೂರು; ಮೊಗ – ಮುಖ; ಲತೆ – ಬಳ್ಳಿ ; ಶರ್ವ – ನೃಪತುಂಗನ ಮತ್ತೊಂದು ಹೆಸರು ; ಸುರಭಿ – ಸುಗಂಧ, ಸುವಾಸನೆ; ನಂದಿನಿ–ಗೋವು.

## ಟಿಪ್ಪಣಿ

**ನಗಾಳಿ** : ನಗ – ಪರ್ವತ ; ಆಳಿ – ಸಮೂಹ – ಪರ್ವತಗಳ ಸಮೂಹ

**ಖಗ** : ಖ – ಆಕಾಶ : ಗ – ಗಮಿಸುವುದು (ಸಂಚರಿಸುವುದು) ಆಕಾಶದಲ್ಲಿ ಸಂಚರಿಸುವುದು – ಪಕ್ಷಿ

**ಖಗಮೃಗೋರಗಾಳಿ** : ಖಗ – ಪಕ್ಷಿ ; ಮೃಗ – ಪ್ರಾಣಿ ; ಉರಗ – ಹಾವು ; ಆಳಿ – ಸಮೂಹ; ಪ್ರಾಣಿ, ಪಕ್ಷಿ, ಹಾವುಗಳ ಸಮೂಹ.

**ಕೊಂಡಕುಂದವರ್ಯ** : ಜೈನಧರ್ಮದಲ್ಲಿ **ದಿಗಂಬರ – ಶ್ವೇತಾಂಬರ** ಎಂಬ ಸಂಪ್ರದಾಯ ಭೇದಗಳು ಹುಟ್ಟುವ ಮೊದಲು ಜೈನಧರ್ಮವು **ಅರ್ಹಂತ, ಅನೇಕಾಂತ** ಎಂಬಿವೇ ಮೊದಲಾದ ಹೆಸರುಗಳಿಂದ ಪ್ರಸಿದ್ಧವಾಗಿತ್ತು. ವಿಕ್ರಮ ಶಕದ ೧೩೬ನೆಯ ವರ್ಷದಲ್ಲಿ ಅಂದರೆ ಕ್ರಿ.ಶ. ೮೦–೮೧ ರಲ್ಲಿ ಅದು **ದಿಗಂಬರ– ಶ್ವೇತಾಂಬರ** ಸಂಪ್ರದಾಯಗಳೆಂದು ಕವಲಾಗುತ್ತಲೇ **ದಿಗಂಬರ** ಸಂಪ್ರದಾಯಕ್ಕೆ **ಮೂಲ ಸಂಘ**ವೆಂದು ಹೆಸರಾಯಿತು. **ಪದ್ಮನಂದಿ** ಎಂಬ ಮೊದಲನೆಯ ಹೆಸರುಳ್ಳ **ಕೊಂಡಕುಂದಾಚಾರ್ಯ**ನು ಈ **ಮೂಲಸಂಘ**ದ ಮುಂದಾಳೆಂದೂ ಒಂದು **ಗಣ**ದ ಒಡೆಯನೆಂದೂ ಕಂಡುಬರುತ್ತದೆ.

**ಹಿಂಗತೆಯಿನಿವಾಲ ಸೊಲ್ಲ** : ಹಿಂಗತೆ – ಹಿನ್ನೆಲೆಯ ಕತೆ (ಬೇಲೂರು, ಹಳೆಬೀಡು ಇತ್ಯಾದಿ ಶಿಲ್ಪಕಲೆಗಳ ಹಿಂದೆ ಇರುವ ಕತೆ) ಇನಿದು – ಇನಿದಾದ, ಸವಿಯಾದ, ರುಚಿಯಾದ, ಪಾಲು–ಹಾಲು; ಸೊಲ್ಲು – ಮಾತು; ಹಿನ್ನೆಲೆಯ ಕಥೆ ಸವಿಯಾದ ಹಾಲಿನಂತಿರುವ ಮಾತುಗಳಿಂದ ಕೂಡಿದೆ.

**ಎಮ್ಮ ತೃಷೆಗೆ ದಕ್ಕಿಸು** : ಎಮ್ಮ – ನಮ್ಮ : ತೃಷೆ – ದಾಹ, ಬಾಯಾರಿಕೆ ; ದಕ್ಕಿಸು – ನೀಡು; ಕರ್ನಾಟಕದ ಶಿಲ್ಪಕಲೆಯ ಇತಿಹಾಸವನ್ನು ತಿಳಿದುಕೊಳ್ಳಬೇಕೆಂಬ ದಾಹವುಳ್ಳ (ಬಯಕೆವುಳ್ಳ) ನಮಗೆ ನೀಡು.

NOT TO BE REPUBLISHED @KTBS

## ಅಭ್ಯಾಸ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ನಮ್ಮನ್ನು ಆಳುವವಳು ಯಾರು?

೨. ಲತೆ ಯಾವುದನೆಲ್ಲಾ ನೀಡುತ್ತದೆ?

೩. ಕನ್ನಡ ತಾಯಿಯ ಬಸಿರ ಹೊನ್ನಗನಿ ಯಾರು?

೪. ಕನ್ನಡ ತಾಯಿಯ ಹಾಡನ್ನು ಯಾವುದರಿಂದ ಉಕ್ಕಿಸಬೇಕು?

೫. ಕನ್ನಡಿಗರ ಪಾಡು ಏನು?

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.**

೧. ಕನ್ನಡ ನಾಡಿನ ಪ್ರಕೃತಿ ವೈಶಿಷ್ಟ್ಯವೇನು?

೨. ಕನ್ನಡದ ಕವಿಶ್ರೇಷ್ಠರ ಹಿರಿಮೆಯೇನು?

೩. ಕನ್ನಡದ ಹೆಸರನ್ನು ಹೇಗೆ ಹಬ್ಬಿಸಬೇಕೆಂದು ಕವಿ ಆಶಿಸುತ್ತಾರೆ?

**ಇ. ಕೊಟ್ಟಿರುವ ಪ್ರಶ್ನೆಗಳಿಗೆ ನಾಲ್ಕು-ಐದು ವಾಕ್ಯಗಳಲ್ಲಿ ಉತ್ತರಿಸಿ.**

೧. ಕನ್ನಡ ತಾಯಿಯನ್ನು ಮರೆಯಲು ಸಾಧ್ಯವಿಲ್ಲ ಏಕೆ?

೨. ಕವಿ ಕನ್ನಡ ತಾಯಿಯಲ್ಲಿ ಏನೆಂದು ಕೋರುತ್ತಾರೆ?

೩. ಗೋವಿಂದ ಪೈ ಅವರ ಪ್ರಮುಖ ಕೃತಿಗಳಾವುವು?

**ಈ. ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

೧. ಕನ್ನಡಿಗರ ತಾಯಿ ಮೊಗ ತೋರಬೇಕೆಂದು ಕವಿ ಏಕೆ ಬಯಸುತ್ತಾರೆ?ವಿವರಿಸಿ.

೨. ಕನ್ನಡ ನಾಡಿನ ಕವಿ ಹಾಗೂ ಕಲೆಯ ಮಹತ್ವವೇನು? – ವಿವರಿಸಿ.

**ಉ. ಈ ಹೇಳಿಕೆಗಳಿಗೆ ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.**

೧. "ಖಗ ಮೃಗೋರಗಾಳಿಯೋ"

೨. "ನಿನ್ನ ಕಲ್ಲೆ ನುಡಿವುದಲ್ಲ!"

೩. "ನಮ್ಮ ಮನಮನೊಂದೆ ಕಲಸು!"

@KTBS NOT TO BE REPUBLISHED

**ಊ. ಹೊಂದಿಸಿ ಬರೆಯಿರಿ.**

| ಅ | ಬ |
|---|---|
| ೧. ಬೇಲನಾಡು | ಬಾಹುಬಲಿ |
| ೨. ಶರ್ವ | ಖಂಡಕಾವ್ಯ |
| ೩. ಗೊಲ್ಗೊಥಾ | ಕವನಸಂಕಲನ |
| ೪. ಗಿಳಿವಿಂಡು | ಹಳೆಬೀಡು |
| | ಬೇಲೂರು |
| | ನೃಪತುಂಗ |

**ಋ. ಬಿಟ್ಟ ಸ್ಥಳ ತುಂಬಿ.**

೧. ಹರಸು ತಾಯೆ ______ ಕಾಯೆ

೨. ಹಾಲು ಹರಿವ ______ ಭೂಮಿಗಿಳಿದುದೆ?

೩. ಜೈನರಾದ ಪೂಜ್ಯಪಾದ ______

೪. ______ ಸೇಡು ನಮ್ಮ ಪಾಡು

**ಎ. ಈ ಪದ್ಯಭಾಗದಲ್ಲಿನ ಅಂತ್ಯ ಪ್ರಾಸ ಪದಗಳನ್ನು ಬರೆಯಿರಿ.**

© KTBS NOT TO BE REPUBLISHED

## ಸೈದ್ಧಾಂತಿಕ ಭಾಷಾಭ್ಯಾಸ

### ಗುಣಿತಾಕ್ಷರ ಪರಿಚಯಾತ್ಮಕ ವಿವರ

**ದ್ ವ್ ರ್** ವ್ಯಂಜನಾಕ್ಷರಗಳನ್ನು ಸೇರಿಸಿ ಬರೆದರೆ ಪದ ರಚನೆಯಾಗುವುದಿಲ್ಲ. ಅದರ ಬದಲಿಗೆ **ದ್** + **ಏ** = **ದೇ, ವ್** + **ಅ** = **ವ, ರ್** + **ಉ** = **ರು** ಈ ರೀತಿ ಸ್ವರಾಕ್ಷರಗಳನ್ನು ಸೇರಿಸಿ ಬರೆದರೆ ಅರ್ಥಪೂರ್ಣವಾದ **ದೇವರು** ಎಂಬ ಪದ ರಚನೆ ಆಗುತ್ತದೆ. ಹೀಗೆ ವ್ಯಂಜನಕ್ಕೆ ಸ್ವರ ಸೇರಿದಾಗ ಆಗುವ ಅಕ್ಷರವೇ **ಗುಣಿತಾಕ್ಷರ.**

ಒಂದು ವ್ಯಂಜನಕ್ಕೆ **ಅ** ದಿಂದ **ಔ** ವರೆಗಿನ **೧೩ ಸ್ವರಗಳು** ಸೇರಿದರೆ **೧೩ ಗುಣಿತಾಕ್ಷರಗಳಾಗುತ್ತವೆ. ೩೪ ವ್ಯಂಜನಗಳಿಗೆ** ತಲಾ **೧೩ ಸ್ವರಾಕ್ಷರಗಳನ್ನು** ಸೇರಿಸಲಾಗುತ್ತದೆ. **ಈ ಗುಣಿತಾಕ್ಷರಗಳೇ ಕಾಗುಣಿತ ಅಕ್ಷರಗಳು.** ಅದೇ ರೀತಿ **ಯೋಗವಾಹಗಳನ್ನು** ಸೇರಿಸಿ ಗುಣಿತಾಕ್ಷರಗಳನ್ನು ಮಾಡಲಾಗುತ್ತದೆ.

### ಸಂಯುಕ್ತಾಕ್ಷರ

**ಅಪ್ಪ ಅಮ್ಮ ಅಕ್ಷರ ಅಸ್ತ್ರ** ಮುಂತಾದ ಪದಗಳನ್ನು ಬಳಸುತ್ತೇವೆ. **ಅಪ್ಪ** ಪದದಲ್ಲಿ **ಅ ಪ್ ಪ್ ಅ** ಎಂಬ ನಾಲ್ಕು ಅಕ್ಷರಗಳಿವೆ. ಮೇಲ್ನೋಟಕ್ಕೆ ಎರಡೇ ಅಕ್ಷರಗಳು ಕಾಣುತ್ತವೆ. ಮೊದಲ ಅಕ್ಷರ ಸ್ವರಾಕ್ಷರ. ಎರಡನೆಯ ಅಕ್ಷರದಲ್ಲಿ **ಪ್ ಪ್ ಅ** ಎಂಬ ಮೂರು ಅಕ್ಷರಗಳಿವೆ. ಅವುಗಳಲ್ಲಿ **ಎರಡು ವ್ಯಂಜನಗಳು** ಮತ್ತು **ಒಂದು ಸ್ವರಾಕ್ಷರ.** ಅದೇ ರೀತಿ **ಅಸ್ತ್ರ** ಪದದಲ್ಲಿ

**ಅ ಸ್ ತ್ ರ್ ಅ** ಎಂಬ ಐದು ಅಕ್ಷರಗಳಿವೆ. ಈ ಪದದ ಎರಡನೆಯ ಅಕ್ಷರ **ಸ್ತ್ರ** ದಲ್ಲಿ **ಮೂರು ವ್ಯಂಜನ** ಮತ್ತು **ಒಂದು ಸ್ವರಾಕ್ಷರವಿದೆ.**

**ಎರಡು ಅಥವಾ ಎರಡಕ್ಕಿಂತ ಹೆಚ್ಚು ವ್ಯಂಜನಗಳಿಗೆ ಒಂದು ಸ್ವರ ಸೇರಿ ಆಗುವ ಅಕ್ಷರವೇ ಸಂಯುಕ್ತಾಕ್ಷರ.** ಇದನ್ನು **ದ್ವಿತ್ವಾಕ್ಷರ/ಒತ್ತಕ್ಷರ** ಎಂತಲೂ ಕರೆಯುವರು.

**ಸಂಯುಕ್ತಾಕ್ಷರದಲ್ಲಿ ಸಜಾತಿಯ ಹಾಗೂ ವಿಜಾತಿಯ** ಎಂಬೆರಡು ವಿಧಗಳಿವೆ.

**ಸಜಾತಿಯ ಸಂಯುಕ್ತಾಕ್ಷರ**

**ಅಪ್ಪ, ಅಮ್ಮ, ಲೆಕ್ಕ, ಕಗ್ಗ** ಪದಗಳನ್ನು ಗಮನಿಸಿದಾಗ ಇಲ್ಲಿರುವ ಪ್ರತಿಯೊಂದು ಸಂಯುಕ್ತಾಕ್ಷರದಲ್ಲೂ ಆಯಾ ಜಾತಿಯ ಎರಡೆರಡು ವ್ಯಂಜನಗಳಿವೆ.

**ಒಂದೇ ಜಾತಿಯ ಎರಡು ವ್ಯಂಜನಗಳು ಸ್ವರದ ಸಹಾಯದಿಂದ ಒಟ್ಟಿಗೆ ಸೇರಿ ಆಗುವ ಸಂಯುಕ್ತಾಕ್ಷರವೇ ಸಜಾತಿಯ ಸಂಯುಕ್ತಾಕ್ಷರ.**

**ವಿಜಾತಿಯ ಸಂಯುಕ್ತಾಕ್ಷರ**

**ಅಷ್ಟ, ಆರ್ಯ, ಅಸ್ತ್ರ** ಪದಗಳಲ್ಲಿರುವ ಪ್ರತಿಯೊಂದು ಸಂಯುಕ್ತಾಕ್ಷರದಲ್ಲೂ ಬೇರೆ ಬೇರೆ ಜಾತಿಯ ವ್ಯಂಜನಗಳಿವೆ. ಹೀಗೆ – **ಬೇರೆ ಬೇರೆ ಜಾತಿಯ ವ್ಯಂಜನಗಳು ಸ್ವರದ ಸಹಾಯದಿಂದ ಒಟ್ಟಿಗೆ ಸೇರಿ ಆಗುವ ಸಂಯುಕ್ತಾಕ್ಷರವೇ ವಿಜಾತಿಯ ಸಂಯುಕ್ತಾಕ್ಷರ.**

## ಗಾದೆಗಳ ವಿಸ್ತರಣೆ

'ಗಾದೆ' ಎನ್ನುವುದು ಹೇಳಿಕೆಯ ರೂಪದಲ್ಲಿ ಬಳಕೆಯಾಗುವ ಮಾತು. ಅದು ಹಲವರ ಅನುಭವಗಳ ಮಾತು, ಲೋಕೋಕ್ತಿ, ಜಾಣ ನುಡಿ ಎಂದು ಹೇಳಬಹುದು. ಗಾದೆಯ ಮಾತಿನಲ್ಲಿ ತಿಳಿವಳಿಕೆಯಿದೆ, ನೀತಿ ಇದೆ, ನಗೆಚಾಟಿಕೆಯಿದೆ, ಒಳಿತು ಕೆಡುಕುಗಳ ಸೂಕ್ಷ್ಮತೆಗಳಿವೆ. ಹೀಗಾಗಿಯೇ **ವೇದ ಸುಳ್ಳಾದರೆ ಗಾದೆ ಸುಳ್ಳಾಗದು** ಎಂಬ ಮಾತಿದೆ.

ಗಾದೆಗಳು ಜೀವನದ ಸತ್ಯವನ್ನು ಎತ್ತಿ ಹಿಡಿಯುತ್ತವೆ. ಜ್ಞಾನ ಭಂಡಾರದಲ್ಲಿ ಅವುಗಳ ಪಾತ್ರ ಬಹು ದೊಡ್ಡದು. ಗಾದೆಗಳಿಗೆ ಕಾಲ ದೇಶಗಳ ಮಿತಿಯಿಲ್ಲ. ಅವು ಎಲ್ಲಾ ಕಾಲ ದೇಶಗಳಿಗೂ ಅನ್ವಯವಾಗುವ ಸತ್ಯಗಳು. ನಾವು ಮಾತನಾಡುವಾಗ ಇಲ್ಲವೆ ಬರೆಯುವಾಗ ಗಾದೆಗಳನ್ನು ಸಂದರ್ಭಾನುಸಾರ ಬಳಸುವುದನ್ನು ಕಲಿಯಬೇಕು. ಏಕೆಂದರೆ ಸಾವಿರ ಪದಗಳಲ್ಲಿ ಹೇಳಬಹುದಾದ ವಿಚಾರಗಳನ್ನು ಒಂದು ಗಾದೆ ಹೇಳುತ್ತದೆ. ಹೀಗಾಗಿ ಗಾದೆಗಳು ಕನ್ನಡ ಸಾಹಿತ್ಯದ ಅತ್ಯಮೂಲ್ಯ ಆಸ್ತಿ ಎನ್ನಬಹುದು. ಈ ಸಂಪತ್ತನ್ನು ಉಳಿಸಿಕೊಂಡು ಬೆಳೆಸಿಕೊಂಡು ನಾವು ಹೋಗಬೇಕಾಗಿದೆ.

ಗಾದೆಮಾತುಗಳಲ್ಲಿ ಅಂತರ್ಗತವಾಗಿರುವ ವಿಚಾರಗಳನ್ನು ಸರಳ ಶೈಲಿಯಲ್ಲಿ ಬಿಡಿಸಿ ಹೇಳುವುದು ಒಂದು ಕಲೆ. ಇದನ್ನು ಗಾದೆಗಳ ವಿಸ್ತರಣೆ ಎಂದು ಕರೆಯಲಾಗುತ್ತದೆ. ಗಾದೆಗಳನ್ನು ವಿಸ್ತರಣೆ ಮಾಡುವುದರಿಂದ ನಮ್ಮ ಭಾಷೆ, ಚಿಂತನೆ ಹಾಗು ಅನುಭವಗಳು ಶ್ರೀಮಂತವಾಗುತ್ತವೆ.

©KTBS NOT TO BE REPUBLISHED

**ಗಾದೆಗಳ ವಿಸ್ತರಣೆಯಲ್ಲಿ ಗಮನಿಸಬೇಕಾದ ಅಂಶಗಳು :**

೧. ಗಾದೆಯ ಹೊರ ಅರ್ಥವನ್ನು ಮೊದಲು ವಿವರಿಸಬೇಕು.
೨. ಗಾದೆಯ ಅಂತರಾರ್ಥ ಯಾವ ವಿಚಾರಗಳಿಗೆ ಸಂಬಂಧಿಸಿದೆ ಎಂಬುದನ್ನು ವಿವರಿಸಬೇಕು.
೩. ಗಾದೆಯು ಒಳಗೊಂಡಿರುವ ಸತ್ಯ ಹಾಗೂ ಮೌಲ್ಯಗಳನ್ನು ಸ್ಪಷ್ಟಪಡಿಸಬೇಕು.
೪. ಗಾದೆಯ ವಿಚಾರಗಳಿಗೆ ಪೂರಕವಾಗುವ ಕಥೆ ಇಲ್ಲವೆ ಘಟನೆಗಳನ್ನು ಉದಾಹರಿಸಬೇಕು.
೫. ಗಾದೆಗಳನ್ನು ವಿಸ್ತರಿಸುವಾಗ ಅದೇ ಅರ್ಥ ನೀಡುವ ಇನ್ನಿತರ ಗಾದೆಗಳನ್ನು ಹೆಸರಿಸಬೇಕು
೬. ಗಾದೆಯ ಮೂಲಕ ನಾವು ಕಲಿಯಬೇಕಾದ ಅಥವಾ ತಿಳಿದುಕೊಳ್ಳಬೇಕಾದ ನೀತಿಯನ್ನು ಕೊನೆಯಲ್ಲಿ ಸ್ಪಷ್ಟಪಡಿಸಬೇಕು.

**ಈ ಕೆಳಗಿನ ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯಿರಿ.**

೧. ಮಾತು ಬೆಳ್ಳಿ; ಮೌನ ಬಂಗಾರ.
೨. ಕೈ ಕೆಸರಾದರೆ ಬಾಯಿ ಮೊಸರು.
೩. ಕುಂಬಾರನಿಗೆ ವರುಷ; ದೊಣ್ಣೆಗೆ ನಿಮಿಷ.
೪. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ.
೫. ಹಾಸಿಗೆ ಇದ್ದಷ್ಟು ಕಾಲು ಚಾಚು.
೬. ಅತಿ ಆಸೆ ಗತಿಗೇಡು.
೭. ಬೆಕ್ಕಿಗೆ ಚೆಲ್ಲಾಟ; ಇಲಿಗೆ ಪ್ರಾಣ ಸಂಕಟ.
೮. ಊಟಬಲ್ಲವನಿಗೆ ರೋಗವಿಲ್ಲ; ಮಾತು ಬಲ್ಲವನಿಗೆ ಜಗಳ ಇಲ್ಲ.
೯. ದೇಶ ಸುತ್ತಿ ನೋಡು; ಕೋಶ ಓದಿನೋಡು.
೧೦.ಉಪ್ಪಿಗಿಂತ ರುಚಿಯಿಲ್ಲ; ತಾಯಿಗಿಂತ ಬಂಧುವಿಲ

©KTBS NOT TO BE REPUBLISHED

**ಪಠ್ಯಾಧಾರ ಚಟುವಟಿಕೆ**

**ಅ. ಕೊಟ್ಟಿರುವ ಪದ್ಯಭಾಗವನ್ನು ಕಂಠಪಾಠ ಮಾಡಿ.**

೧. ಜೈನರಾದ ___ ___ ___ ___ ___ ___ ___ವಿದ್ಯಾರಣ್ಯರ! (ಏಳು ಸಾಲು)

**ಆ. ಕವಿತೆಯಲ್ಲಿ ಬರುವ ಮಹಾತ್ಮರ ಭಾವಚಿತ್ರಗಳನ್ನು ಸಂಗ್ರಹಿಸಿ.**

**ಪೂರಕ ಓದು**

- ರಾಷ್ಟ್ರಕವಿ **ಎಂ.ಗೋವಿಂದ ಪೈ** ಅವರ **ಗಿಳಿವಿಂಡು** ಕವನ ಸಂಕಲನದ ಕವಿತೆಗಳನ್ನು ಕಲಿಯಿರಿ.

I9D6J7

# ೨. ಭಾರತೀಯತೆ

– ಕೆ.ಎಸ್. ನರಸಿಂಹಸ್ವಾಮಿ

**ಪ್ರವೇಶ :** ಆಧುನಿಕ ಕನ್ನಡ ಸಾಹಿತ್ಯದ ಕಾವ್ಯಪರಂಪರೆಯಲ್ಲಿ ನವೋದಯ, ನವ್ಯ, ಪ್ರಗತಿಶೀಲ, ಬಂಡಾಯ ಮತ್ತು ದಲಿತ ಎಂಬ ವಿವಿಧ ಮಜಲುಗಳಿವೆ. ನವೋದಯ ಕವಿತೆಗಳಲ್ಲಿ ಪ್ರಕೃತಿಯ ವರ್ಣನೆ, ರಾಷ್ಟ್ರೀಯತೆ ಮತ್ತು ಸಾಂಸ್ಕೃತಿಕ ಹಿರಿಮೆಯನ್ನು ಕವಿಗಳು ತಮ್ಮ ಕವಿತೆಗಳಲ್ಲಿ ಅನಾವರಣಗೊಳಿಸುವುದು ಒಂದು ಮುಖ್ಯ ವಸ್ತುವಾಗಿದ್ದು, ಅದಕ್ಕೊಂದು ಉತ್ತಮ ಉದಾಹರಣೆ ಈ ಕವಿತೆಯಾಗಿದೆ.




NOT TO BE REPUBLISHED

ಆಕಾಶಕ್ಕೆದ್ದು ನಿಂತ ಪರ್ವತ ಹಿಮ ಮೌನದಲ್ಲಿ
ಕರಾವಳಿಗೆ ಮುತ್ತನಿಡುವ ಪೆರ್ದೆರೆಗಳ ಗಾನದಲ್ಲಿ
ಬಯಲ ತುಂಬ ಹಸಿರ ದೀಪ ಹಚ್ಚಿ ಹರಿವ ನದಿಗಳಲ್ಲಿ
ನೀಲಿಯಲ್ಲಿ ಹೊಗೆಯ ಚೆಲ್ಲಿ ಯಂತ್ರಘೋಷವೇಳುವಲ್ಲಿ
ಕಣ್ಣು ಬೇರೆ, ನೋಟವೊಂದು–
ನಾವು ಭಾರತೀಯರು.

ನಾಡಿನೆಲ್ಲ ಗಡಿಗಳಲ್ಲಿ ಬಾನಿನಲ್ಲಿ ಕಡಲಿನಲ್ಲಿ
ನಮ್ಮ ಯೋಧರೆತ್ತಿ ಹಿಡಿದ ನಮ್ಮ ಧ್ವಜದ ನೆರಳಿನಲ್ಲಿ
ಒಂದೆ ನೆಲದ ತೊಟ್ಟಿಲಲ್ಲಿ ಬೆಳೆದ ನಮ್ಮ ಕೊರಳಿನಲ್ಲಿ
ನಮ್ಮ ಯುಗದ ದನಿಗಳಾಗಿ ಮೂಡಿದೆಲ್ಲ ಹಾಡಿನಲ್ಲಿ
ಭಾಷೆ ಬೇರೆ, ಭಾವವೊಂದು–
ನಾವು ಭಾರತೀಯರು.

ನಾಡಿಗಾಗಿ ತನುವ ತೆತ್ತ ಹುತಾತ್ಮರ ಸ್ಮರಣೆಯಲ್ಲಿ
ನಮ್ಮ ಕಷ್ಟದಲ್ಲು ನೆರೆಗೆ ನೆರಳನೀವ ಕರುಣೆಯಲ್ಲಿ
ದಾರಿ ಬಳಸಿ ಏರುವಲ್ಲಿ ಬಿರುಗಾಳಿಯೆ ಮೊಳಗುವಲ್ಲಿ
ನಮ್ಮ ಗುರಿಯ ಬೆಳಕಿನೆಡೆಗೆ ನಡೆವ ಧೀರ ಪಯಣದಲ್ಲಿ
ಎಲ್ಲೆ ಇರಲಿ, ನಾವು ಒಂದು–
ನಾವು ಭಾರತೀಯರು.

NOT TO BE REPUBLISHED ©KTBS



## ಕೃತಿಕಾರರ ಪರಿಚಯ

ಆಧುನಿಕ ಕಾವ್ಯ ಸಂದರ್ಭದ ಪ್ರಮುಖ ಕವಿಗಳಲ್ಲಿ ಒಬ್ಬರಾದ **ಕೆ.ಎಸ್. ನರಸಿಂಹಸ್ವಾಮಿ** ಅವರು **೨೬-೦೧-೧೯೧೫ ರಲ್ಲಿ ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲೂಕಿನ ಕಿಕ್ಕೇರಿಯಲ್ಲಿ** ಜನಿಸಿದರು. ಇವರ ಮೊದಲ ಕವನ ಸಂಕಲನ **ಮೈಸೂರು ಮಲ್ಲಿಗೆ** ೧೯೪೨ರಲ್ಲಿ ಪ್ರಕಟವಾಯಿತು. ಇವರು **ಶಿಲಾಲತೆ, ಐರಾವತ, ನವಪಲ್ಲವ, ಇರುವಂತಿಗೆ, ದೀಪದ ಮಲ್ಲಿ, ಮನೆಯಿಂದ ಮನೆಗೆ, ತೆರೆದ ಬಾಗಿಲು** ಮೊದಲಾದ ಕವನ ಸಂಕಲನಗಳನ್ನು ರಚಿಸಿದ್ದಾರೆ. ೧೯೭೭ ರಲ್ಲಿ ಇವರ **ತೆರೆದ ಬಾಗಿಲು** ಎಂಬ **ಕವನ ಸಂಗ್ರಹಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.** ೧೯೯೦ರಲ್ಲಿ ಮೈಸೂರಿನಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಇವರ **ದುಂಡು ಮಲ್ಲಿಗೆ** ಕವನ ಸಂಕಲನಕ್ಕೆ ಕರ್ನಾಟಕ ಸರ್ಕಾರದ ಪ್ರತಿಷ್ಠಿತ ಪಂಪ ಪ್ರಶಸ್ತಿ ಲಭಿಸಿದೆ. ಇವರನ್ನು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ **ಪ್ರೇಮಕವಿ** ಎಂದೇ ಗುರುತಿಸಿದೆ. ೨೦೦೩ರಲ್ಲಿ ದೈವಾಧೀನರಾದರು. ಪ್ರಸ್ತುತ **ಭಾರತೀಯತೆ** ಕವನವನ್ನು **ಕೆ. ಎಸ್. ನರಸಿಂಹಸ್ವಾಮಿ** ಅವರ **ನವಪಲ್ಲವ** ಕವನ ಸಂಕಲನ ದಿಂದ ಆರಿಸಿಕೊಂಡಿದೆ.

## ಆಶಯ

**ಭಾರತೀಯತೆ** ಕವನದಲ್ಲಿ ಕವಿ ಭಾರತೀಯರ ಏಕತೆಯನ್ನು ಕುರಿತು ಅಭಿಮಾನದಿಂದ ಹೇಳಿದ್ದಾರೆ. ಭಾರತ ದೇಶದ ಪ್ರಾಕೃತಿಕ ಸೌಂದರ್ಯ, ಜನರ ಜೀವನ ಶೈಲಿ, ಸಾಂಸ್ಕೃತಿಕ ಪರಂಪರೆ, ಭಿನ್ನತೆಯಲ್ಲಿ ಏಕತಾಭಾವ, ದೇಶಭಕ್ತಿ, ತ್ಯಾಗ, ಪರೋಪಕಾರಬುದ್ಧಿ ಮುಂತಾದ ಉತ್ಕೃಷ್ಟ ಗುಣಗಳನ್ನು ಕವಿ ಇಲ್ಲಿ ವಿಶದೀಕರಿಸಿದ್ದಾರೆ.

* * *

## ಪದಗಳ ಅರ್ಥ

ಹಿಮ – ಮಂಜು ; ಕರಾವಳಿ – ಸಮುದ್ರತೀರ ; ಪೆರ್ದೆರೆ – ದೊಡ್ಡ ಅಲೆ ; ಘೋಷ – ಗಟ್ಟಿಯಾಗಿ ಹೇಳುವುದು ; ಗಡಿ – ಸೀಮೆ, ಎಲ್ಲೆ ; ಯೋಧ – ಸೈನಿಕ ; ಕೊರಳು – ಧ್ವನಿ ; ತನು–ದೇಹ; ತೆರು – ನೀಡು, ತ್ಯಾಗ ಮಾಡು ; ಹುತಾತ್ಮ – ದೇಶಕ್ಕಾಗಿ ಪ್ರಾಣ ತೆತ್ತವ ; ಸ್ಮರಣೆ – ನೆನಪು; ನೆರೆ – ಪಕ್ಕ ; ನೆರಳು – ಆಶ್ರಯ ; ಮೊಳಗು – ಅಬ್ಬರ ; ಬೆಳಕು – ಜ್ಞಾನ

## ಅಭ್ಯಾಸ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಪರ್ವತ ಹಿಮ ಯಾವ ಎತ್ತರಕ್ಕೆ ಎದ್ದು ನಿಂತಿದೆ?

೨. ಪೆರ್ದೆರೆಗಳು ಯಾವುದಕ್ಕೆ ಮುತ್ತನಿಡುತ್ತಿವೆ?

೩. ಹಸಿರು ದೀಪವನ್ನು ಎಲ್ಲಿ ಹಚ್ಚಲಾಗಿದೆ?

೪. ಯಂತ್ರಘೋಷ ಏಳುತ್ತಿರುವ ಬಗೆ ಹೇಗೆ?

೫. ನಮ್ಮ ಧ್ವಜವನ್ನು ಎತ್ತಿ ಹಿಡಿದಿರುವವರು ಯಾರು?

೬. ನಮ್ಮ ಪಯಣ ಎತ್ತ ಸಾಗಿದೆ?

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು/ಮೂರು ವಾಕ್ಯಗಳಲ್ಲಿ ಉತ್ತರಿಸಿ.**

೧. ಕಣ್ಣು ಬೇರೆಯಾದರೂ ನೋಟ ಒಂದಾಗುವ ಸಂದರ್ಭಗಳನ್ನು ತಿಳಿಸಿ.

೨. 'ಭಾಷೆ ಬೇರೆಯಾದರೂ ಭಾವ ಒಂದು' –ಸಮರ್ಥಿಸಿ.

**ಇ. ಕೊಟ್ಟಿರುವ ಪ್ರಶ್ನೆಗೆ ಎಂಟು/ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

೧. ನಾವು ಭಾರತೀಯರು ಎಂಬ ಅಭಿಮಾನ ಮಿಡಿಯುವ ಸನ್ನಿವೇಶಗಳನ್ನು ವಿವರಿಸಿ.

**ಈ. ಈ ಹೇಳಿಕೆಗಳಿಗೆ ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.**

೧. "ಕಣ್ಣು ಬೇರೆ, ನೋಟವೊಂದು"

೨. "ಭಾಷೆ ಬೇರೆ, ಭಾವವೊಂದು"

೩. "ಎಲ್ಲೆ ಇರಲಿ, ನಾವು ಒಂದು"

NOT TO BE REPUBLISHED @KTBS

**ಉ. ಬಿಟ್ಟ ಸ್ಥಳ ತುಂಬಿ.**

೧. ಯಂತ್ರ _______ ವೇಳುವಲ್ಲಿ.

೨. ಒಂದೆ ನೆಲದ _______ .

೩. ನಮ್ಮ ಯುಗದ ದನಿಗಳಾಗಿ ಮೂಡಿದೆಲ್ಲ _______ .

೪. ಎಲ್ಲೆ ಇರಲಿ ನಾವು _______ .

೫. ನಡೆವ _______ ಪಯಣದಲ್ಲಿ .

**ಊ. ಈ ಪದ್ಯಭಾಗದಲ್ಲಿ ಬಳಕೆಯಾಗಿರುವ ರೂಢನಾಮ ಪದಗಳನ್ನು ಪಟ್ಟಿ ಮಾಡಿ.**

## ಸೈದ್ಧಾಂತಿಕ ಭಾಷಾಭ್ಯಾಸ

NOT TO BE REPUBLISHED ©KTBS

**ಛಂದಸ್ಸು : ಪರಿಚಯಾತ್ಮಕ ವಿವರ.**

ಕಾವ್ಯವನ್ನು **ಗದ್ಯ, ಪದ್ಯ** ಮತ್ತು **ಚಂಪೂ** ಎಂದು ಮೂರು ವಿಭಾಗ ಮಾಡಲಾಗಿದೆ. **ಚಂಪೂ ಕಾವ್ಯ** ಗದ್ಯಪದ್ಯ ಮಿಶ್ರಿತ ಶೈಲಿಯಾಗಿರುವುದರಿಂದ ಪ್ರಧಾನವಾಗಿ **ಗದ್ಯ** ಮತ್ತು **ಪದ್ಯ** ಎಂಬೆರಡೇ ವಿಭಾಗಗಳೆಂದೂ ಹೇಳಬಹುದು.

ಪದ್ಯಗಳನ್ನು ರಚಿಸುವಾಗ ನಿರ್ದಿಷ್ಟ ನಿಯಮಗಳನ್ನು ಅನುಸರಿಸಲಾಗುವುದು. **ಪದ್ಯ ರಚನಾ ನಿಯಮಗಳನ್ನು ತಿಳಿಸುವ ಶಾಸ್ತ್ರವೇ ಛಂದಸ್ಸು.** ವ್ಯಾಕರಣಶಾಸ್ತ್ರವು **ಗದ್ಯ** ಮತ್ತು **ಪದ್ಯ** ಎರಡಕ್ಕೂ ಸಂಬಂಧಿಸಿದ್ದು. ಛಂದಶ್ಶಾಸ್ತ್ರವು **ಪದ್ಯಕ್ಕೆ** ಮಾತ್ರ ಸೀಮಿತವಾದುದು.

ಆಧುನಿಕ ಕನ್ನಡ ಕಾವ್ಯಗಳಲ್ಲಿ **ಛಂದಸ್ಸು** ಹೆಚ್ಚು ಬಳಕೆಯಾಗುತ್ತಿಲ್ಲ. ಆದರೆ ಕಾವ್ಯ ಪರಂಪರೆಯಲ್ಲಿ ಛಂದಸ್ಸಿಗೆ ವಿಶೇಷ ಮಹತ್ವವಿದೆ.

ಇಲ್ಲಿ ಕೊಟ್ಟಿರುವ ಮೂರು ಕಾರಣಗಳಿಂದಾಗಿ ಛಂದಸ್ಸಿಗೆ ಗುರುತರವಾದ ಮಹತ್ವವುಂಟು.

- **ಹಿಂದಿನ ಕಾವ್ಯಗಳ ಲಕ್ಷಣ ತಿಳಿಯಲು**
- **ಛಂದಸ್ಸನ್ನು ಕಡೆಗಣಿಸಿದ್ದರ ಔಚಿತ್ಯದ ಬಗ್ಗೆ ಮರು ಚಿಂತಿಸಲು**
- **ಛಂದಸ್ಸಿನ ಹೊಸ ಬಗೆಯ ಪ್ರಯೋಗಗಳನ್ನು ಅರಿಯಲು**

ಒಂದು ಗೊತ್ತಾದ ಸಾಲುಗಳ (ಪಾದಗಳ) ನಿಯಮ ಅನುಸರಿಸಿ ಬರೆದವುಗಳೇ ಪದ್ಯಗಳು. **ಮೂರು ಪಾದಗಳ** ಪದ್ಯವನ್ನು **ತ್ರಿಪದಿ** ಎಂತಲೂ, **ನಾಲ್ಕು ಪಾದಗಳ** ಪದ್ಯವನ್ನು **ಚೌಪದಿ** ಎಂತಲೂ, **ಆರುಪಾದಗಳ** ಪದ್ಯವನ್ನು **ಷಟ್ಪದಿ** ಎಂತಲೂ, ಇತ್ತೀಚಿನ **ಹದಿನಾಲ್ಕು ಪಾದಗಳ** ಪದ್ಯವನ್ನು **ಅಷ್ಟಷಟ್ಪದಿ (ಸುನೀತ/ಸಾನೆಟ್)** ಎಂತಲೂ ಕರೆಯುವರು. ಹಾಗಾಗಿ ಪದ್ಯ ಎಂಬುದು ನಿರ್ದಿಷ್ಟ ಸಂಖ್ಯೆಯ ಪಾದಗಳಿಂದ ಕೂಡಿರಬೇಕು. ಪದ್ಯದ ಪ್ರತಿಯೊಂದು ಪಾದ **ಪ್ರಾಸ, ಯತಿ** ಮತ್ತು **ಗಣಗಳ** ನಿಯಮದಿಂದ ಕೂಡಿರುತ್ತದೆ.

**ಪದ್ಯವನ್ನು ರಚಿಸಲು ಬೇಕಾದ ನಿರ್ದಿಷ್ಟ ಪಾದಗಳ ಬಗ್ಗೆ ಮತ್ತು ಪ್ರತಿ ಪಾದದಲ್ಲಿ ಇರಬೇಕಾದ ಪ್ರಾಸ, ಯತಿ, ಗಣಗಳ ಬಗ್ಗೆ ತಿಳಿಸುವ ಶಾಸ್ತ್ರವೇ ಛಂದಸ್ಸು.**

**ಪ್ರಾಸ :** **ಗುರು** ಹಿರಿಯರ ಅರಿಯದವನ ಅರಿವದೇತ**ಕೆ**
ಪರ ಹಿತಾರ್ಥಕಿಲ್ಲದವನ ಶರೀರವೇತ**ಕೆ**
ಹರಿಯ ಪೂಜೆ ಮಾಡದವನ ಜನುಮವೇತ**ಕೆ**
ಸೇರಿದವರ ಹೊರೆಯದಂಥ ದೊರೆಯು ಏತ**ಕೆ**

ಈ ಪದ್ಯವನ್ನು ಗಮನಿಸಿದಾಗ ಪ್ರತಿ ಸಾಲಿನ ಎರಡನೆಯ ಅಕ್ಷರದಲ್ಲಿರುವ ವ್ಯಂಜನಾಕ್ಷರ ಒಂದೇ ಆಗಿದೆ. ಅದೇ ರೀತಿ ಪ್ರತಿ ಸಾಲಿನ ಕೊನೆಯ ವ್ಯಂಜನವೂ ಒಂದೇ ಆಗಿದೆ.

**ಪದ್ಯದ ಪ್ರತಿಯೊಂದು ಪಾದದ ಎರಡನೆಯ ಅಕ್ಷರದಲ್ಲಿ ಅಥವಾ ಪ್ರತಿಸಾಲಿನ ಕೊನೆಯ ಅಕ್ಷರದಲ್ಲಿ ಒಂದೇ ಜಾತಿಯ ವ್ಯಂಜನವಿದ್ದರೆ ಅದೇ ಪ್ರಾಸ.**

ಪ್ರತಿಸಾಲಿನ **ಎರಡನೆಯ ಅಕ್ಷರ** ಪ್ರಾಸವಾಗಿದ್ದರೆ **ಆದಿಪ್ರಾಸ** ಎಂತಲೂ **ಅಂತ್ಯದಲ್ಲಿ** ಬರುವ ಪ್ರಾಸವನ್ನು **ಅಂತ್ಯಪ್ರಾಸ** ಎಂತಲೂ (ಹೆಚ್ಚಾಗಿ ರಗಳೆ ಛಂದಸ್ಸಿನಲ್ಲಿ ಕಾಣಬಹುದು) **ಮಧ್ಯದಲ್ಲಿ** ಬರುವ ಪ್ರಾಸವನ್ನು **ಒಳಪ್ರಾಸ** ಅಥವಾ **ಮಧ್ಯಪ್ರಾಸ** ಎಂತಲೂ ಕರೆಯುವರು.

**ಯತಿ : ಪದ್ಯವನ್ನು ವಾಚಿಸುವಾಗ ಅರ್ಥಕ್ಕೆ ಲೋಪವಾಗದಂತೆ ನಿಲ್ಲಿಸುವ ಸ್ಥಳವನ್ನು ಯತಿ ಎನ್ನುವರು.** **ಯತಿ** ಎಂಬುದು ಸಂಸ್ಕೃತ ಕಾವ್ಯಗಳಲ್ಲಿ ಬಳಕೆಯಾದಷ್ಟು ಕನ್ನಡದಲ್ಲಿ ಬಳಕೆಯಾಗಿಲ್ಲ.

**ಗಣ : ಗಣ** ಎಂದರೆ **ಗುಂಪು** ಎಂದರ್ಥ. **ಪದ್ಯದ ಪ್ರತಿಸಾಲಿನ ಅಕ್ಷರ ಅಥವಾ ಮಾತ್ರೆ ಅಥವಾ ಅಂಶಗಳ ಗುಂಪೇ ಗಣ. ಮಾತ್ರೆಗಳ ಲೆಕ್ಕಾಚಾರ**ದಿಂದ ಗುಂಪು ಮಾಡಿದರೆ **ಮಾತ್ರಾಗಣ** ಎಂತಲೂ **ಅಕ್ಷರಗಳ ಲೆಕ್ಕಾಚಾರ**ದಿಂದ ಗುಂಪು ಮಾಡಿದರೆ **ಅಕ್ಷರಗಣ** ಎಂತಲೂ **ಅಂಶಗಳ ಆಧಾರದಿಂದ** ಗುಂಪು ಮಾಡಿದರೆ **ಅಂಶಗಣ** ಎಂತಲೂ ಕರೆಯುವರು.

## ಪ್ರಾಯೋಗಿಕ ಭಾಷಾಭ್ಯಾಸ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

೧. ಛಂದಸ್ಸು ಎಂದರೇನು?

೨. ಪ್ರಾಸ ಎಂದರೇನು? ಅದರ ವಿಧಗಳಾವುವು?

೩. ಗಣ ಎಂದರೇನು? ವಿವರಿಸಿ.

NOT TO BE REPUBLISHED ©KTBS

೪. ಭಾರತೀಯತೆ ಪದ್ಯದಲ್ಲಿ ಯಾವ ಪ್ರಾಸವಿದೆ?

೫. ಭಾರತೀಯತೆ ಪದ್ಯದ ಮೂರನೆಯ ಚರಣದಲ್ಲಿರುವ ಪ್ರಾಸಾಕ್ಷರ ಪದಗಳನ್ನು ಬರೆಯಿರಿ.

**ಆ. ಕೊಟ್ಟಿರುವ ಪದ್ಯಭಾಗವನ್ನು ಕಂಠಪಾಠ ಮಾಡಿ.**

೧. ನಾಡಿಗಾಗಿ ______________________________

______________________________

______________________________

______________________________ ಪಯಣದಲ್ಲಿ.

## ಪೂರಕ ಓದು

✦ ಕೆ. ಎಸ್. ನರಸಿಂಹಸ್ವಾಮಿ ಕವಿತೆಗಳನ್ನು ಸಂಗ್ರಹಿಸಿ, ಓದಿ.

✦ ✦ ✦ ✦ ✦

@KTBS
NOT TO BE REPUBLISHED

# ೩. ಬೇವು ಬೆಲ್ಲದೊಳಿಡಲೇನು ಫಲ

D4J5Z1

– ಪುರಂದರದಾಸರು

**ಪ್ರವೇಶ :** ಕನ್ನಡ ಸಾಹಿತ್ಯ ಪರಂಪರೆಯಲ್ಲಿ ೧೫–೧೬ನೆಯ ಶತಮಾನದಲ್ಲಿ ಜ್ಞಾನ ಮತ್ತು ಭಕ್ತಿಯ ಮೂಲಕ ಮುಕ್ತಿಯನ್ನು ಕಾಣಬಯಸಿ, ವಿಷ್ಣುವನ್ನು ಆರಾಧ್ಯ ದೈವನನ್ನಾಗಿಸಿಕೊಂಡು, ಆಧ್ಯಾತ್ಮಿಕ, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಸುಧಾರಣೆಗಾಗಿ ಶ್ರಮಿಸಿದ ಸಾಹಿತ್ಯ ಪ್ರಕಾರವೇ ದಾಸ ಸಾಹಿತ್ಯ. ದಾಸ ಸಾಹಿತ್ಯವನ್ನು ದಾಸವಾಙ್ಮಯ, ಹರಿದಾಸ ಸಾಹಿತ್ಯವೆಂತಲೂ ಕರೆಯುತ್ತಾರೆ. 'ದಾಸ' ಎಂದರೆ 'ಸೇವಕ' ಎಂದರ್ಥ. ಶ್ರೀಹರಿಯಲ್ಲಿ ಭಕ್ತಿಯನ್ನಿಟ್ಟು, ಮನಸ್ಸನ್ನು ನಿರ್ಮಲಮಾಡಿಕೊಂಡು, ತ್ಯಾಗ ಜೀವನ ನಡೆಸುತ್ತಾ, ಹರಿನಾಮ ಜಪಿಸುತ್ತಾ ರಚಿಸಿದ ಸಾಹಿತ್ಯ ಇದಾಗಿದೆ.

ಈ ಸಾಹಿತ್ಯ ಪ್ರಕಾರದಲ್ಲಿ ಬರುವ ನರಹರಿತೀರ್ಥರು, ಶ್ರೀಪಾದರಾಜರು, ವ್ಯಾಸರು, ವಿಜಯದಾಸರು, ಕನಕ – ಪುರಂದರದಾಸರು, ರಾಘವೇಂದ್ರತೀರ್ಥರೇ ಮೊದಲಾದವರು. ಭಕ್ತಿ – ಆಧ್ಯಾತ್ಮಿಕ ವಿಷಯಗಳನ್ನು ಸುಂದರ ಕಾವ್ಯವನ್ನಾಗಿಸುವ ಮೂಲಕ ಕೀರ್ತನೆಗಳು, ಉಗಾಭೋಗ, ಸುಳಾದಿ, ಮಂಡಿಗೆ ಮೊದಲಾದ ರಚನೆಗಳನ್ನು ರಚಿಸುವ ಮೂಲಕ ಕನ್ನಡ ಸಾಹಿತ್ಯಕ್ಕೆ ಕೊಡುಗೆ ನೀಡಿದ್ದಾರೆ, ಕೆಲವನ್ನು ಪರಿಚಯಾತ್ಮಕವಾಗಿ ನೀಡಲಾಗಿದೆ.

@KTBS
NOT TO BE REPUBLISHED

ಬೇವು ಬೆಲ್ಲದೊಳಿಡಲೇನು ಫಲ
ಹಾವಿಗೆ ಹಾಲೆರೆದರೇನು ಫಲ ॥ಪ॥

ಕುಟಿಲವ ಬಿಡದಿಹ ಕುಜನರು ಮಂತ್ರವ
ಪಠನೆಯ ಮಾಡಿದರೇನು ಫಲ
ಸಟೆಯನ್ನಾಡುವ ಮನುಜರು ಮನದಲಿ
ವಿಠಲನ ನೆನೆದರೇನು ಫಲ ॥೧॥

ಮಾತಾ–ಪಿತರನು ಬಳಲಿಸುವಾತನು
ಯಾತ್ರೆಯ ಮಾಡಿದರೇನು ಫಲ
ಘಾತಕತನವನು ಬಿಡದೆ ನಿರಂತರ
ಗೀತೆಯನೋದಿದರೇನು ಫಲ ॥೨॥

ಕಪಟತನದಲಿ ಕಾಡುವವರೆಲ್ಲರು
ಜಪಗಳ ಮಾಡಿದರೇನು ಫಲ
ಕುಪಿತಬುದ್ಧಿಯನು ಬಿಡದೆ ನಿರಂತರ
ಉಪವಾಸ ಮಾಡಿದರೇನು ಫಲ ॥೩॥

ಹೀನಕೃತ್ಯಗಳ ಮಾಡುತ ನದಿಯಲಿ
ಸ್ನಾನವ ಮಾಡಿದರೇನು ಫಲ
ಶ್ರೀನಿಧಿ ಪುರಂದರವಿಠಲನ ನೆನೆಯದೆ
ಮೌನವ ಮಾಡಿದರೇನು ಫಲ ॥೪॥

## ಕೃತಿಕಾರರ ಪರಿಚಯ

**ಪುರಂದರದಾಸರು :** ಹರಿದಾಸ ಸಾಹಿತ್ಯದ ಅಶ್ವಿನಿದೇವತೆಗಳಲ್ಲಿ ಒಬ್ಬರು. ಈಗಿನ ಮಹಾರಾಷ್ಟ್ರದ ಪುರಂದರಗಡದಲ್ಲಿ ಸಾ.ಶ. ಸುಮಾರು ೧೪೮೦ ರಲ್ಲಿ ಜನಿಸಿದರು. ಪೂರ್ವದ ಹೆಸರು ಶ್ರೀನಿವಾಸನಾಯಕ. ಆಭರಣ ವ್ಯಾಪಾರಿಯಾಗಿದ್ದ ಇವರು ಜೀವನದಲ್ಲಿ ನಡೆದ ಘಟನೆಯಿಂದಾಗಿ ವೈರಾಗ್ಯ ತಾಳಿದರು. ಹರಿಭಕ್ತರಾಗಿ ನೂರಾರು ಕೀರ್ತನೆಗಳನ್ನು ರಚಿಸಿದರು. **'ದಾಸರೆಂದರೆ ಪುರಂದರದಾಸರಯ್ಯ'** ಎಂದು ತಮ್ಮ ಗುರುಗಳಾದ ವ್ಯಾಸರಾಯರಿಂದಲೇ ಹೊಗಳಿಕೆಗೆ ಪಾತ್ರರಾದರು. ಪುರಂದರದಾಸರು ಕರ್ನಾಟಕ ಸಂಗೀತದ ಪಿಳ್ಳಾರಿ ಗೀತೆಗಳನ್ನು ರಚಿಸಿ **'ಕರ್ನಾಟಕ ಸಂಗೀತದ ಪಿತಾಮಹ'** ಎನಿಸಿಕೊಂಡರು. ಇವರ ಅಂಕಿತ **'ಪುರಂದರವಿಠಲ.'**

NOT TO BE REPUBLISHED ©KTBS

## ಆಶಯ

ಹುಟ್ಟುಗುಣ ಸುಟ್ಟರೂ ಹೋಗುವುದಿಲ್ಲ. ಯಾವುದೇ ಕೆಲಸ ನಿರ್ವಹಿಸಿದರೂ ಅದರಿಂದ ಫಲಾಫಲವನ್ನು ಅಪೇಕ್ಷಿಸಬಾರದು. ನಿರ್ಮಲ ಭಕ್ತಿ ಇಲ್ಲದಿದ್ದರೆ ಮಾಡಿದ ಕೆಲಸ ಕೂಡ ನಿಷ್ಫಲವಾಗುತ್ತದೆ ಎಂಬುದನ್ನು ಪುರಂದರದಾಸರು ಸರಳ ಉದಾಹರಣೆಗಳ ಮೂಲಕ ಇಲ್ಲಿ ನಿರೂಪಿಸಿದ್ದಾರೆ.

## ಪದಗಳ ಅರ್ಥ

| | | | | | |
|---|---|---|---|---|---|
| ಕುಟಿಲ | – | ಮೋಸ, ವಂಚನೆ | ಕುಜನರು | – | ಕೆಟ್ಟ ಜನರು |
| ಕುಪಿತ | – | ಸಿಟ್ಟಿನಿಂದ ಕೂಡಿದ | ಸಟೆ | – | ಸುಳ್ಳು |

## ಅಭ್ಯಾಸ

**ಅ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಪುರಂದರದಾಸರ ಅಂಕಿತ ಯಾವುದು?

೨. 'ಜಪದ ಫಲ' ನಮಗೆ ಸಿಗಬೇಕಾದರೆ ಯಾವುದನ್ನು ಬಿಡಬೇಕು ?

೩. ಮಂತ್ರ ಪಠನೆಯ ಫಲ ಸಿಗಬೇಕೆಂದರೆ ಮನುಜ ಏನನ್ನು ಬಿಡಬೇಕು?

೪. ಗೀತೆಯನ್ನು ಓದಿದಷ್ಟು ಫಲ ಯಾವಾಗ ದೊರೆಯುತ್ತದೆ ?

**ಆ. ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯದಲ್ಲಿ ಉತ್ತರಿಸಿ.**

೧. ಯಾತ್ರೆ ಮಾಡುವುದು ಮತ್ತು ಗೀತೆಯನ್ನು ಓದಿದರೆ ದೊರೆಯುವ ಫಲವೇನು?

೨. ಜಪ ಹಾಗೂ ಉಪವಾಸ ವ್ರತಗಳ ಫಲ ಯಾವಾಗ ದೊರೆಯುವುದಿಲ್ಲ?

**ಇ. ಕೆಳಗಿನ ಹೇಳಿಕೆಗಳಿಗೆ ಸಂದರ್ಭಸಹಿತ ಸ್ವಾರಸ್ಯವನ್ನು ಬರೆಯಿರಿ.**

೧. "ಮಂತ್ರವ ಪಠನೆಯ ಮಾಡಿದರೇನು ಫಲ"

೨. "ಮಾತಾಪಿತರನು ಬಳಲಿಸುವಾತನು"

೩. "ಸ್ನಾನವ ಮಾಡಿದರೇನು ಫಲ"

**ಈ. ಕೆಳಗಿನ ಪ್ರಶ್ನೆಗಳಿಗೆ ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

೧. ಪುರಂದರ ದಾಸರ ದೃಷ್ಟಿಯಲ್ಲಿ ನಮ್ಮ ಶ್ರಮಕ್ಕೆ ಫಲ ದೊರೆಯುವುದು ಯಾವಾಗ ? ವಿವರಿಸಿ.

NOT TO BE REPUBLISHED @KTBS

## ಸೈದ್ಧಾಂತಿಕ ಭಾಷಾಭ್ಯಾಸ

**ನಾಮವಿಭಕ್ತಿಗಳು :** ಕ್ರಿಯಾಪದದೊಂದಿಗೆ ನಾಮಪದದ ಸಂಬಂಧವನ್ನು ತಿಳಿಸುವ **ಕರ್ತೃ, ಕರ್ಮ, ಕರಣ** ಮುಂತಾದುವು **ಕಾರಕಾರ್ಥಗಳು. ಕಾರಕಾರ್ಥವನ್ನು ವಿಭಜಿಸಿ ಹೇಳುವ ಪ್ರತ್ಯಯಗಳೇ ವಿಭಕ್ತಿಪ್ರತ್ಯಯಗಳು.** ಇವುಗಳ ಸ್ವರೂಪ ಮತ್ತು ಪರಸ್ಪರ ಸಂಬಂಧವನ್ನು ಕೊಟ್ಟಿರುವ ಕೋಷ್ಟಕದ ಸಹಾಯದಿಂದ ತಿಳಿಯೋಣ.

| ವಿಭಕ್ತಿಗಳು | ವಿಭಕ್ತಿ ಪ್ರತ್ಯಯಗಳು | ಕಾರಕಾರ್ಥ | ನಾಮಪದ |
|---|---|---|---|
| ಪ್ರಥಮಾ | ಉ | ಕರ್ತೃ ಅರ್ಥ | ಮನೆಯು |
| ದ್ವಿತೀಯಾ | ಅನ್ನು | ಕರ್ಮಾರ್ಥ | ಮನೆಯನ್ನು |
| ತೃತೀಯಾ | ಇಂದ | ಕರಣಾರ್ಥ (ಸಾಧನ) | ಮನೆಯಿಂದ |

| ವಿಭಕ್ತಿಗಳು | ವಿಭಕ್ತಿ ಪ್ರತ್ಯಯಗಳು | ಕಾರಕಾರ್ಥ | ನಾಮಪದ |
|---|---|---|---|
| ಚತುರ್ಥೀ | ಕ್ಕೆ, ಗೆ, ಇಕೆ, | ಸಂಪ್ರದಾನ (ಕೊಡುವಿಕೆ) | ಮನೆಗೆ |
| ಪಂಚಮೀ | ದೆಸೆಯಿಂದ | ಅಪಾದಾನ (ಅಗಲುವಿಕೆ) | ಮನೆಯ ದೆಸೆಯಿಂದ |
| ಷಷ್ಠೀ | ಅ | ಸಂಬಂಧ | ಮನೆಯ |
| ಸಪ್ತಮೀ | ಅಲ್ಲಿ | ಅಧಿಕರಣ | ಮನೆಯಲ್ಲಿ |

ಈ ವಿಭಕ್ತಿ ಪ್ರತ್ಯಯಗಳು ನಾಮಪ್ರಕೃತಿಗೆ ಬಂದು ಸೇರುವಾಗ ಹೆಚ್ಚಾಗಿ 'ಅ' ಕಾರಾಂತ ಪದಗಳಿಗೆ 'ನ' ಕಾರವೂ (ರಾಮನು, ರಾಮನನ್ನು, ರಾಮನಲ್ಲಿ ಇತ್ಯಾದಿ) 'ಎ' ಕಾರಾಂತ ಪದಗಳಿಗೆ 'ಯ' ಕಾರವೂ (ಮನೆಯು, ಮನೆಯಿಂದ, ಮನೆಯ, ಮನೆಯಲ್ಲಿ) ಆದೇಶವಾಗಿ ಬರುತ್ತವೆ. ಆದರೆ ಇತ್ತೀಚೆಗೆ ಕೆಲವು ಪ್ರದೇಶಗಳ ಆಡು ಭಾಷೆಯ ಪ್ರಭಾವದಿಂದ **'ಮನೆಯಲ್ಲಿ'** ಪದ **'ಮನೆನಲ್ಲಿ'** ಎಂತಲೂ **'ಶಾಲೆಯಲ್ಲಿ'** ಪದ **'ಶಾಲೆನಲ್ಲಿ'** ಎಂತಲೂ ಪ್ರಯೋಗವಾಗುತ್ತಿದೆ. ಇಲ್ಲಿ **'ನ'** ಕಾರ ಹೇಗೆ ಆಗಮವಾಯಿತೆಂದು ತಿಳಿಯದು. ಆದರೆ ಅದೇ **'ಮನೆ'** ಎಂಬ **'ಎ'** ಕಾರಾಂತ ಪದಕ್ಕೆ **ಸಪ್ತಮೀವಿಭಕ್ತಿ** ಬಿಟ್ಟು ಉಳಿದ ವಿಭಕ್ತಿಪ್ರತ್ಯಯಗಳು ಸೇರಿದಾಗ ಈ ಕ್ರಿಯೆ ಕಾಣಿಸುವುದಿಲ್ಲ. ಅಂದರೆ **'ಮನೆಯು, ಮನೆಯನ್ನು, ಮನೆಯಿಂದ, ಮನೆಯ'** ಪದಗಳಲ್ಲಿ ವ್ಯಾಕರಣ ನಿಯಮ ರೀತ್ಯಾ **'ಯ'** ಕಾರವೇ ಆಗಮವಾಗಿದೆಯೇ ಹೊರತು **'ಮನೆನು, ಮನೆನನ್ನು, ಮನೆನಿಂದ, ಮನೆನ'** ಎಂಬ ರೂಪವನ್ನು ಹೊಂದಿಲ್ಲ. **ಸಪ್ತಮೀವಿಭಕ್ತಿ** ಸೇರಿದಾಗ ಮಾತ್ರ ಇಂತಹ ಕ್ರಿಯೆ ಕಾಣುತ್ತದೆ ಹಾಗಾಗಿ **'ಮನೆಯಲ್ಲಿ'** ಪದದ ಬದಲಿಗೆ **'ಮನೆನಲ್ಲಿ'** ಎಂಬ ರೀತಿಯ (ಅಂದರೆ ಸಪ್ತಮೀ ವಿಭಕ್ತಿ ಸೇರಿದಾಗ ಆಗುವ ತಪ್ಪುಗಳು) ಪ್ರಯೋಗ ವ್ಯಾಕರಣರೀತ್ಯಾ ಸಮ್ಮತವಲ್ಲ.

## ಪ್ರಾಯೋಗಿಕ ಭಾಷಾಭ್ಯಾಸ

**ಅ. ಕೆಳಗಿನ ಗಾದೆಗಳನ್ನು ವಿಸ್ತರಿಸಿ ಬರೆಯಿರಿ.**

೧. ಕೋಪದಿಂದ ಕೊಯ್ದ ಮೂಗು ಮತ್ತೆ ಬಂದಿತೇ?

೨. ಆಚಾರವೇ ಸ್ವರ್ಗ; ಅನಾಚಾರವೇ ನರಕ

## ಪೂರಕ ಓದು

೧. ಪುರಂದರದಾಸರ ಜೀವನ ಚರಿತ್ರೆಯನ್ನು ಓದಿರಿ.

೨. ಪುರಂದರದಾಸರ ಇತರ ಕೀರ್ತನೆಗಳನ್ನು ಓದಿ, ಅರ್ಥೈಸಿಕೊಳ್ಳಿ.

೩. ದಾಸರ ಕೀರ್ತನೆಗಳನ್ನು ಹಾಗೂ ಅವರ ಜೀವನ ಚರಿತ್ರೆಗಳನ್ನು ಓದಿರಿ

✦✦✦✦✦

NOT TO BE REPUBLISHED © KTBS

# ೪. ಸೋಮೇಶ್ವರಶತಕ

Q5C5G9

**– ಪುಲಿಗೆರೆ ಸೋಮನಾಥ**

**ಪ್ರವೇಶ :** ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಶತಕ ಸಾಹಿತ್ಯ ವಿಶೇಷತೆಯಿಂದ ಕೂಡಿದ್ದು. ಈ ಪ್ರಕಾರದಲ್ಲಿ ಕೃತಿ ರಚನೆ ಮಾಡಿರುವ ಕವಿ ಸೋಮನಾಥ. ಈತನ ಕೃತಿ ಸೋಮೇಶ್ವರ ಶತಕವೆಂದೇ ಪ್ರಸಿದ್ಧಿಪಡೆದಿದೆ. ಸೋಮೇಶ್ವರ ಶತಕವು ಕನ್ನಡ ನಾಡಿನ ಜನಪದ ಕಾವ್ಯವೆಂಬಂತೆ ಜನಮನದಲ್ಲಿ ನೆಲೆಸಿರುವ ಕಾವ್ಯ. ನೀತಿ ಬೋಧಕವಾದ ಈ ಕಾವ್ಯವು ಇಂದಿಗೂ ಅನುಕರಣೀಯವಾದುದ್ದಾಗಿದೆ. "ಮಾತೃದೇವೋಭವ, ಪಿತೃದೇವೋಭವ, ಆಚಾರ್ಯ ದೇವೋಭವ" ಎಂಬುದು ನಮ್ಮೆಲ್ಲ ಧರ್ಮಗಳ ಮೂಲ ಮಂತ್ರ.

ಇವರೆಲ್ಲರೂ ತಮ್ಮ ತಮ್ಮ ಕರ್ತವ್ಯಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಪ್ರತಿಯೊಬ್ಬರೂ ತಮ್ಮ ತಮ್ಮ ಜವಾಬ್ದಾರಿಗಳನ್ನು ಪ್ರಾಮಾಣಿಕವಾಗಿ ನಿಷ್ಠೆಯಿಂದ ಮಾಡಲೇಬೇಕು. ರಾಜ್ಯವಾಳುವ ರಾಜನಾಗಲಿ, ಮಂತ್ರಿಯಾಗಲಿ, ರಕ್ಷಕರಾದ ಭಟರಾಗಲಿ ಇದರಿಂದ ಹೊರತಾಗುವುದಿಲ್ಲ. ಈ ಕರ್ತವ್ಯ ಪ್ರಜ್ಞೆಯೇ ದೈವತ್ವದ ಸ್ಥಾನ–ಮಾನ ಪಡೆಯಲು ಸಾಧ್ಯವಾಗುತ್ತದೆ. ದೈವದ ಅನುಗ್ರಹವು ಸ್ವಾಭಾವಿಕವಾಗಿ ಏನೆಲ್ಲ ಪರಿವರ್ತನೆಗೆ ಕಾರಣವಾಗುತ್ತದೆ ಎಂಬುದನ್ನು ಮನೋಜ್ಞವಾಗಿ ಈ ಶತಕದಲ್ಲಿ ವಿವರಿಸಲಾಗಿರುವುದರಿಂದ ಇಂದಿಗೂ ಪ್ರಸ್ತುತವಾಗಿದೆ.

©KTBS NOT TO BE REPUBLISHED

೧

ಹಿತವಂ ತೋರುವನಾತ್ಮಬಂಧು ಪೊರೆವಾತಂ ತಂದೆ ಸದ್ಧರ್ಮದಾ ।
ಸತಿಯೇ ಸರ್ವಕೆ ಸಾಧನಂ ಕಲಿಸಿದಾತಂ ವರ್ಣಮಾತ್ರಂ ಗುರು ॥
ಶ್ರುತಿಮಾರ್ಗಂ ಬಿಡದಾತ ಸುವ್ರತಿ ಮಹಾ ಸದ್ವಿದ್ಯೆಯೇ ಪುಣ್ಯದಂ ।
ಸುತನೇ ಸದ್ಗತಿದಾತನೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥

೨

ಪ್ರಜೆಯಂ ಪಾಲಿಸಬಲ್ಲೊಡಾತನರಸಂ ಕೈಯಾಸೆಯಂ ಮಾಡದಂ ।
ನಿಜ ಮಂತ್ರೀಶ್ವರ ತಂದೆ ತಾಯ ಸಲಹಲ್ ಬಲ್ಲಾತನೇ ಧಾರ್ಮಿಕಂ ॥
ಭಜಕಂ ದೈವದ ಭಕ್ತಿಯುಳ್ಳೊಡೆ ಭಟಂ ನಿರ್ಭೀತ ತಾನಾದವಂ ।
ದ್ವಿಜನಾಚಾರತೆಯುಳ್ಳವಂ ಹರಹರಾ ಶ್ರೀಚೆನ್ನಸೋಮೇಶ್ವರಾ॥

೩

ಅತಿ ಗಂಭೀರನುದಾರ ಧೀರನು ಮಹಾ ಸಂಪನ್ನ ಸತ್ಯಾತ್ಮನೂ ।
ಜಿತ ನಾನಾಲಿಪಿಭಾಷೆಯೊಳ್ ಪರಿಚಿತಂ ಲಂಚಕ್ಕೆ ಕೈನೀಡದಂ ॥
ವ್ರತ ಸದ್ಧರ್ಮ ವಿಚಾರಶಾಲಿ ಚತುರೋಪಾಯಂಗಳಂ ಬಲ್ಲವಂ ।
ಪತಿಕಾರ್ಯಂ ವರ ಮಂತ್ರಿಯೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥

೪

ಉಡುರಾಜಂ ಕಳೆಗುಂದಿ ಪೆರ್ಚದಿಹನೇ ನೃಗ್ರೋಧಬೀಜಂ ಕೆಲಂ ।
ಸಿಡಿದುಂ ಪೆರ್ಮರನಾಗದೇ ಎಳಗರುಂ ಎತ್ತಾಗದೇ ಲೋಕದೊಳ್ ॥
ಮಿಡಿ ಪಣ್ಣಾಗದೆ ದೈವನೊಲ್ಮೆಯಿರಲಾ ಕಾಲಾನುಕಾಲಕ್ಕೆ ತಾಂ ।
ಬಡವಂ ಬಲ್ಲಿದನಾಗನೇ ಹರಹರಾ ಶ್ರೀಚೆನ್ನಸೋಮೇಶ್ವರಾ ॥

## ಕೃತಿಕಾರರ ಪರಿಚಯ

**ಪುಲಿಗೆರೆ ಸೋಮನಾಥ** ಸಾ.ಶ. ಸುಮಾರು **೧೨೫೦ ಧಾರವಾಡ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಪುಲಿಗೆರೆ**ಯವನು. ಪುಲಿಗೆರೆ ಸೋಮನಾಥನೆಂದೇ ಪ್ರಸಿದ್ಧಿ. ಕನ್ನಡ, ಸಂಸ್ಕೃತ ಭಾಷಾಪಂಡಿತನಾದ ಈತನ ಅಂಕಿತ **ಹರಹರಾ ಶ್ರೀ ಚನ್ನಸೋಮೇಶ್ವರಾ. ಕನ್ನಡ ರತ್ನಕರಂಡಕ** ಕಾವ್ಯವನ್ನು ಚಂಪುವಿನಲ್ಲಿಯೂ ಸೋಮೇಶ್ವರ ಶತಕವನ್ನು ವೃತ್ತ ಛಂದಸ್ಸಿನಲ್ಲಿಯೂ ರಚಿಸಿದ್ದಾನೆ.

ಪ್ರಕೃತ ಚೌಪದಿಗಳನ್ನು ಕನ್ನಡ ಸಾಹಿತ್ಯ ಪರಿಷತ್ತು ಸಂಪಾದಿಸಿರುವ **ಸೋಮೇಶ್ವರ ಶತಕ** ಕೃತಿಯಿಂದ ಆಯ್ಕೆಮಾಡಿ ಕೊಳ್ಳಲಾಗಿದೆ.

©KTBS NOT TO BE REPUBLISHED

## ಆಶಯ

ಸಮಾಜದ ಅವಿಭಾಜ್ಯ ಅಂಗವಾದ ತಂದೆ, ತಾಯಿ, ಮಗ, ಪತ್ನಿ, ಗುರುಗಳ ಜವಾಬ್ದಾರಿಗಳನ್ನು, ದ್ವಿಜ, ರಾಜ, ಮಂತ್ರಿ, ಭಟ ಮೊದಲಾದವರ ಕರ್ತವ್ಯಗಳನ್ನು ಈ ನೀತಿ ಶತಕದಲ್ಲಿ ಮಾರ್ಮಿಕವಾಗಿ ಹೇಳಲಾಗಿದೆ. ನಿಜವಾದ ಮಂತ್ರಿಗೆ ಇರಬೇಕಾದ ಲಕ್ಷಣ, ದೇವರ ಅನುಗ್ರದಿಂದ ಕಾಲಾನುಕ್ರಮದಲ್ಲಿ ಸ್ವಾಭಾವಿಕವಾಗಿ ಆಗುವ ಬದಲಾವಣೆಗಳ ಬಗ್ಗೆಯೂ ವಿವರಿಸಲಾಗಿದೆ. ಈ ಮೂಲಕ ಪ್ರತಿಯೊಬ್ಬರೂ ತಮ್ಮ ತಮ್ಮ ಜವಾಬ್ದಾರಿಗಳನ್ನರಿತಾಗ ಸುಖೀಸಮಾಜದ ನಿರ್ಮಾಣವಾಗುತ್ತದೆಂಬುದು ಈ ನೀತಿ ಶತಕದ ಆಶಯ.

## ಪದಗಳ ಅರ್ಥ

ಆತ್ಮ–ತನ್ನ; ಉಡುರಾಜ–ನಕ್ಷತ್ರಾಧಿಪತಿ, ಚಂದ್ರ; ಊರ್ಜಿತ–ರೂಢಿಯಲ್ಲಿರುವ; ಒಲ್ಮೆ–ಪ್ರೀತಿ; ಕೆಲ – ಕೆಲವು; ಕೈಯಾಸೆ–ಲಂಚ, ಆಮಿಷ; ಚತುರೋಪಾಯ – ಸಾಮ, ದಾನ, ದ್ವಿಜ–ಬ್ರಾಹ್ಮಣ; ನೃಗ್ರೋಧ–ಆಲದಮರ; ಪತಿಕಾರ್ಯ–ಸ್ವಾಮಿಕಾರ್ಯ, (ಆಸಕ್ತನಾದವನು); ಪಾಲಿಸು–ಕಾಪಾಡು, ಸಲಹು; ಪೆರ್ಚು–ಹೆಚ್ಚು, ವೃದ್ಧಿಸು; ಪೆರ್ಮರ–ದೊಡ್ಡಮರ; ಪೊರೆ–ಕಾಪಾಡು; ಬಲ್ಲಿದ–ಬಲಿಷ್ಠ, ಹಣವಂತ; ಭಜಕ–ಪೂಜಿಸುವವನು; ಭಟ–ಸೈನಿಕ; ಮಿಡಿ–ಹೀಚು; ವರ್ಣ–ಅಕ್ಷರ; ವ್ರತಿ–ನಿಯುಮವುಳ್ಳವನು; ಮುನಿ–ತಪಸ್ವಿ; ಶ್ರುತಿ–ವೇದ; ಸಂಪನ್ನ–ಗುಣಶಾಲಿ; ಸಾಧನ–ಸಹಾಯ.

## ಅಭ್ಯಾಸ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ನಿಜವಾದ ಬಂಧು ಯಾರು?

೨. ಧಾರ್ಮಿಕನೆಂದು ಯಾರನ್ನು ಕರೆಯಲಾಗಿದೆ?

೩. ರಾಜನಾದವನ ಕರ್ತವ್ಯವೇನು?

೪. ಆಲದ ಮರದ ಬೀಜ ಸಿಡಿದು ಭೂಮಿಗೆ ಬಿದ್ದು ಏನಾಗುತ್ತದೆ?

೫. ಪುಲಿಗೆರೆ ಸೋಮನಾಥನ ಅಂಕಿತನಾಮವೇನು?

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ**

೧. ಸುವ್ರತಿ ಹಾಗೂ ಸುತನ ಬಗೆಗೆ ಕವಿ ಏನು ಹೇಳಿದ್ದಾನೆ?

೨. ಭಟ ಮತ್ತು ದ್ವಿಜರ ಲಕ್ಷಣಗಳೇನು?

**ಇ. ಕೊಟ್ಟಿರುವ ಪ್ರಶ್ನೆಗಳಿಗೆ ಐದು–ಆರು ವಾಕ್ಯಗಳಲ್ಲಿ ಉತ್ತರಿಸಿ.**

೧. ಶ್ರೇಷ್ಠ ಮಂತ್ರಿಯಲ್ಲಿರಬೇಕಾದ ಲಕ್ಷಣಗಳೇನು?

೨. ಬಡವ ಬಲ್ಲಿದನಾಗುವನು ಎಂಬುದಕ್ಕೆ ಕವಿ ನೀಡಿರುವ ನಿದರ್ಶನಗಳಾವುವು?

**ಈ. ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.**

೧. "ಸದ್ಧರ್ಮದಾ ಸತಿಯೇ ಸರ್ವಕ್ಕೆ ಸಾಧನಂ"

೨. "ಅತಿ ಗಂಭೀರನುದಾರ ಧೀರನು"

೩. "ಉಡುರಾಜಂ ಕಳೆಗುಂದಿ ಪೆರ್ಚದಿಹನೇ"

**ಉ. ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ.**

| | | | | | |
|---|---|---|---|---|---|
| ೧. ಮಿಡಿ | : | ಪಣ್ಣಾಗದೇ | : : | ಎಳಗರು | : ____________ |
| ೨. ನ್ಯಗ್ರೋಧ | : | ಆಲದ ಮರ | : : | ಉಡುರಾಜ | : ____________ |
| ೩. ಭಕ್ತಿಯುಳ್ಳ | : | ಆಗಮಸಂಧಿ | : : | ಕಳೆಗುಂದು | : ____________ |
| ೪. ಧರ್ಮ | : | ಅಧರ್ಮ | : : | ಬಡವ | : ____________ |
| ೫. ಕಾರ್ಯ | : | ಕಜ್ಜ | : : | ಭಕ್ತಿ | : ____________ |

@KTBS NOT TO BE REPUBLISHED

## ಅಲಂಕಾರ : ಪರಿಚಯಾತ್ಮಕ ವಿವರ

ಮನುಷ್ಯ ತನ್ನ ದೇಹದ ಸೌಂದರ್ಯವನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ವೈವಿಧ್ಯಪೂರ್ಣ ಬಟ್ಟೆ, ಆಭರಣ ಇತ್ಯಾದಿ ಸೌಂದರ್ಯ ಸಾಧನಗಳನ್ನು ಬಳಸುತ್ತಾನೆ. ಹೀಗೆ ಅಲಂಕಾರ ಮಾಡಿಕೊಂಡ ವ್ಯಕ್ತಿ ಇತರರಿಂದ ಆಕರ್ಷಿಸಲ್ಪಡುತ್ತಾನೆ. ದೇಹದ ಸೌಂದರ್ಯವನ್ನು ಹೆಚ್ಚಿಸಿಕೊಳ್ಳಲು ಅಲಂಕಾರ ಮಾಡಿಕೊಂಡಂತೆ ಮನುಷ್ಯ ತನ್ನ ಮಾತೂ ಇತರರಿಗೆ ಇಂಪಾಗಿ ಕೇಳುವಂತೆ ಮಾಡುವ ಸಲುವಾಗಿ ಚಮತ್ಕಾರದಿಂದ ಮಾತನಾಡುತ್ತಾನೆ.

**ಕಾವ್ಯದ ಸೌಂದರ್ಯವನ್ನು ಹೆಚ್ಚಿಸುವ ಚಮತ್ಕಾರಿಕ ಮಾತುಗಳೇ ಅಲಂಕಾರ.** ಅಲಂಕಾರದಲ್ಲಿ **ಶಬ್ದಾಲಂಕಾರ** ಮತ್ತು **ಅರ್ಥಾಲಂಕಾರ** ಎಂಬ ಎರಡು ವಿಧಗಳಿವೆ.

**ಶಬ್ದಾಲಂಕಾರ** : **ಶಬ್ದಗಳ ಜೋಡಣೆಯ ಚಮತ್ಕಾರದಿಂದ ಕಾವ್ಯದ ಸೌಂದರ್ಯ ಹೆಚ್ಚಿದರೆ ಅದನ್ನು ಶಬ್ದಾಲಂಕಾರ ಎನ್ನುತ್ತಾರೆ.** ಇದರಲ್ಲಿ **ಅನುಪ್ರಾಸ, ಯಮಕ** ಮತ್ತು **ಚಿತ್ರ ಕವಿತ್ವ** ಪ್ರಧಾನವಾಗಿ **ಮೂರು** ವಿಧಗಳಿವೆ. **ಅನುಪ್ರಾಸ**ವನ್ನು **ವೃತ್ಯನುಪ್ರಾಸ** ಮತ್ತು **ಛೇಕಾನುಪ್ರಾಸ** ಎಂದು ವಿಭಾಗಿಸಲಾಗಿದೆ.

**ಅರ್ಥಾಲಂಕಾರ** : **ಕಾವ್ಯದಲ್ಲಿ ಬಳಸಲಾದ ಪದಗಳ ಅರ್ಥ ಚಮತ್ಕಾರದಿಂದ ಕಾವ್ಯದ ಸೌಂದರ್ಯ ಹೆಚ್ಚಾದರೆ ಅದನ್ನು ಅರ್ಥಾಲಂಕಾರ ಎನ್ನುತ್ತಾರೆ.** ಇದರಲ್ಲಿ ನೂರಕ್ಕೂ ಮಿಕ್ಕಿದ ಅಲಂಕಾರಗಳಿವೆ. ಇವುಗಳಲ್ಲಿ ಬರುವ **ಉಪಮೇಯ ಉಪಮಾನಗಳ** ಸಹಾಯದಿಂದ ಅದು ಯಾವ ಅಲಂಕಾರ ಎಂದು ನಿರ್ಧರಿಸಲಾಗುವುದು.

**ಉಪಮೇಯ** : ಉಪಮೇಯವನ್ನು **ವರ್ಣ್ಯ** ಎಂತಲೂ ಕರೆಯುವರು. **ಆಲಂಕಾರಿಕ ವಾಕ್ಯದಲ್ಲಿ ಯಾವ ವಸ್ತುವನ್ನು ಕುರಿತು ವರ್ಣಿಸಲಾಗುತ್ತದೆಯೋ. ಅದೇ ವರ್ಣ್ಯ** ಅಥವಾ **ಉಪಮೇಯ.**

**ಉಪಮಾನ** : ಉಪಮಾನವನ್ನು **ಅವರ್ಣ್ಯ** ಎಂತಲೂ ಕರೆಯುವರು **ಯಾವ ವಸ್ತುವನ್ನು ಆಧರಿಸಿ ಅಥವಾ ಮಾನವಾಗಿಟ್ಟುಕೊಂಡು ವರ್ಣಿಸಲಾಗುತ್ತದೆಯೋ ಅದೇ ಅವರ್ಣ್ಯ** ಅಥವಾ **ಉಪಮಾನ.**

**ಉಪಮಾಲಂಕಾರ** : **ಉಪಮಾ** ಎಂದರೆ **ಹೋಲಿಕೆ** ಎಂದರ್ಥ. ಯಾವ ಅಲಂಕಾರದಲ್ಲಿ ಉಪಮೇಯ ಉಪಮಾನಗಳೊಳಗೆ ಉಪಮಾ (ಹೋಲಿಕೆ) ಇರುತ್ತದೆಯೋ ಆ ಅಲಂಕಾರವೇ **ಉಪಮಾಲಂಕಾರ.**

©KTBS NOT TO BE REPUBLISHED

**ಉದಾ : ಮನೋರಮೆಯ ಹಣೆ ಬಾಲಚಂದ್ರನಂತೆ ಆಕರ್ಷಣೀಯವಾಗಿತ್ತು.** ಇಲ್ಲಿ ಮನೋರಮೆಯ ಹಣೆ ಅರ್ಧಚಂದ್ರಾಕೃತಿಯಲ್ಲಿದೆ ಎಂದು ಹೇಳುವ ಬದಲಿಗೆ ಬಾಲಚಂದ್ರನಂತೆ ಆಕರ್ಷಣೀಯವಾಗಿತ್ತು, ಎಂದು ಹೇಳಲಾಗಿದೆ.

- ಮನೋರಮೆಯ ಹಣೆಯನ್ನು ವರ್ಣಿಸುತ್ತಿರುವುದರಿಂದ **ಮನೋರಮೆಯ ಹಣೆ** ಎಂಬುದು **ಉಪಮೇಯವಾಯ್ತು.**
- ಬಾಲಚಂದ್ರನನ್ನು ಆಧಾರವಾಗಿಟ್ಟುಕೊಂಡು ಮನೋರಮೆಯ ಹಣೆಯನ್ನು ವರ್ಣಿಸುತ್ತಿರುವುದರಿಂದ **ಬಾಲಚಂದ್ರ** ಎಂಬುದು **ಉಪಮಾನವಾಯ್ತು.**
- ಉಪಮೇಯಕ್ಕೂ ಉಪಮಾನಕ್ಕೂ ಹೋಲಿಕೆಯನ್ನು ಹೇಳುವಂತಹ **ಅಂತೆ, ವೋಲ್, ವೊಲ್** ಮುಂತಾದ ಪದಗಳೇ **ವಾಚಕ ಪದಗಳು**. ಇಲ್ಲಿ **ಅಂತೆ,** ಎಂಬುದು **ವಾಚಕ** ಪದ.
- ಉಪಮೇಯಕ್ಕೂ ಉಪಮಾನಕ್ಕೂ ಸಮಾನವಾಗಿ ಹೊಂದಿಕೆಯಾಗುವ ಕ್ರಿಯಾಪದವೇ **ಸಮಾನಧರ್ಮ**. ಇಲ್ಲಿ **ಆಕರ್ಷಣೀಯವಾಗಿತ್ತು** ಎಂಬುದು **ಸಮಾನಧರ್ಮ**.
- ಉಪಮೇಯಕ್ಕೂ ಉಪಮಾನಕ್ಕೂ ಹೋಲಿಕೆಯನ್ನು ಹೇಳಿರುವುದರಿಂದ ಇದು **ಉಪಮಾಲಂಕಾರ.**

©KTBS NOT TO BE REPUBLISHED

**ಉಪಮಾಲಂಕಾರದಲ್ಲಿ ಪೂರ್ಣೋಪಮಾಲಂಕಾರ, ಲುಪ್ತೋಪಮಾಲಂಕಾರ** ಎಂಬ ಎರಡು ವಿಧಗಳಿವೆ.

**ಪೂರ್ಣೋಪಮಾಲಂಕಾರ :** ಯಾವ ಉಪಮಾಲಂಕಾರದಲ್ಲಿ **ಉಪಮೇಯ, ಉಪಮಾನ, ವಾಚಕ ಪದ, ಸಮಾನಧರ್ಮ** ಎಂಬ ನಾಲ್ಕು ಅಂಶಗಳು ಇರುತ್ತವೆಯೋ ಅದೇ **ಪೂರ್ಣೋಪಮಾಲಂಕಾರ.**

**ಉದಾ.: ಬಿರುಗಾಳಿಗೆ ತುತ್ತಾದ ಮರಗಿಡಗಳು ಬೀಳುವಂತೆ ಭರತಕುಲದ ನೂರ್ಮೈವರು ಬಾಲಕರು ಬಿದ್ದರು.**

**ಅಲಂಕಾರ** : ಉಪಮಾಲಂಕಾರ (ಪೂರ್ಣೋಪಮಾಲಂಕಾರ)

**ಲಕ್ಷಣ** : ಎರಡು ವಸ್ತುಗಳ ನಡುವೆ ಪರಸ್ಪರ ಹೋಲಿಕೆಯನ್ನು ತಿಳಿಸುವ ಅಲಂಕಾರವೇ ಉಪಮಾಲಂಕಾರ.

**ಉಪಮೇಯ** : ಭರತಕುಲದ ನೂರ್ಮೈವರು ಬಾಲಕರು

**ಉಪಮಾನ** : ಬಿರುಗಾಳಿಗೆ ತುತ್ತಾದ ಮರಗಿಡಗಳು

**ವಾಚಕಪದ** : ಅಂತೆ

**ಸಮಾನಧರ್ಮ** : ಬೀಳುವುದು

**ಸಮನ್ವಯ** : **ಉಪಮೇಯ**ವಾದ ಭರತಕುಲದ ನೂರ್ವೆವರು ಬಾಲಕರು ಬಿದ್ದಿರುವುದನ್ನು **ಉಪಮಾನ**ವಾದ ಬಿರುಗಾಳಿಗೆ ತುತ್ತಾದ ಮರಗಿಡಗಳಿಗೆ ಹೋಲಿಸಿರುವುದರಿಂದ ಇದು **ಉಪಮಾಲಂಕಾರ.**

ಈ ಅಲಂಕಾರದಲ್ಲಿ **ಉಪಮೇಯ, ಉಪಮಾನ, ವಾಚಕಪದ, ಸಮಾನಧರ್ಮ** ಎಂಬ ನಾಲ್ಕು ಅಂಶಗಳಿರುವುದರಿಂದ ಇದು **ಪೂರ್ಣೋಪಮಾಲಂಕಾರವೂ** ಹೌದು.

**ಲುಪ್ತೋಪಮಾಲಂಕಾರ:** ಇದು ಉಪಮಾಲಂಕಾರದ ಇನ್ನೊಂದು ಪ್ರಭೇದ. ಪೂರ್ಣೋಪಮಾಲಂಕಾರವಾಗಬೇಕಾದರೆ ಇರಬೇಕಾದ ನಾಲ್ಕು ಅಂಶಗಳಲ್ಲಿ ಯಾವುದಾದರೂ ಅಂಶ ಇಲ್ಲವಾದರೆ ಅದು **ಲುಪ್ತೋಪಮಾಲಂಕಾರ**ವಾಗುತ್ತದೆ. ಯಾವ ಅಂಶ ಲುಪ್ತವಾಗಿದೆಯೋ ಅದೇ ಹೆಸರಿನಿಂದ ಆ ಅಲಂಕಾರವನ್ನು ಕರೆಯಲಾಗುತ್ತದೆ. ಅಂದರೆ ಉಪಮೇಯ ಇಲ್ಲವಾದರೆ ಅದು **ಉಪಮೇಯ ಲುಪ್ತೋಮಾಲಂಕಾರ**. ಹಾಗೆಯೇ **ಉಪಮಾನಲುಪ್ತೋಪಮಾಲಂಕಾರ, ವಾಚಕಲುಪ್ತೋಪಮಾಲಂಕಾರ, ಧರ್ಮಲುಪ್ತೋಪಮಾಲಂಕಾರ, ವಾಚಕಧರ್ಮಲುಪ್ತೋಪಮಾಲಂಕಾರ** ಇತ್ಯಾದಿ **ಲುಪ್ತೋಪಮಾಲಂಕಾರ**ಗಳಿವೆ.

## ಅಭ್ಯಾಸ ಚಟುವಟಿಕೆ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

೧. ಅಲಂಕಾರ ಎಂದರೇನು?

೨. ಉಪಮಾಲಂಕಾರ ಎಂದರೇನು? ನಿದರ್ಶನ ಸಹಿತ ವಿವರಿಸಿ.

೩. ಪೂರ್ಣೋಪಮಾಲಂಕಾರ ಎಂದರೇನು? ವಿವರಣೆ ನೀಡಿ.

## ಪ್ರಾಯೋಗಿಕ ಭಾಷಾಭ್ಯಾಸ

**ಅ. ಕೊಟ್ಟಿರುವ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ ಸಮನ್ವಯ ಮಾಡಿ.**

೧. ಸೀತೆಯ ಮುಖ ಕಮಲದಂತೆ ಅರಳಿತು.

೨. ಗೀಜಗನ ಗೂಡುಗಳು ತೂಗುವ ತೊಟ್ಟಿಲಿನಂತೆ ತೂಗುತ್ತಿದ್ದವು.

**ಆ. 'ಸೋಮೇಶ್ವರ ಶತಕ' ಪದ್ಯದಲ್ಲಿ ಬಂದಿರುವ ಪ್ರಾಸ ಯಾವುದು?**

© KTBS NOT TO BE REPUBLISHED

**ಪಠ್ಯಾಧಾರಿತ ಚಟುವಟಿಕೆ**

**ಕೊಟ್ಟಿರುವ ಪದ್ಯಭಾಗವನ್ನು ಕಂಠಪಾಠ ಮಾಡಿ.**

ಪ್ರಜೆಯಂ ಪಾಲಿಸ ----------------

----------------------------

----------------------------

------------- ಶ್ರೀ ಚೆನ್ನ ಸೋಮೇಶ್ವರ

**ಪೂರಕ ಓದು**

- **ಕನ್ನಡ ಮತ್ತು ಸಂಸ್ಕೃತಿ ಇಲಾಖೆ** ಪ್ರಕಟಿಸಿರುವ ಸಮಗ್ರ ವಚನ ಸಂಪುಟದಲ್ಲಿರುವ ಕೆಲವು ಜನಪ್ರಿಯ ವಚನಗಳನ್ನು ಸಂಗ್ರಹಿಸಿ.
- ಪುಲಿಗೆರೆಯ ಸೋಮನಾಥನ **"ಸೋಮೇಶ್ವರ ಶತಕ"**ವನ್ನು ಓದಿರಿ.

@KTBS NOT TO BE REPUBLISHED

## ಪಠ್ಯ ಪೂರಕ ಅಧ್ಯಯನ

# ೧. ಸಾರ್ಥಕ

– ದಿನಕರ ದೇಸಾಯಿ

ನನ್ನ ದೇಹದ ಬೂದಿ – ಗಾಳಿಯಲಿ ತೂರಿಬಿಡಿ,
ಹೋಗಿ ಬೀಳಲಿ ಭತ್ತ ಬೆಳೆಯುವಲ್ಲಿ:
ಬೂದಿ–ಗೊಬ್ಬರದಿಂದ ತೆನೆಯೊಂದು ನೆಗೆದುಬರೆ,
ಧನ್ಯವಾಯಿತು ಹುಟ್ಟು ಸಾವಿನಲ್ಲಿ

ನನ್ನ ದೇಹದ ಬೂದಿ–ಹೊಳೆಯಲ್ಲಿ ಹರಿಯ ಬಿಡಿ
ತೇಲಿ ಬೀಳಲಿ ಮೀನ ಬಾಯಿಯಲ್ಲಿ;
ಮುಷ್ಟಿ ಬೂದಿಯ ತಿಂದು – ಪುಷ್ಟವಾಗಲು ಮೀನು
ಧನ್ಯವಾಯಿತು ಹುಟ್ಟು ಸಾವಿನಲ್ಲಿ

ನನ್ನ ದೇಹದ ಬೂದಿ–ಕೊಳದಲ್ಲಿ ಬೀಗಿ ಬಿಡಿ
ತಾವರೆಯು ದಿನದಿನವೂ ಅರಳುವಲ್ಲಿ;
ಬೂದಿ ಕೆಸರನು ಕೂಡಿ ಹೊಸ ಪಂಕಜವು ಮೂಡೆ,
ಧನ್ಯವಾಯಿತು ಹುಟ್ಟು ಸಾವಿನಲ್ಲಿ

ಸತ್ತಮೇಲಾದರೂ ದೇಹ ಸೇವೆಗೆ ನಿಲಲಿ,
ಇಂದಿಗೀ ನರಜನ್ಮ ಸೇವೆಯೆಂದು
ತನ್ನ ಸ್ವಾರ್ಥವ ನೆನೆದು ವ್ಯರ್ಥವಾಗಿದೆ ದೇಹ,
ನಿಜಸೇವೆ ಗೈಯಲಿಕೆ ಬರಲಿ ಮುಂದು.

©KTBS NOT TO BE REPUBLISHED

## ಕೃತಿಕಾರರ ಪರಿಚಯ



ಹೊಸಗನ್ನಡ ಸಾಹಿತ್ಯದಲ್ಲಿ **ಚುಟುಕು ಬ್ರಹ್ಮನೆಂದು** ಪ್ರಖ್ಯಾತರಾದವರು ದಿನಕರ ದೇಸಾಯಿಯವರು. **(೧೯೦೯) ಉತ್ತರ ಕನ್ನಡ ಜಿಲ್ಲೆಯ ಅಂಕೋಲ ತಾಲ್ಲೂಕಿನ ಅಲಗೇರಿ ಎಂಬ ಪುಟ್ಟ ಹಳ್ಳಿಯವರು.** ತಂದೆ ದತ್ತಾತ್ರೇಯ ದೇಸಾಯಿ ಶಾಲಾ ಮಾಸ್ತರು. ತಾಯಿ ಅಂಬಿಕಾ. ಮೈಸೂರಿನಲ್ಲಿ ಬಿ.ಎ. ಪದವಿಯನ್ನು ಪಡೆದ ಇವರು ಮುಂಬೈನ ಸೈಂಟ್ ಝೇವಿಯರ್ ಕಾಲೇಜಿನಲ್ಲಿ ಎಂ.ಎ. ಪದವಿಯನ್ನು ಪಡೆದರು. ವಿವಿಧ ಸಂಘಟನೆಗಳ ಸಂಘಟಕರಾಗಿ, ಪತ್ರಿಕಾ ವರದಿಗಾರರಾಗಿ, ಸಂಸದರಾಗಿ ದುಡಿದು ನವೆಂಬರ್ ೬, ೧೯೮೨ ರಲ್ಲಿ ಇಹಲೋಕ ತ್ಯಜಿಸಿದರು. ಇವರ **ಪ್ರಮುಖ ಕೃತಿಗಳು ಹೂಗೊಂಚಲು, ತರುಣರ ದಸರೆ, ಕಡಲ ಕನ್ನಡ, ದಿನಕರನ ಚೌಪದಿ, ನಾಕಂಡ ಪಡುವಣ (ಪ್ರವಾಸ ಸಾಹಿತ್ಯ) ಹೀಗೆ ೧೨ ಕೃತಿ**ಗಳನ್ನು ರಚಿಸಿದ್ದಾರೆ. ಇವರ **ದಿನಕರನ ಚೌಪದಿ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ** ಪುರಸ್ಕಾರ ದೊರೆತಿದೆ.

@KTBS NOT TO BE REPUBLISHED

## ಅಭ್ಯಾಸ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

೧. ಗಾಳಿಯಲ್ಲಿ ಬೂದಿಯನ್ನು ತೂರಿದಾಗ ಎಲ್ಲಿ ಬೀಳುತ್ತದೆ?

೨. ಬೂದಿಯನ್ನು ಹೊಳೆಯಲ್ಲಿ ಹರಿಯಬಿಟ್ಟಾಗ ಯಾರಿಗೆ ಸಿಗುತ್ತದೆ?

೩. ದೇಹ ಏಕೆ ವ್ಯರ್ಥವಾಗಿದೆ?

೪. ಬೂದಿಯನ್ನು ಕೊಳದಲ್ಲಿ ಬಿಡುವುದರಿಂದ ಬದುಕು ಧನ್ಯವಾಗುವುದು ಹೇಗೆ? – ವಿವರಿಸಿ.

೫. ಸಾರ್ಥಕ ಪದ್ಯದ ಯಾವ ಅಂಶಗಳನ್ನು ನೀವು ಮೆಚ್ಚುವಿರಿ?

✦ ✦ ✦ ✦ ✦

# ೨. ಆಹುತಿ

**– ಕೊಡಗಿನ ಗೌರಮ್ಮ**

ನಾನು ಎಂ.ಎ. ಪಾಸಾಗಿದ್ದೆ. ನನ್ನ ತಂದೆತಾಯಿಯವರು ನನಗೆ ಮದುವೆ ಮಾಡಬೇಕೆಂದು ಹೆಣ್ಣು ಹುಡುಕುತ್ತಿದ್ದರು. ಅಂತೂ ಕಡೆಗೆ ಹುಡುಗಿಯೂ ನಿಶ್ಚಯವಾದಳು. ನಮ್ಮ ಮನೆಯಿಂದ ಹನ್ನೆರಡು ಮೈಲಿ ದೂರದಲ್ಲಿದ್ದ ಒಂದು ಹಳ್ಳಿಯಲ್ಲಿ ಅವಳ ಮನೆ. ಅವಳಿಗೂ ತಂದೆ ತಾಯಿ ಇದ್ದರು. ಆದರೆ ಅವರು ಬಹಳ ಬಡವರಂತೆ. ನನಗೇನೋ ಐಶ್ವರ್ಯವಂತರ ಅಳಿಯನಾಗಬೇಕೆಂದು ಬಹಳ ಆಸೆಯಿತ್ತು. ಇಂಗ್ಲೆಂಡಿಗೆ ಹೋಗಿ ಬ್ಯಾರಿಸ್ಟರನಾಗಬೇಕೆಂದು ಬಲವಾದ ಇಚ್ಛೆ. ಇಂಗ್ಲೆಂಡಿಗೆ ಹೋಗಬೇಕಾದರೆ ಹಣಬೇಕು. ನನಗಾಗಿ ತುಂಬಾ ಹಣ ಖರ್ಚು ಮಾಡುವಷ್ಟು ಅನುಕೂಲವು ನನ್ನ ತಂದೆಗಿರಲಿಲ್ಲ. ಐಶ್ವರ್ಯವಂತರ ಅಳಿಯನಾದರೆ ನಾನು ಇಂಗ್ಲೆಂಡಿಗೆ ಸುಲಭವಾಗಿ ಹೋಗಬಹುದಾಗಿತ್ತು. ಆದುದರಿಂದ ಆ ಬಡವರ ಹುಡುಗಿಯನ್ನು ಮದುವೆಯಾಗಲು ನನಗೆ ಮನಸ್ಸಿರಲಿಲ್ಲ.

ನನ್ನ ತಂಗಿ ವಿಜಯ. ಆಕೆಯನ್ನು ನಾನು 'ವಿ' ಎಂದು ಕರೆಯುತ್ತಿದ್ದೆ. ಆಕೆ ಅಣ್ಣಾ 'ಆ ಹುಡುಗಿಯನ್ನು ಮದುವೆಯಾಗಲು ಒಪ್ಪಿಗೆಯೇ ಎಂದು ಅಪ್ಪ ಕೇಳಿದರೆ ಏನು ಎನ್ನುತ್ತಿ' ಎಂದಳು. ನಾನೆಂದೆ 'ನಾನು ಅವಳನ್ನು ನೋಡಿಯೇ ಇಲ್ಲ, ನಾನು ಏನೆಂದು ಉತ್ತರ ಕೊಡಲಿ?' ಆಗ ವಿಜಯ ಎಂದಳು, 'ಅಣ್ಣ ನಾನು ಅವಳನ್ನು ನೋಡಿರುವೆ. ಅವಳು ಎಲ್ಲಾ ತರದಲ್ಲೂ ನಿನಗೆ ಯೋಗ್ಯಳಾಗಿದ್ದಾಳೆ. ಓದು ಬರೆಹ ಗೊತ್ತಿದೆ. ನೋಡುವುದಕ್ಕೆ ಅತಿ ಚೆಲುವೆ'. ನಾನಾಗ ಕೇಳಿದೆ : 'ವರದಕ್ಷಿಣೆ ಎಷ್ಟು ಕೊಡುತ್ತಾರೆ?'

ವಿಜಯ ಹೇಳಿದಳು : 'ಅಣ್ಣ, ಅಪ್ಪನಿಗೆ ವರದಕ್ಷಿಣೆಯನ್ನು ತೆಗೆದುಕೊಳ್ಳಲಿಕ್ಕೆ ಇಷ್ಟ ಇಲ್ಲ. ಅವರು ಬಹಳ ಬಡವರು ಆದರೆ ಹುಡುಗಿ ರತಿದೇವಿಯಂತೆ ಇದ್ದಾಳೆ. ಅವರೇ ಐನೂರು ರೂಪಾಯಿ ಕೊಡುವೆವೆಂದು ಹೇಳಿದ್ದಾರೆ. ಅದನ್ನು ತೆಗೆದು ಕೊಳ್ಳುವುದಕ್ಕೂ ಅಪ್ಪನಿಗೆ ಒಪ್ಪಿಗೆ ಇಲ್ಲ'. ನಾನು ಹೇಳಿದೆ : 'ವಿ, ನನಗೆ ಲಂಡನ್ನಿಗೆ ಹೋಗಿ ಲಾ ಕಲಿಯಬೇಕೆಂದು ಇಚ್ಛೆಯಿದೆ. ಅದಕ್ಕಾಗುವ ಖರ್ಚನ್ನು ಕೊಡುವುದಾದರೆ ಮಾತ್ರ ನಾನು ಆ ಹುಡುಗಿಯನ್ನು ಮದುವೆಯಾಗುತ್ತೇನೆ. ಇಲ್ಲದಿದ್ದರೆ ಇಲ್ಲ' ಆಗ ವಿಜಯ : 'ಅಣ್ಣ, ನೀನು ಎಂ.ಎ. ಪದವೀಧರ, ನಿನ್ನ ಬಾಯಿಂದ ಇಂತಹ ಮಾತು ಹೊರಡಬಹುದೇ? ನಿನ್ನನ್ನು ನೀನು ಮಾರಿಕೊಳ್ಳ ಬಯಸುವಿಯೇಕೆ?' ಎಂದು ಸ್ವಲ್ಪ ಕೋಪದಿಂದಲೇ ಹೇಳಿ ಒಳಗೆ ಹೊರಟುಹೋದಳು.

©KTBS NOT TO BE REPUBLISHED

ಜಪಮಾಡಿ ಹೊರಗೆ ಬಂದು ಕುಳಿತಿದ್ದೆ. ನನ್ನ ತಂದೆಯೂ ಜಪ ತೀರಿಸಿ ಹೊರಗೆ ಬಂದರು. ನೀನು ವಿಜಯಳ ಹತ್ತಿರ ಮುಂದೆ ಓದಿನ ಖರ್ಚಿಗೆ ಹಣ ಕೊಟ್ಟರೆ ಮದುವೆಯಾಗುತ್ತೇನೆ ಎಂದೆಯಂತೆ. ಅವರು ಬಡವರು. ಆರೇಳು ಹೆಣ್ಣು ಮಕ್ಕಳು ಇದ್ದಾರೆ. ಎಲ್ಲಿಂದ ತಾನೆ ಹಣ ತರಬಲ್ಲರು? ಹುಡುಗಿ ಲಕ್ಷಣವಾಗಿದ್ದಾಳೆ. ನೀನು ದೊಡ್ಡವರ ಅಳಿಯನಾಗಿ ಲಂಡನ್ನಿಗೆ ಹೋಗುವುದಕ್ಕೆ ನನಗೆ ಒಪ್ಪಿಗೆ ಇಲ್ಲ. ಈ ಹುಡುಗಿಯನ್ನು ಮದುವೆಯಾದರೆ ಇಲ್ಲೇ ಲಾ ಓದುವ ಖರ್ಚನ್ನು ಹೇಗಾದರು ಮಾಡಿ ನಾನು ಕೊಡುತ್ತೇನೆಂದು ಹೇಳಿ ಒಳಗೆ ಹೊರಟು ಹೋದರು.

ಅಂದಿನ ರಾತ್ರಿ ಎಲ್ಲರೂ ಮಲಗಿದ ಮೇಲೆ ನಾನು ಹೊರಗೆ ಹೊರಟೆ. ನನ್ನ ಮನಸ್ಸು ಸಿಟ್ಟಿನಿಂದ ಚಂಚಲವಾಗಿತ್ತು. ಆ ಹುಡುಗಿಯನ್ನು ಮದುವೆಯಾಗುವ ಇಚ್ಛೆ ನನಗೆ ಸ್ವಲ್ಪವೂ ಇರಲಿಲ್ಲ. ತಂದೆಯಿದಿರು ನಿಂತು ಹಾಗೆ ಹೇಳುವ ಧೈರ್ಯ ನನಗಿರಲಿಲ್ಲ. ಆದುದ–ರಿಂದ ಅಂದಿನ ರಾತ್ರಿಯೇ ಮನೆ ಬಿಟ್ಟುಹೊರಟೆ. ನಮ್ಮ ಹಳ್ಳಿಯಿಂದ ರೈಲ್ವೆ ನಿಲ್ದಾಣಕ್ಕೆ ಬಂದು ರೈಲು ಹೊರಡಲು ಹತ್ತು ನಿಮಿಷವಿದ್ದ ಕಾರಣ ಮದರಾಸಿಗೆ ಒಂದು ಟಿಕೆಟ್ಟನ್ನು ತೆಗೆದುಕೊಂಡು ಒಂದು ಕಂಪಾರ್ಟಮೆಂಟಿನಲ್ಲಿ ಹೋಗಿ ಕುಳಿತೆ. ನಾನು ಕುಳಿತಲ್ಲಿ ಬೇರೆ ಯಾರು ಇರಲಿಲ್ಲ. ಮುಂದೇನು ಗತಿಯೇನೆಂದು ಆಲೋಚಿಸುತ್ತ ಕುಳಿತಿದ್ದಂತೆಯೇ ನಿದ್ರೆ ಬಂದು ಬಿಟ್ಟಿತು. ಏನೋ ಶಬ್ದವಾದಂತಾಗಿ ಕಣ್ಣು ತೆರೆದು ನೋಡಿದೆ. ನನ್ನಿದಿರು ಒಬ್ಬ ಮುದುಕ ಕುಳಿತಿದ್ದನು. ಮುದುಕನಾದರೂ ಹುಡುಗನಂತೆ ಡ್ರೆಸ್ ಮಾಡಿಕೊಂಡಿದ್ದ. ನೋಡಿದ ಕೂಡಲೇ ಮುದುಕನೆಂದು ಗೊತ್ತಾಗುತ್ತಿರಲಿಲ್ಲ. ಅವನು ಹಣವಂತನಾಗಿರಬೇಕೆಂದು ಅವನ ವೇಷಭೂಷಣಗಳಿಂದ ವ್ಯಕ್ತವಾಗುತ್ತಿತ್ತು. ಅವನು ನನ್ನನ್ನೇ ನೋಡುತ್ತಾ ಕುಳಿತಿದ್ದರೂ ಮಾತನಾಡುವಂತೆ ತೋರಲಿಲ್ಲ. ನಾನೇ ಮಾತನಾಡಬೇಕಾಗಿ ಬಂತು. 'ಸ್ವಾಮಿ ದಯಮಾಡಿ ಗಂಟೆ ಎಷ್ಟೆಂದು ಹೇಳುವಿರಾ?' ಎಂದು ಕೇಳಿದೆ. ಅವನು ಕೈಗಡಿಯಾರವನ್ನು ನೋಡಿ 'ಎರಡು ಗಂಟೆಗೆ ಹತ್ತು ನಿಮಿಷವಿದೆ' ಎಂದ. ಆ ಮುದುಕ ತುಂಬಾ ಮಾತುಗಾರ. ಅವನು ಮಾತಿಗೆ ಪ್ರಾರಂಭಿಸಿದ. ಅಂತೂ ಮದರಾಸಿಗೆ ತಲುಪುವಷ್ಟರಲ್ಲೇ ನಾವಿಬ್ಬರೂ ಸ್ನೇಹಿತರಾಗಿಬಿಟ್ಟೆವು.

ಆ ಮುದುಕ ಒಬ್ಬ ರತ್ನದ ವ್ಯಾಪಾರಿ. ನಾನು ಯಾರೆಂದು ಕೇಳಿದ್ದಕ್ಕೆ – ನಾನೊಬ್ಬ ಬಡವರ ಮಗನೆಂದೂ ಎಂ.ಎ. ಪಾಸಾಗಿದೆಯೆಂದೂ ಕೆಲಸ ಹುಡುಕುವ ಸಲುವಾಗಿ ಮದರಾಸಿಗೆ ಹೊರಟಿದ್ದೇನೆಂದೂ ಹೇಳಿದೆ. ಕೆಲಸವೇನು ಸಿಕ್ಕದಿದ್ದರೆ ಬಂದು ತನ್ನನ್ನು ಕಾಣಬೇಕೆಂದು ಹೇಳಿದ. ಅಷ್ಟು ಹೊತ್ತಿಗಾಗಲೇ ಮದರಾಸು ತಲುಪಿದೆವು. ನಾನು ಓದುವಾಗ ವಾಸವಿದ್ದ ವೈ.ಎಂ.ಸಿ.ಎ. ಗೇ ಹೋಗಿ ಅಲ್ಲಿದ್ದ ಸ್ನೇಹಿತರ ಜೊತೆಯಲ್ಲಿ ಉಳಿದೆ.

@KTBS NOT TO BE REPUBLISHED

ಮರುದಿನದಿಂದ ಕೆಲಸ ಹುಡುಕಲು ಪ್ರಾರಂಭಿಸಿ ಎಲ್ಲಿಯೂ ಕೆಲಸ ಸಿಗದೇ ಕೈಯಲ್ಲಿದ್ದ ಕೆಲವು ರೂಪಾಯಿಗಳು ಖರ್ಚಾಗಿದ್ದವು. ಊಟಕ್ಕೆ ತೊಂದರೆಯಾದಾಗ ಬೇರೇನೂ ದಿಕ್ಕು ತೋಚದೇ, ರೈಲಿನಲ್ಲಿ ಸ್ನೇಹಿತನಾದ ಆ ಮುದುಕನ ಮನೆಗೆ ಹೋದೆ. ದೇವರ ದಯೆಯಿಂದ ಅವರು ಮನೆಯಲ್ಲಿದ್ದರು. ಮಾತುಕತೆಯ ಬಳಿಕ ಕೆಲಸ ಸಿಗಲಿಲ್ಲವೆಂದವನಿಗೆ ಗೊತ್ತಾಯಿತು. ಅವನಿಗೊಬ್ಬ ಮಗಳೂ ದೂರ ಸಂಬಂಧದ ಸೊಸೆಯೂ ಇದ್ದರು. ಅವರಿಬ್ಬರಿಗೂ ಪಾಠ ಹೇಳಿಕೊಡಲು ಆಗುತ್ತದೆಯೇ ಎಂದು ನನ್ನನ್ನು ಕೇಳಿದ. ಏನೂ ಕೆಲಸವಿಲ್ಲದ ನನಗೆ ಅದೇ ಬಲು ದೊಡ್ಡ ಕೆಲಸವಾಯಿತು. ಮರುದಿನದಿಂದ ಪಾಠ ಹೇಳಲು ಉಪಕ್ರಮಿಸಿದೆ. ಮಗಳ ಹೆಸರು ಸೀತೆ, ಶಾಂತಿ ಎಂದು ಸೊಸೆಯ ಹೆಸರು.

ನಾನು ಪಾಠ ಹೇಳಲು ಮೊದಲು ಮಾಡಿ ಆರು ತಿಂಗಳುಗಳು ಸಂದಿದ್ದವು. ಹುಡುಗಿಯರಿಬ್ಬರೂ ಚೆನ್ನಾಗಿಯೇ ಪಾಠ ಕಲಿಯುತ್ತಿದ್ದರು. ಆದರೆ, ಶಾಂತಿಯಷ್ಟು ಚುರುಕಾಗಿ ಸೀತೆ ಕಲಿಯುತ್ತಿರಲಿಲ್ಲ. ಶಾಂತಿಯ ಸೌಂದರ್ಯ, ಸೌಂದರ್ಯವನ್ನಾವರಿಸಿದ್ದ ದುಃಖ, ವಿದ್ಯೆಗಳಲ್ಲಿ ಅವಳಿಗಿದ್ದ ಅಭಿರುಚಿ ಮಿತವಾದ ಮಾತು ಇವೆಲ್ಲವೂ ಸೇರಿ ನನ್ನ ಮನಸ್ಸನ್ನು ಅವಳೆಡೆಗೆ ಎಳೆಯತೊಡಗಿದವು. ಅವಳ ತಂದೆ ತಾಯಿಯರು ಅಷ್ಟೇನೂ ಅನುಕೂಲಸ್ಥರಾಗಿರಲಿಲ್ಲ. ಮಗಳ ಮದುವೆಗೆ ಬಹಳ ಪ್ರಯತ್ನ ಮಾಡುತ್ತಿದ್ದರು. ಬಡತನದ ದೆಸೆಯಿಂದ ವರದಕ್ಷಿಣೆ ಕೊಡಲಾರದೆ ಇನ್ನೂ ಮದುವೆಯಾಗಿರಲಿಲ್ಲ. ನನಗಂತು ಯಾವಾಗಲೂ ಶಾಂತಿಯ ಜಪವೇ ಆಯಿತು. ಮದುವೆಯಾದರೆ ಅವಳನ್ನು ಮದುವೆಯಾಗಬೇಕೆನಿಸಿತು; ಅವಳನ್ನು ಮದುವೆಯಾದರೆ ಲಂಡನ್ನಿಗೆ ಹೋಗಲಾಗುತ್ತಿರಲಿಲ್ಲ. ಆದುದರಿಂದ ಅವಳನ್ನು ಮರೆಯಲು ಪ್ರಯತ್ನಿಸತೊಡಗಿದೆ. ಎಷ್ಟೆಷ್ಟೂ ಪ್ರಯತ್ನಿಸಿದರೂ ಅವಳ ಸದ್ಗುಣಗಳು ನನ್ನ ಮನಸ್ಸನ್ನು ಅವಳೆಡೆಗೆ ಎಳೆಯತೊಡಗಿದವು. ನಾನು ಸೀತೆಯನ್ನು ಮದುವೆಯಾಗಬಹುದಿತ್ತು ಎಷ್ಟೋ ಸಾರಿ ಅವಳ ತಂದೆ ನನ್ನನ್ನು ಹಾಸ್ಯಕ್ಕಾಗಿ 'ಅಳಿಯ' ಎಂದು ಕರೆಯುತ್ತಿದ್ದರು. ನಾನು ಅವರ ಅಳಿಯನಾದರೆ ಲಂಡನ್ನಿಗೆ ಹೋಗಬಹುದಿತ್ತು. ಆದರೆ ಎಂದಿನಿಂದ ಶಾಂತಿಯನ್ನು ಪ್ರೀತಿಸತೊಡಗಿದೆನೋ ಅಂದಿನಿಂದ ಹಣಕ್ಕಾಗಿ ಪ್ರೇಮವನ್ನು ಬಲಿಕೊಡಬಾರದೆಂದು ನನ್ನ ಮನಸ್ಸು ಹೇಳುತಲಿತ್ತು.

ಒಂಬತ್ತು ಗಂಟೆಯಾಗಿತ್ತು ನಾನು ಪಾಠದ ಕೋಣೆಯಲ್ಲಿ ಕುಳಿತು ನನ್ನ ಶಿಷ್ಯೆಯರಿಬ್ಬರನ್ನು ಇದಿರು ನೋಡುತ್ತಿದ್ದೆ. ಬಾಗಿಲ ತೆರೆದ ಶಬ್ದವಾಯಿತು. ತೆರೆದ ಬಾಗಿಲಿನಿಂದ ಒಳಗೆ ಹೊಕ್ಕಳು ಸೀತೆ. ಶಾಂತಿಯ ಸುಳಿವಿಲ್ಲ. ಅವಳನ್ನು ಕಾಣದೆ ಮನಸ್ಸಿಗೆ ವಿಷಾದವಾಯಿತು. ಆದರೆ ಕೇಳುವ ಮೊದಲೇ ಅವಳೇ ' ನೋಡಿ ಮೇಷ್ಟ್ರೆ ನಿನ್ನೆ ರಾತ್ರಿಯೇ ಶಾಂತಿಯ ತಂದೆ ಬಂದು

©KTBS NOT TO BE REPUBLISHED

ಅವಳನ್ನು ಊರಿಗೆ ಕರೆದುಕೊಂಡು ಹೋದರು. ಯಾಕೆಂತ ಗೊತ್ತಿದೆಯೇ? ಮದುವೆಗೆ?' ಎಂದಳು.

ಆಗ ನನಗೆ ತಿಳಿಯಿತು. ಶಾಂತಿ ಇಲ್ಲದೆ ನಾನು ಬದುಕಲಾರೆನೆಂದು. ಮೊದಲೇ ಅವಳ ತಂದೆತಾಯಿಯರನ್ನು ಕೇಳದಿದ್ದುದಕ್ಕಾಗಿ ನನ್ನನ್ನು ನಾನೆ ಹಳಿದುಕೊಂಡೆ. ಹಣದಾಸೆಯಿಂದ ನನ್ನ ಜೀವನವನ್ನು ನಾನೇ ಮಣ್ಣುಗೂಡಿಸಿಕೊಂಡ ಮೇಲೆ ಗೊತ್ತಾಯಿತು. ಶಾಂತಿ ವಿಹೀನ ಪ್ರಪಂಚದಲ್ಲಿ ಜೀವಿಸುವುದು ಅಸಾಧ್ಯವೆಂದು. ಶಾಂತಿಯನ್ನು ಕಳೆದುಕೊಂಡು ಅಂದಿನ ದಿನವನ್ನೆಲ್ಲ ಅಶಾಂತಿಯಲ್ಲಿ ಕಳೆದನು. ಮರುದಿನ ಪಾಠದ ಹೊತ್ತಿನಲ್ಲಿ ಸೀತೆ ನನಗೊಂದು ಕಾಗದ ತೋರಿಸಿದಳು. ಶಾಂತಿಯ ಕಾಗದವನ್ನು ಓದಿದೆ. ವರದಕ್ಷಿಣೆಯನ್ನು ಕೊಡಲಾರದ ತಂದೆತಾಯಿಯರು ನಾಲ್ಕು ಜನ ಮೊಮ್ಮಕ್ಕಳಿರುವ ಮುದುಕನ್ನು ಮದುವೆಯಾಗಲಾರದೆ ಆತ್ಮಹತ್ಯೆಮಾಡಿಕೊಂಡದ್ದನ್ನು ಓದಿ, ಶಾಂತಿಯಂತಹ ಸ್ವರ್ಣಪುತ್ಥಳಿಯನ್ನು ಕೊಡುವುದೂ ಅಲ್ಲದೆ ಅವಳೊಡನೆ ವರದಕ್ಷಿಣೆಯನ್ನು ಕೊಡಬೇಕೆಂದು ಕೇಳಿದ ನೀಚನನ್ನು ಶಪಿಸಿದೆ. ಹಿಂದೊಂದು ಬಾರಿ ನಾನು ಬಡವರ ಹುಡುಗಿಯನ್ನು ಮದುವೆಯಾಗಲು ತಿರಸ್ಕರಿಸಿದ್ದುದು ದುಃಖದ ಭರದಲ್ಲಿ ಮರೆತೇ ಹೋಗಿತ್ತು. ವಿಧಿಯನ್ನು ದೂರುವ ಬದಲು ನಾನೇ ನನ್ನ ದುರಾಶೆಯನ್ನು ಬಿಟ್ಟು ಶಾಂತಿಯನ್ನು ಮದುವೆಯಾಗಿದ್ದರೆ ಆ ಮುದ್ದು ಬಾಲೆ ಈಗ ಸುಖವಾಗಿರುತ್ತಿದ್ದಳು. ನನ್ನ ತಪ್ಪಿಗಾಗಿ ನನ್ನನ್ನು ನಾನೆ ಜರಿದುಕೊಂಡೆ. ವರದಕ್ಷಿಣೆ ಎಂಬ ಪಿಶಾಚಿಯು ಅದೆಷ್ಟು ಸುಕುಮಾರಿಯರನ್ನು ಬಲಿ ತೆಗೆದುಕೊಳ್ಳುವುದೋ ದೇವರೇ ಬಲ್ಲ! ಆದರೆ ನನ್ನ ಶಾಂತಿಯನ್ನು ಅದು ಬಲಿತೆಗೆದುಕೊಂಡ ಮೇಲೆ ನನಗದರ ನಿಜಸ್ವರೂಪ ಗೊತ್ತಾಯಿತು.

ಅಂದಿನ ರಾತ್ರಿಯೇ ಊರಿಗೆ ಹೊರಟೆ. ಮರುದಿನ ಬೆಳಗಿನ ಹೊತ್ತಿನಲ್ಲಿ ಮನೆಗೆ ತಲುಪಿದೆ. ನಾನು ಹೋಗುವಾಗ ಅಮ್ಮ ಅಂಗಳ ಸಾರಿಸಿ ರಂಗವಲ್ಲಿ ಇಡುತ್ತಿದ್ದಳು. ನನ್ನ ತಂದೆಯೂ 'ವಿ'ಯೂ ಒಳಗಿದ್ದರು. ಅಮ್ಮನೊಡನೆ ಮಾತನಾಡಿ ಒಳಗೆ ಹೋದೆ. ನಾನು ಅಲ್ಲಿ ನಿಲ್ಲದೆ ನನ್ನ ಕೋಣೆಗೆ ಹೋದೆ. ಅಲ್ಲಿ ವಿಜಯ ಒಂದು ಚಿತ್ರವನ್ನು ನೋಡುತ್ತಾ ನಿಂತಿದ್ದಳು. ನನ್ನನ್ನು ಕಂಡು ಆ ಚಿತ್ರವನ್ನು ಬಚ್ಚಿಟ್ಟಳು. ಆಗವಳು ತಾನು ನೋಡುತ್ತಿದ್ದ ಪೇಪರನ್ನು ನನ್ನೆದುರು ಎಳೆದು – 'ನೋಡುತ್ತಿದ್ದುದು ನೀನು ಕೊಂದ ಹುಡುಗಿಯನ್ನು' ಎಂದಳು. ನನಗೆ ಬಹಳ ಆಶ್ಚರ್ಯವಾಯಿತು. ಪತ್ರಿಕೆಯನ್ನು ಆತುರದಿಂದ ತೆಗೆದು ನೋಡಿದೆ. ಶಾಂತಿಯ ಚಿತ್ರ. – ಅದರ ಕೆಳಗಡೆ ವರದಕ್ಷಿಣೆಗೆ ಆಹುತಿ. ಶಾಂತಿಯೇ ನಾನು ಮೊದಲು ಕೈಬಿಟ್ಟ ಕನ್ಯೆ? ಈಗ . . . . . . ಏನು ಪ್ರಯೋಜನ ! . . . .

©KTBS NOT TO BE REPUBLISHED



## ಕೃತಿಕಾರರ ಪರಿಚಯ

**ಕೊಡಗಿನ ಗೌರಮ್ಮನವರು** ಕನ್ನಡದ ಪ್ರಥಮ ಕತೆಗಾರ್ತಿ ಎಂದು ಹೆಸರಾಗಿದ್ದಾರೆ. ಇವರು **೧೯೧೨ ಮಾರ್ಚ್ ೩ರಂದು ಮಡಿಕೇರಿಯಲ್ಲಿ** ಜನಿಸಿದರು. ಸ್ವಾತಂತ್ರ್ಯ ಆಂದೋಲನದ ಸಂದರ್ಭದಲ್ಲಿ ಮಹಾತ್ಮ ಗಾಂಧೀಜಿಯವರು ಕೊಡಗಿನಲ್ಲಿ ಪ್ರವಾಸ ಕೈಗೊಂಡಾಗ ಅವರನ್ನು ತಮ್ಮ ಮನೆಗೆ ಬರಮಾಡಿಕೊಂಡು ತಮ್ಮ ಆಭರಣಗಳನ್ನೆಲ್ಲ ದಾನ ನೀಡಿದರು. ಗೌರಮ್ಮನವರು ಮಿಸೆಸ್ ಟಿ.ಜಿ. ಕೃಷ್ಣ ಎನ್ನುವ ಹೆಸರಿನಲ್ಲಿ ಕತೆಗಳನ್ನು ಬರೆದಿದ್ದಾರೆ. **ಕಂಬನಿ, ಚಿಗುರು ಹಾಗೂ ಗೌರಮ್ಮನ ಕತೆಗಳು** ಅವರ ಕಥಾ ಸಂಕಲನಗಳು.

## ಅಭ್ಯಾಸ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

೧. ರೈಲಿನಲ್ಲಿ ಸಿಕ್ಕಿದ ಮುದುಕನ ಉದ್ಯೋಗವೇನು?

೨. ಯುವಕನು ರೈಲಿನಲ್ಲಿ ಸಿಕ್ಕಿದ ಮುದುಕನ ಮನೆಗೆ ಏಕೆ ಬಂದನು?

೩. ಮುದುಕನ ಮಗಳು ಮತ್ತು ಸೊಸೆಯ ಹೆಸರೇನು?

೪. ವರದಕ್ಷಿಣೆಯ ಪಿಶಾಚಿ ಯಾರನ್ನು ಬಲಿ ತೆಗೆದುಕೊಂಡಿದೆ?

೫. ಯುವಕನು ಬಡವರ ಹುಡುಗಿಯನ್ನು ಮದುವೆಯಾಗದಿರಲು ಕಾರಣಗಳೇನು?

೬. ಪತ್ರಿಕೆಯನ್ನು ತೋರಿಸಿ ವಿಜಯಳು ಅಣ್ಣನಿಗೆ ಏನು ಹೇಳಿದಳು?

✦ ✦ ✦ ✦ ✦

© KTBS NOT TO BE REPUBLISHED

# ೩. ಮಗಳಿಗೆ ಬರೆದ ಪತ್ರ

**ಮೂಲ : ಜವಾಹರಲಾಲ್ ನೆಹರು**

**ಅನುವಾದ: – ತಿ.ತಾ. ಶರ್ಮ, ಸಿದ್ದನಹಳ್ಳಿ ಕೃಷ್ಣಶರ್ಮ**

ಇಂದಿರಾ ಪ್ರಿಯದರ್ಶಿನಿಗೆ,
ಸೆಂಟ್ರಲ್ ಜೈಲ್, ನೈನಿ.
ಅವಳು ಹುಟ್ಟಿದ ಹಬ್ಬದ ದಿನ
26.10.1930

ನಿನ್ನ ಹುಟ್ಟಿದ ಹಬ್ಬದ ದಿನ ಆಶೀರ್ವಾದಗಳನ್ನು, ಉಡುಗೊರೆಗಳನ್ನು ಪಡೆಯುವುದು ನಿನ್ನ ಅಭ್ಯಾಸ. ಆಶೀರ್ವಾದಗಳಿಗೇನು ಕಡಿಮೆ; ಬೇಕಾದಷ್ಟನ್ನು ಕಳಿಸುತ್ತೇನೆ. ಆದರೆ ನೈನಿ ಸೆರೆಮನೆಯಿಂದ ನಾನು ನಿನಗೇನು ಬಹುಮಾನ ಕಳಿಸಲಿ, ಹೇಳು? ನನ್ನ ಬಹುಮಾನಗಳು ನಿಸ್ಸಾರ, ನಿರ್ಘನ. ಯಕ್ಷಿಣಿಯೋ, ಕಿನ್ನರಿಯೋ ನೀಡುವ – ಕೋಟೆಯ ಗೋಡೆಗಳಂತಿರುವ ಸೆರೆಮನೆಯ ಗೋಡೆಗಳು ಸಹ ತಡೆಯಲಾರದ – ಗಾಳಿಯ, ಮನಸ್ಸಿನ, ನಿರಾಕಾರದ ವಸ್ತುವದು.

ಪ್ರಿಯ! ನೀ ಚೆನ್ನಾಗಿ ಬಲ್ಲೆ; ಉಪದೇಶ ಮಾಡುವುದೆನಗೆ ಇಷ್ಟವಿಲ್ಲ; ಬುದ್ಧಿವಾದ ಕೊಡುವುದೆಂದರೆ ನನಗೆ ಬೇಸರ. ಯಾವಾಗಲಾದರೂ ಹಾಗೆ ಮಾಡಬೇಕೆಂಬಾಸೆಯಾದಾಗಲೆಲ್ಲ ನಾನೆಂದೋ ಓದಿದ "ಬಹಳ ಬುದ್ಧಿವಂತ"ನ ಕತೆ ನೆನಪಿಗೆ ಬರುತ್ತದೆ. ಜ್ಞಾನಾರ್ಜನೆಗಾಗಿ, ವಿವೇಕಸಾಧನೆಗಾಗಿ ಚೀನಾದೇಶದಿಂದ ಪ್ರಯಾಣಿಕನೊಬ್ಬ ಬಂದ ಭರತ ಖಂಡಕ್ಕೆ. ಹಿಯಾನ್‌ತ್ಸಾಂಗ್ ಎಂಬುದವನ ಹೆಸರು. ಉತ್ತರ ಮೇರುಗಿರಿಗಳೇನು, ಮರುಭೂಮಿಗಳೇನು; ಅವುಗಳನ್ನೆಲ್ಲ ದಾಟಿ ಬಂದ; ಅವನ ಜ್ಞಾನದಾಹವಂತಹುದು! ಭಾರತದಲ್ಲವನು ಬಹುಕಾಲವಿದ್ದ; ಇದ್ದಷ್ಟುಕಾಲ ನಲಂದಾ ಎಂಬ ಮಹಾಘಟಿಕಾಸ್ಥಾನದಲ್ಲಿ ತಾನು ಕಲಿತ, ಪರರಿಗೂ ಕಲಿಸಿದ. ನಲಂದಾ ಆಗ ಪಾಟಲೀಪುತ್ರದ ಬಳಿ ಇತ್ತು. ಈಗ ಅದನ್ನು ಪಾಟ್ನಾ ಎಂದು ಕರೆಯುವರು. ಹಿಯಾನ್‌ತ್ಸಾಂಗನು ವಿದ್ಯಾಪಾರಂಗತನಾದ 'ಧರ್ಮಜ್ಞ ಚಕ್ರೇಶ್ವರ' ನೆಂಬ ಬಿರುದನ್ನು ಪಡೆದ. ಅವನು ಆಸೇತು ಹಿಮಾಚಲ ಪ್ರವಾಸಮಾಡಿದ; ದೇಶವನ್ನೆಲ್ಲ ನೋಡಿದ. ಪೂರ್ವಕಾಲದಲ್ಲಿ ಈ ದೇಶದಲ್ಲಿ ವಾಸವಾಗಿದ್ದ ಜೀವನವನ್ನೆಲ್ಲ ಗ್ರಹಿಸಿದ. ಆಮೇಲೆ ತನ್ನ ಪ್ರವಾಸ ಕುರಿತೊಂದು

@KTBS NOT TO BE REPUBLISHED

ಪುಸ್ತಕವನ್ನು ಬರೆದ. ನನ್ನ ಮನಸ್ಸಿಗೆ ಬಂದ ಕತೆ ಈ ಪುಸ್ತಕದಲ್ಲಿದೆ. ದಕ್ಷಿಣ ದೇಶದಿಂದ ಕರ್ಣಸುವರ್ಣವೆಂಬ ನಗರಕ್ಕೆ ಒಬ್ಬ ಬಂದನಂತೆ, ಬಿಹಾರದಲ್ಲಿ ಈಗ ಭಾಗಲ್ಪುರವೆಂಬ ಊರಿದೆಯಲ್ಲ; ಅದರ ಬಳಿ ಇತ್ತಂತೆ ನಗರ. ಈ ಮನುಷ್ಯ ತನ್ನ ನಡುವಿಗೆ ತಾಮ್ರದ ಹಲಗೆಗಳನ್ನು ಬಿಗಿದಿದ್ದನಂತೆ. ತಲೆಯ ಮೇಲೊಂದು ಉರಿಯುವ ಪಂಜನ್ನು ಹೊತ್ತಿದ್ದನಂತೆ. ಶೋಭಾಯಮಾನವಾದ ಮುಖಮುದ್ರೆ, ಗಂಭೀರವಾದ ಗತಿ; ಕೈಲಿ ಕಟ್ಟಿಗೆ ಹಿಡಿದು, ಈ ವಿಚಿತ್ರ ವೇಷಧಾರಿ ಲೋಕಸಂಚಾರ ಮಾಡುತ್ತಿದ್ದಾನೆ. 'ಇದೇನು ವೇಷ'ವೆಂದು ಯಾರಾದರೂ ಕೇಳಿದರೆ "ನನ್ನ ಜ್ಞಾನವಷ್ಟಿದೆ. ಈ ತಾಮ್ರದ ರೇಕುಗಳನ್ನು ಬಿಗಿಸದೆಹೋದೆನಾದರೆ ನನ್ನ ಹೊಟ್ಟೆ ಬಿರಿದೀತು. ನನ್ನ ಸುತ್ತ ಸುಳಿವ ಅಜ್ಞಾನಿಗಳ ಕಂಡೆನಗೆ 'ಅಯ್ಯೋ' ಅನಿಸುತ್ತದೆ. ಅವರೆಲ್ಲ ಕತ್ತಲೆಯಲ್ಲಿ ತಡವಿ ಆಡುತ್ತಿದ್ದಾರೆ. ಅವರಿಗಾಗಿ ನಾ ನನ್ನ ನೆತ್ತಿಯ ಮೇಲೆ ದೀಪ ಹೊತ್ತಿದ್ದೇನೆ" ಅನ್ನುವನು.

ಈ ಲೋಕ ವಿಸ್ತಾರ. ನಮ್ಮ ಈ ಲೋಕದಿಂದಾಚೆ ಅತ್ಯಾಶ್ಚರ್ಯಕರವಾದ, ದೃಗ್ಗೋಚರವಲ್ಲದ ಲೋಕಗಳೆಷ್ಟೋ. ಅಹಂಕಾರಿಯಂತೆ ನಾವೆಲ್ಲ ಜ್ಞಾನಭಂಡಾರಗಳು, ನಾವು ತಿಳಿದುಕೊಳ್ಳ ಬೇಕಾದದ್ದೇನೂ ಇಲ್ಲವೆಂಬ ಭಯದ ಕಲ್ಪನೆಗೆ ಕಾರಣವಿಲ್ಲ. ಅಂತಹವರು ಹೊಸ ವಿಷಯಗಳನ್ನು ತಿಳಿದುಕೊಳ್ಳುವುದರಿಂದಾಗುವ, ಶೋಧನೆಯಿಂದಾಗುವ ಆನಂದವನ್ನೇನು ಬಲ್ಲರು? ಆ ಮಹಾ ಸಾಹಸದ ಸುಖ ಅವರಿಗೇನು ಗೊತ್ತು?

ನೀನು ಹುಟ್ಟಿದ್ದು 1917ನೆಯ ವರ್ಷ. ಇತಿಹಾಸದೊಳಗದು ಮಹಾ ವರ್ಷ. ಆ ವರ್ಷ ಮಹಾನಾಯಕನೊಬ್ಬ ಬಂದ. ಬಡವರೆಂದರೆ, ನೋವು ತಿನ್ನುವವರೆಂದರೆ ಆತನ ಹೃದಯ ಪೂರ್ಣ ಪ್ರೇಮಪಾತ್ರ. ಆತನ ಸಹಾನುಭೂತಿ ಅತ್ಯಪೂರ್ವ. ಆತ ಬಂದು ತನ್ನ ಜನರಿಗೆಲ್ಲ "ಇತಿಹಾಸದಲ್ಲಿ ಉತ್ಕೃಷ್ಟವೂ, ಆಚಂದ್ರಾರ್ಕಸ್ಥಾಯಿಯೂ ಆದ ಅಧ್ಯಾಯವನ್ನು ಬರೆಯಿರಿ" ಎಂದು ಹೇಳಿ ಅವರ ಕೈಯಿಂದ ಬರೆಯಿಸಿದ. ನೀನು ಹುಟ್ಟಿದ ತಿಂಗಳಲ್ಲೇ ಲೆನಿನ್ ಮಹಾವಿಪ್ಲವ ಕಾರ್ಯವನ್ನಾರಂಭಿಸಿದ್ದು; ಆರಂಭಿಸಿ ರಷ್ಯಾ ಸೈಬೀರಿಯಾ ದೇಶಗಳ ರೂಪುರೇಖೆಗಳನ್ನೇ ಪರಿವರ್ತನಗೊಳಿಸಿಬಿಟ್ಟ. ಇಂದು ಭಾರತದಲ್ಲಿ ಮತ್ತೊಬ್ಬ ಮಹಾನಾಯಕ ಬಂದ; ಕಷ್ಟನಿಷ್ಠುರಗಳಿಗೆ ಸಿಕ್ಕಿದವರೆಂದರೆ ಆತನ ಪ್ರೇಮ ಅಪಾರ; ಅವರಿಗೆ ಸಹಾಯಮಾಡಲು ಉಗ್ರ ಆವೇಶದ ಆತುರ ಅವನಿಗೆ. ಆತ ನಮ್ಮ ಜನರಿಗೆಲ್ಲ ಮಹಾತ್ಕಾರ್ಯ ಸಾಧನೆಮಾಡಲೂ, ಗಂಭೀರ ಬಲಿದಾನಮಾಡಲು ಸ್ಫೂರ್ತಿಕೊಡುತ್ತಿದ್ದಾನೆ, ಬಲಿದಾನ ಮಾಡಿ

NOT TO BE REPUBLISHED @KTBS

ನಾವು ಸ್ವಾತಂತ್ರ್ಯ ಪಡೆಯಬೇಕು, ಹಸಿವಿನಿಂದ ಕೊರಗುತ್ತಿರುವವರು, ಬಡವರು, ಅನ್ಯಾಯಕ್ಕೆ ತುತ್ತಾದವರೇ ಮೊದಲಾದವರ ದುಃಖದ ಭಾರವಿಳಿಸಬೇಕು; ಇದು ಆತನಾಸೆ. ಬಾಪೂಜಿ ಈಗ ಸೆರೆಮನೆಯಲ್ಲಿದ್ದಾರೆ. ಆದರೇನು? ಅವರ ಸಂದೇಶದ ಯಕ್ಷಿಣಿಯು ಕೋಟ್ಯನುಕೋಟಿ ಭಾರತೀಯರ ಹೃದಯಗಳನ್ನು ಸೂರೆಗೊಂಡಿದೆ. ಗಂಡಸರು, ಹೆಂಗಸರು, ಮಕ್ಕಳು ಸಹ ತಮ್ಮ ಮುರುಕು ಗುಡಿಸಲುಗಳಿಂದ ಹೊರಬಿದ್ದು ಸ್ವಾತಂತ್ರ್ಯ ಸೈನಿಕರಾಗಿದ್ದಾರೆ. ಭಾರತದಲ್ಲಿ ನಾವಿಂದು ಚರಿತ್ರೆಯನ್ನು ನಿರ್ಮಿಸುತ್ತಿದ್ದೇವೆ. ನಾನು ನೀನು ಎಂಥಹ ಭಾಗ್ಯಶಾಲಿಗಳು, ನಡೆಯುತ್ತಿರುವುದನ್ನೆಲ್ಲ ನಮ್ಮ ಕಣ್ಣಾರೆ ನೋಡುತ್ತಿದ್ದೇವೆ. ಈ ಮಹಾನಾಟಕದಲ್ಲಿ ನಾನು ಸಹ ಕೊಂಚ ಪಾತ್ರವಹಿಸುತ್ತಿದ್ದೇನೆ. ಈ ಮಹೋದ್ಯಮದಲ್ಲಿ ಯಾವುದೇ ಪಾತ್ರ ದೊರೆ–ಯಲಿ ಅಪಕೀರ್ತಿ ಬರುವಂಥಹ ಕಾರ್ಯವೊಂದನ್ನು, ಜನರಿಗೆ ಅವಮಾನವಾಗುವಂತಹ ಕೆಲಸವೊಂದನ್ನು ನಾವು ಮಾಡಲಾಗದು. ನಾವು ಭಾರತದ ಯೋಧರೆನಿಸುವುದಾದರೆ, ಭಾರತದ ಮಾನ ಮರ್ಯಾದೆ ನಮ್ಮ ಕೈಯಲ್ಲಿದೆ; ಆ ಮಾನ ಮರ್ಯಾದೆಯೂ ಪವಿತ್ರವಾದ ಧರ್ಮಸ್ಥೇಯ.

ಸರಿ ಯಾವುದು, ತಪ್ಪು ಯಾವುದೆಂದು ನಿರ್ಣಯಮಾಡುವುದು ಸುಲಭವಲ್ಲ. ನೀನು ರಹಸ್ಯದಲ್ಲಿ ಒಂದನ್ನೂ ಮಾಡಬೇಡ; ಮರೆಮಾಡಬೇಕೆಂದೆನಿಸುವ ಯಾವ ಕಾರ್ಯಕ್ಕೂ ಕೈಹಾಕಬೇಡ. ತೆರೆಯಮರೆಯಲ್ಲಿ ಕೆಲಸಮಾಡಬೇಕೆಂದು ನಿನಗೆ ಅನಿಸಿದರೆ ಭಯವಿದೆ ಎಂದರ್ಥ. ಭಯವು ಒಳ್ಳೆಯದಲ್ಲ; ನಿನಗೆ ಯೋಗ್ಯವಾದುದ್ದಲ್ಲ. ನಿರ್ಭಯವಾಗಿರು, ಆಗಬೇಕಾದುದ್ದೆಲ್ಲ ಆಗುತ್ತದೆ; ನಡೆಯಬೇಕಾದುದ್ದೆಲ್ಲ ನಡೆಯುತ್ತದೆ. ನೀನು ಧೈರ್ಯಶಾಲಿಯಾದರೆ ನಿನಗೆ ಭಯವಾಗುವುದಿಲ್ಲ. ತಲೆತಗ್ಗಿಸುವಂಥ ಕೆಲಸ ಮಾಡುವುದಿಲ್ಲ. ರಹಸ್ಯದಲ್ಲಿ ಒಂದು ಕೆಲಸವೂ ಬೇಡ; ಕಣ್ಮರೆಯ ಕೆಲಸ ಬೇಡವೇಬೇಡ. ಏಕಾಂತವಿರಲಿ, ಇರಬೇಕು; ಏಕಾಂತಕ್ಕೂ ರಹಸ್ಯಕ್ಕೂ ವ್ಯತ್ಯಾಸವಿದೆ. ಪ್ರಿಯಾ! ನೀನು ಹಾಗೇ ಮಾಡಿದ್ದಾದರೆ ನೀನು ಜ್ಯೋತಿಯ ಮಗುವೆನಿಸುವೆ. ಏನೇ ಬಂದೊದಗಲಿ ನಿರ್ಭಯಳೆನಿಸುವೆ, ನಿರ್ಮಲೆ ಎನಿಸುವೆ, ನಿಶ್ಚಲಳೆನಿಸುವೆ. ಮಗೂ, ಇಂದಿಗಿಷ್ಟು ಸಾಕು. ನೀನು ದೊಡ್ಡವಳಾಗಿ ವೀರರಮಣಿಯೆನಿಸು; ಭಾರತಮಾತೆಯ ಸೇವೆ ಸಲಿಸು. ಪೂರ್ಣವಾತ್ಸಲ್ಯದಿಂದ ಹರಸುವೆನು.

© KTBS NOT TO BE REPUBLISHED



## ಕೃತಿಕಾರರ ಪರಿಚಯ

ಭಾರತದ ಪ್ರಥಮ ಪ್ರಧಾನಿಗಳಾದ ಜವಾಹರಲಾಲ್ ನೆಹರುರವರು ತಮ್ಮ **"ಗ್ಲಿಂಪ್ಸಸ್ ಆಫ್ ವರ್ಲ್ಡ್ ಹಿಸ್ಟ್ರಿ"** (Glimpses of world History) ಎಂಬ ಕೃತಿಯನ್ನು ಭಾರತದ ಸ್ವಾತಂತ್ರ್ಯದ ಹೋರಾಟದ ಕಾಲದಲ್ಲಿ ಬಂಧಿಯಾಗಿ ಬೇರೆಬೇರೆ ಸೆರೆಮನೆಗಳಲ್ಲಿ ವಾಸಮಾಡುವ ಸಂದರ್ಭದಲ್ಲಿ ತಮ್ಮ ಮಗಳಿಗೆ ಪತ್ರರೂಪದಲ್ಲಿ ಪ್ರಪಂಚದ ಇತಿಹಾಸ ಹಾಗೂ ಮಹಾನ್ ನಾಯಕರ ಪರಿಚಯವನ್ನು ಮಾಡಿಕೊಡುವ ಪ್ರಯತ್ನವಿದು. ಈ ಎಲ್ಲಾ ಪತ್ರಗಳನ್ನು ಸಂಗ್ರಹಿಸಿದ ಇವರ ತಂಗಿ ವಿಜಯಲಕ್ಷ್ಮಿ ಪಂಡಿತ್‌ರವರು ಪುಸ್ತಕರೂಪದಲ್ಲಿ ಪ್ರಕಟಿಸಿದರು. ಈ ಕೃತಿಯನ್ನು ತಿರುಮಲೆ ತಾತಾಚಾರ್ಯ ಶರ್ಮ ಅವರು ಹಾಗೂ ಸಿದ್ಧವನಹಳ್ಳಿ ಕೃಷ್ಣಶರ್ಮರವರು **"ಜಗತ್ ಕಥಾವಲ್ಲರಿ"** ಎಂಬ ಕೃತಿಯಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ.

©KTBS NOT TO BE REPUBLISHED

## ಅಭ್ಯಾಸ

**ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

೧. ಈ ಪತ್ರವನ್ನು ನೆಹರುರವರು ಯಾರಿಗೆ ಬರೆದಿದ್ದಾರೆ?

೨. ಹೂಯಾನ್‌ತ್ಸಾಂಗ್ ಭರತಖಂಡಕ್ಕೆ ಏಕೆ ಬಂದನು?

೩. ನಲಂದ ವಿಶ್ವವಿದ್ಯಾನಿಲಯವು ಎಲ್ಲಿತ್ತು?

೪. ದಕ್ಷಿಣ ದೇಶದಿಂದ ಬಂದ ಯಾತ್ರಿಕ ಅವನ ವೇಷದ ಬಗ್ಗೆ ಏನು ಹೇಳುತ್ತಿದ್ದನು?

೫. ಬಾಪೂಜಿಯವರ ವ್ಯಕ್ತಿತ್ವದ ಬಗ್ಗೆ ನೆಹರೂರವರು ಏನು ಹೇಳಿದ್ದಾರೆ?

೬. ತೆರೆಮರೆಯಲ್ಲಿ ಕೆಲಸ ಮಾಡಿದರೆ ಯಾವ ಅರ್ಥ ಬರುತ್ತದೆ?